ಸಂಪುಟ: 14 Volume | ಸಂಚಿಕೆ: 15 Issue | ಪುಟಗಳು 08 Pages | ಶುಕ್ರವಾರ 17 ಏಪ್ರಿಲ್ 2026 | ₹4 | PRGINO.120927 (RNINO: KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಬೆಳಗು

ಅನ್ಯರನ್ನು ಆಳು ಮಾಡದೆ,
ತನ್ನ ತಾನಾಳಿದರೆ ಅದೇ
ಬಿಡುಗಡೆ.

–ದ.ರಾ.ಬೇಂದ್ರೆ

ಭರವಸೆ ಕೊಟ್ಟು ಮರೆತ ಸರ್ಕಾರ 6

ಸ್ವಯಂ ಗಣತಿಯಲ್ಲಿ ಬಾಗಲಕೋಟೆ 3ನೇ ಸ್ಥಾನ 7

ಪಶ್ಚಿಮಘಟ್ಟ: ಜೀವನಾಡಿಯಾಗಿ ನೋಡಬೇಕು 8

ಬೀದರ್: ಮಲ್ಲಮ್ಮ ನುಡಿ ಪತ್ರಿಕೆಯು ಹೊರತಂದ ಯುಗಾದಿ ವಿಶೇಷಾಂಕವನ್ನು ರೆಡ್ಡಿ ಸಮಾಜದ ಜಿಲ್ಲಾ ಅಧ್ಯಕ್ಷ ಶಂಕರರೆಡ್ಡಿ ಚಿಟ್ಟಾ ರವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಯುವ ನಾಯಕ ಮಹೇಶ ಚಿಂತಾಮಣಿ. ಸೇರಿದಂತೆ ಇತರರಿದ್ದರು.

ಲೈಂಗಿಕ ದೌರ್ಜನ್ಯ, ಜೈಲು ಸಜೆ

ಕಲಬುರಗಿ: ವಾಡಿ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ವ್ಯಕ್ತಿಗೆ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 20 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 1.25 ಲಕ್ಷ ರೂ ದಂಡ ವಿಧಿಸಿದೆ. ಮಲರಾಜ ಬಾಬು ನಾಯ್ಕೋಡಿ ಶಿಕ್ಷೆಗೊಳಗಾದವ. ಅಪ್ರಾಪ್ತೆಯನ್ನು ಬಲವಂತವಾಗಿ ಬೆಂಗಳೂರಿಗೆ ಕರೆದು ಕೊಂಡು ಹೋಗಿ ಮದುವೆಯಾಗುತ್ತೇನೆ ಎಂದು ನಂಬಿಸಿ ತುಮಕೂಕು ತಾಲೂಕಿನ ಗ್ರಾಮವೊಂದರ ಹೊಲದಲ್ಲಿ ಅಕ್ರಮ ಬಂಧನದಲ್ಲಿಟ್ಟು ಲೈಂಗಿಕ ದೌರ್ಜನ್ಯ ಎಸಗಿದ್ದನು. ಈ ಕುರಿತು ವಾಡಿ ಠಾಣೆಯಲ್ಲಿ ದೂರು ದಾಖಲಾಗಿ ಪೊಲೀಸರು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಪ್ರಾದೇಶಿಕ ಮಟ್ಟದ ಚಾಂಪಿಯನ್

ಕಲಬುರಗಿ: ಜಾಗತಿಕ ಮಟ್ಟದ ಐಟಿ ಸೇವೆಗಳ ಮತ್ತು ಬೋರ್ಡ್ ಫಾರ್ ಐಟಿ ಎಜುಕೇಶನ್ ಸ್ಟ್ಯಾಂಡರ್ಡ್ಸ್ ಆಯೋಜಿಸಿದ್ದ ಕಲಬುರಗಿ ವಲಯದ ಟಿಸಿಎಸ್ ಟೆಕ್ ಬೈಟ್ಸ್ ಐಟಿ ರಸಪ್ರಶ್ನೆ ಸ್ಪರ್ಧೆಯಲ್ಲಿ ರಾಯಚೂರಿನ ಎಸ್‌ಎಂವಿಸಿಇ ಕಾಲೇಜು ತಂಡವು ಜಯ ಗಳಿಸಿದೆ. ಶರಣಬಸವ ವಿಶ್ವವಿದ್ಯಾಲಯದಲ್ಲಿ ನಡೆದ ರೋಚಕ ಹಣಾಹಣಿಯಲ್ಲಿ ರಾಯಚೂರಿನ ಸರ್ ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಆಕಾಶ್ ಕುರ್ಬಾರ್, ವಿನೋದ್ ಕುಮಾರ್ ಪ್ರಥಮ ಸ್ಥಾನ ಪಡೆದು ಪ್ರಾದೇಶಿಕ ಮಟ್ಟದ ಚಾಂಪಿಯನ್‌ಗಳಾಗಿದ್ದಾರೆ.

ಫ್ಲೈಓವರ್ ಕೆಳಭಾಗ ಅಭಿವೃದ್ಧಿ

ಬೆಂಗಳೂರು: ಪೂರ್ವ ನಗರ ಪಾಲಿಕೆಯ ವತಿಯಿಂದ ಬೆಳ್ಳಂದೂರು ಫ್ಲೈಓವರ್ ಕೆಳಭಾಗದ ಸ್ಥಳವನ್ನು ಇಂಟೆಲ್ ಇಂಡಿಯಾ ಕಂಪನಿ ಸಿ.ಎಸ್.ಆರ್ ಅನುದಾನದಡಿ ಹಾಗೂ ರೈಸಿಂಗ್ ಇಂಡಿಯಾ ಟ್ರಸ್ಟ್ ವಿನ್ಯಾಸದೊಂದಿಗೆ ಅಭಿವೃದ್ಧಿ ಪಡಿಸಿದೆ.ಬಿಇಸಿಸಿ ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಉದ್ಘಾಟಿಸಿದ್ದು, ಸಿಎಸ್‌ಆರ್ ನಿಧಿಯಡಿ ಅಂಡರ್‌ಪಾಸ್ ಪ್ರದೇಶವನ್ನು ಸ್ವಚ್ಛ, ಆಕರ್ಷಕ,ಸಾರ್ವಜನಿಕರಿಗೆ ಉಪಯುಕ್ತವಾದ ವಿಶ್ರಾಂತಿ ಸ್ಥಳವನ್ನಾಗಿ ರೂಪಿಸಲಾಗಿದೆ ಎಂದು ಅಪರ ಆಯುಕ್ತರು ತಿಳಿಸಿದ್ದಾರೆ.

ಕಾಂಗ್ರೆಸ್ ಅಪಸ್ವರ ಎತ್ತಿದರೆ, ಎಚ್ಚರ..!

- **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಮಹಿಳಾ ಮೀಸಲಾತಿ ಮಸೂದೆಗಾಗಿ ಸಂಸತ್ತಿನ ವಿಶೇಷ ಅಧಿವೇಶನ ನಡೆಯುತ್ತಿದೆ. ಮಹಿಳೆಯರಿಗೂ ಕಾನೂನು ರಚನೆಗೆ ಸಮಾನ ಅವಕಾಶ ಸಿಗಲಿದೆ. ಇದಕ್ಕೆ ವಿರೋಧಪಕ್ಷ ಕಾಂಗ್ರೆಸ್ ಬೆಂಬಲ ನೀಡಲಿದೆ ಎಂಬ ವಿಶ್ವಾಸವಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದರು. ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರು ದೇಶದಲ್ಲಿ ಸರ್ವರಿಗೂ ಸಮಾನ ಹಕ್ಕು ಇರಬೇಕು, ಸಮಾನ ಅವಕಾಶ ಸಿಗಬೇಕು ಎಂದು ಬಯಸಿದ್ದರು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದೂ ಹೇಳಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರು ಬಾಬಾ ಸಾಹೇಬರ ಚಿಂತನೆಗೆ ಶಕ್ತಿ ಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ಈ ಹಿಂದೆ ಮಹಿಳೆಯರಿಗೆ ಅವಕಾಶ, ಅಧಿಕಾರ ಮತ್ತು ಸಮಾನ ಹಕ್ಕು ಕೊಡುವಲ್ಲಿ ಬಾಯಿ ಮಾತಿನ ಭಾಷಣ ಇತ್ತೇ ಹೊರತು ಹೃದಯವಂತಿಕೆ ಇರಲಿಲ್ಲ. ಆದರೆ ನಾರಿ ಶಕ್ತಿ ಹೆಸರಿನಲ್ಲಿ ಪ್ರಧಾನಿ ಸಂಸತ್ತಿನ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಸಂರಕ್ಷಿತ ಅರಣ್ಯ ಪ್ರದೇಶಕ್ಕಾಗಿ ವಿಶೇಷ ಸಭೆ

- **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಕಲ್ಬುರ್ಗಿ ಜಿಲ್ಲೆ, ಚಿತ್ತಾಪೂರ ತಾಲೂಕಿನ ಅಲ್ಲೂರು (ಬಿ) ಗ್ರಾಮದ 2877 ಎಕರೆ ಅರಣ್ಯವನ್ನು ಸಂರಕ್ಷಿತ ಮೀಸಲು ಎಂದು ಘೋಷಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ನೇತೃತ್ವದಲ್ಲಿ ನಡೆದ ಕರ್ನಾಟಕ ವನ್ಯಜೀವಿ ಮಂಡಳಿಯ 6ನೇ ಸಭೆಯಲ್ಲಿಂದು ನಿರ್ಧರಿಸಲಾಗಿದೆ.

ಬೆಟ್ಟ ಗುಡ್ಡಗಳಿಂದ ಕೂಡಿದ, ಹಚ್ಚಹಸಿರಿನ ರಮಣೀಯವಾದ ಈ ಅರಣ್ಯ ಪ್ರದೇಶ ಚಿರತೆ, ಕಾಡುಹಂದಿ, ಜಿಂಕೆ, ಕಾಡುಕುರಿ, ಕಾಡುಬೆಕ್ಕು, ಚಿಪ್ಪುಹಂದಿ, ನರಿ ಮೊದಲಾದ ವನ್ಯಜೀವಿಗಳ ಆವಾಸಸ್ಥಾನವಾಗಿದ್ದು, ಈ ಪ್ರದೇಶವನ್ನು ಸಂರಕ್ಷಿತ ಮೀಸಲು ಎಂದು ಘೋಷಿಸಲು ಯೋಗ್ಯವಾಗಿದೆ ಎಂದು ಸಭೆ ತೀರ್ಮಾನಿಸಿತು. ಇದಕ್ಕೂ ಮುನ್ನ ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ಕಲಂ 36 ಎ ರೀತ್ಯ ಸ್ಥಳೀಯ ಗ್ರಾಮಪಂಚಾಯ್ತಿಯ ವಿಶೇಷ ಗ್ರಾಮಸಭೆಯಲ್ಲಿಯೂ ಈ ಬಗ್ಗೆ ಚರ್ಚಿಸಿ, ಸಂರಕ್ಷಿತ ಮೀಸಲು ಎಂದು ಘೋಷಿಸಲು ಸಮ್ಮತಿ ಪಡೆಯಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಮೂರು ಮಸೂದೆ ಮಂಡನೆ

ಮಹಿಳಾ ಮೀಸಲು | ಕೇಂದ್ರಾಡಳಿತ ಪ್ರದೇಶಗಳ ಕಾನೂನು | ಕ್ಷೇತ್ರ ಪುನರ್ವಿಂಗಡಣೆ ಕುರಿತ ಮಸೂದೆ

- **ಮಲ್ಲಮ್ಮ ನುಡಿ ವಾರ್ತೆ ನವದೆಹಲಿ**

ಮಹಿಳಾ ಮೀಸಲಾತಿ, ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು ಮತ್ತು ಕ್ಷೇತ್ರ ಪುನರ್ವಿಂಗಡಣೆ ಕುರಿತ ಐತಿಹಾಸಿಕ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ. ಮಸೂದೆ ಪರವಾಗಿ 251 ಸಂಸದರು ಮತ ಚಲಾಯಿಸಿದರೆ, 185 ಸಂಸದರು ವಿರೋಧ ವ್ಯಕ್ತ ಪಡಿಸಿದ್ದಾರೆ.

ಸಂಸತ್‌ನಲ್ಲಿ ಅಂಗೀಕರಿಸಬೇಕು: ಇಂದು ಸಂಜೆ 4 ಗಂಟೆಗೆ ಮಸೂದೆಗಳ ಮೇಲೆ ಮತದಾನ ನಡೆಯಲಿದೆ. ಸಂಸತ್‌ನ ರಾಜ್ಯಸಭೆ, ಲೋಕಸಭೆಯಲ್ಲಿ ಮಸೂದೆಗಳನ್ನು ಮೂರನೇ ಎರಡರಷ್ಟು ಬಹುಮತದಿಂದ ಅಂಗೀಕರಿಸಬೇಕು. ಲೋಕಸಭೆಯ ಒಟ್ಟು 540 ಸ್ಥಾನಗಳ ಪೈಕಿ ಬಿಜೆಪಿ ನೇತೃತ್ವದ ಎನ್‌ಡಿಎ 293 ಸದಸ್ಯರನ್ನು ಹೊಂದಿದ್ದು, ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ 231 ಸದಸ್ಯರನ್ನು ಹೊಂದಿದೆ.

12 ಗಂಟೆ ಸಮಯ ನಿಗದಿ: ಮಸೂದೆಗಳ ಬಗ್ಗೆ ಲೋಕಸಭೆಯಲ್ಲಿ ಚರ್ಚೆ ನಡೆದಿದೆ. ಸ್ಪೀಕರ್ ಅವರು ಒಟ್ಟು 12 ಗಂಟೆಗಳ ಚರ್ಚೆಗೆ ಸಮಯವನ್ನು ನಿಗದಿಪಡಿಸಿದ್ದಾರೆ. ಪ್ರಧಾನಿ ಮೋದಿ, ಗೃಹಸಚಿವ ಅಮಿತ್ ಶಾ, ಪ್ರತಿಪಕ್ಷದ ನಾಯಕ ರಾಹುಲ್‌ಗಾಂಧಿ ಸೇರಿದಂತೆ ಅನೇಕರು ಮಾತನಾಡಲಿದ್ದಾರೆ. ಚರ್ಚೆಯ ಬಳಿಕ ಉಭಯಸದನಗಳಲ್ಲಿ ಮಸೂದೆ ಮೇಲೆ ಮತದಾನ ನಡೆಯಲಿದೆ.

ಮಸೂದೆ ಅಂಗೀಕಾರ ಆಗುವುದು ಹೇಗೆ?

ಮೂರು ಮಸೂದೆಗಳು ಒಪ್ಪಿಗೆಯಾಗಲು ಲೋಕಸಭೆಯಲ್ಲಿ 360 ಸದಸ್ಯರ ಬೆಂಬಲ ಬೇಕು. ರಾಜ್ಯಸಭೆಯ 245 ಸ್ಥಾನ ಪೈಕಿ ಎನ್‌ಡಿಎ 134, ಇಂಡಿಯಾ ಮೈತ್ರಿಕೂಟ 74, ಇತರರು 37 ಸದಸ್ಯರಿದ್ದು, ಇಲ್ಲಿ ಮೂರನೇ ಎರಡರಷ್ಟು ಬಹುಮತ ಬೇಕು. ಮಸೂದೆ ಪಾಸ್ ಆಗಲು 163 ಸದಸ್ಯರ ಬೆಂಬಲ ಅಗತ್ಯ. ಸಂಸತ್‌ನಲ್ಲಿ 293, ರಾಜ್ಯಸಭೆಯಲ್ಲಿ 134 ಸದಸ್ಯರ ಎನ್‌ಡಿಎ ಮಸೂದೆ ಅಂಗೀಕಾರಕ್ಕೆ ಉಳಿದಿರುವ ಸದಸ್ಯರ ಬೆಂಬಲ ಹೇಗೆ..?

ಐದು ರಾಜ್ಯಗಳ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಆತುರಾತುರವಾಗಿ ಮಸೂದೆಯನ್ನು ಏಕೆ ಮಂಡನೆ ಮಾಡುತ್ತಿದೆ? ನಾವು ಮಹಿಳಾ ಮೀಸಲಾತಿ ಮಸೂದೆಗೆ ವಿರೋದಿಸಲ್ಲ. ಆದರೆ ಕ್ಷೇತ್ರ ಪುನರ್ವಿಂಗಡಣೆ ಮಸೂದೆಗೆ ನಮ್ಮ ವಿರೋಧವಿದೆ. 2011 ರ ಜನಗಣತಿ ಪ್ರಕಾರ, ಕ್ಷೇತ್ರ ಪುನರ್ವಿಂಗಡನೆ ಮಾಡಿದರೆ ಉತ್ತರ ಭಾರತದ ರಾಜ್ಯಗಳ ಸಂಖ್ಯೆ ಹೆಚ್ಚಳವಾಗಿ ದಕ್ಷಿಣ ಭಾರತಕ್ಕೆ ಅನ್ಯಾಯವಾಗುತ್ತದೆ.

–**ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಸಂಸದ

ಕ್ಷೇತ್ರ ಪುನರ್ವಿಂಗಡಣೆ ನಂತರ ಹಾಲಿ ಇರುವ ಲೋಕಸಭೆಯ 543 ಸದಸ್ಯರ ಸಂಖ್ಯೆಯೂ ಕೇಂದ್ರಾಡಳಿತ ಪ್ರದೇಶದ 35 ಕ್ಷೇತ್ರಗಳು ಸೇರಿದಂತೆ ಒಟ್ಟು ಕ್ಷೇತ್ರಗಳ ಸಂಖ್ಯೆ 850ಕ್ಕೆ ಹೆಚ್ಚಳವಾಗಲಿದೆ. ಸಂವಿಧಾನದಲ್ಲಿ ಧರ್ಮಾಧರಿತ ಮೀಸಲಾತಿ ನೀಡಲು ಅವಕಾಶವಿಲ್ಲ. ಈ ಮಸೂದೆ ಮಂಡನೆಯಿಂದ ಯಾವುದೇ ರಾಜ್ಯಗಳಿಗೂ ಅನ್ಯಾಯವಾಗುವುದಿಲ್ಲ. ಎಲ್ಲಾ ರಾಜ್ಯಗಳಿಗೂ ಸಮಾನವಾದ ನ್ಯಾಯ ಸಿಗುತ್ತದೆ. ರಾಜಕಾರಣ ಮಾಡದೇ ಮಸೂದೆಗೆ ಬೆಂಬಲ ನೀಡಬೇಕು.

–**ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಮಸೂದೆಗೆ ಪ್ರತಿ ಪಕ್ಷಗಳ ತೀವ್ರ ವಿರೋಧ

ಪ್ರತಿಪಕ್ಷಗಳ ಸದಸ್ಯರ ಕೋರಿಕೆಯಂತೆ ಸ್ಪೀಕರ್ ಓಂ ಬಿರ್ಲಾ ಅವರು ಮಸೂದೆಯನ್ನು ಮತದಾನಕ್ಕೆ ಹಾಕಿದ್ದು, ಮಸೂದೆ ಪರವಾಗಿ 251, ವಿರುದ್ಧವಾಗಿ 185 ಮತ ಚಲಾವಣೆಯಾದವು. ಇದಕ್ಕೂ ಮುನ್ನ ಅರ್ಜುನ್ ರಾಮ್ ಮೇಗರ್‌ವಾಲ್ ಮಸೂದೆ ಮಂಡನೆ ಮಾಡುತ್ತಿದ್ದಂತೆ ಇಂಡಿಯಾ ಮೈತ್ರಿಕೂಟದ ಸದಸ್ಯರು ತೀವ್ರವಾಗಿ ವಿರೋಧಿಸಿದರು.

ಭಾರತದ ರಾಜಕೀಯ ದಿಕ್ಕೇ ಬದಲು..!

ಮಹಿಳೆಯರಿಗೆ ಸಂಸತ್ತಿನಲ್ಲಿ ಶೇ. 33ರಷ್ಟು ಮೀಸಲು ಕಲ್ಪಿಸುವ ನಾರಿ ಶಕ್ತಿ ವಂದನ್ ಮಸೂದೆ, ಭಾರತದ ರಾಜಕಾರಣದ ದಿಕ್ಕನ್ನು ಬದಲಿಸಲಿದೆ. ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗುವಂತೆ ನೋಡಿಕೊಳ್ಳುವುದು ನಾಗರಿಕ ಸಮಾಜದ ಜವಾಬ್ದಾರಿ. ನಮ್ಮ ಸರ್ಕಾರ ಕಾಲದ ಕರೆಗೆ ಓಗೊಟ್ಟು, ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದೆ ಎಂದಿದ್ದಾರೆ ಪ್ರಧಾನಿ ಮೋದಿ.

ಹಿಂದಿ: ಗ್ರೇಡ್ ನೀಡುವ ನಿರ್ಧಾರಕ್ಕೆ ಹಿನ್ನಡೆ

- **ಮಲ್ಲಮ್ಮ ನುಡಿ ವಾರ್ತೆ ಕಲಬುರ್ಗಿ**

ರಾಜ್ಯಸರ್ಕಾರವು ಹಿಂದಿ ಭಾಷೆಯನ್ನೊಳಗೊಂಡಂತೆ ತೃತೀಯ ಭಾಷೆಗಳಿಗೆ ಅಂಕಗಳನ್ನು ನೀಡುವುದನ್ನು ಕೈಬಿಟ್ಟು ಗ್ರೇಡ್ ನೀಡುವ ನಿರ್ಧಾರ ಕೈಗೊಳ್ಳಲು ಇಚ್ಛಿಸಿದ್ದ ಅವೈಜ್ಞಾನಿಕ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ಇದು ರಾಜ್ಯ ಸರ್ಕಾರದ ವಿರುದ್ಧ ನಾಡಿನ ಸಮಸ್ತ ಶಿಕ್ಷಕರ ಗೆಲುವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ. ನಮೋಶಿ ಅಭಿಪ್ರಾಯ ಪಟ್ಟಿದ್ದಾರೆ.

ವರದಿಗಾರರ ಜೊತೆ ಮಾತನಾಡಿ, ಈ ಹಿಂದಿನಂತೆ ಯಥಾ ಪ್ರಕಾರ ಅಂಕಗಳನ್ನು ಪರಿಗಣಿಸಿ ಗ್ರೇಡಿಂಗ್ ನೀಡುವ ಪದ್ಧತಿಯನ್ನು ಕೈಬಿಡಬೇಕೆಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ರಾಜ್ಯ ಸರಕಾರವು ತರಾತುರಿಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿರುವಾಗ ಕೇವಲ ರಾಜಕೀಯ ದುರುದ್ದೇಶವನ್ನು ಇಟ್ಟುಕೊಂಡು ಹಿಂದಿ ಭಾಷೆಯನ್ನು ಗುರಿಯಾಗಿಸಿದ್ದಾರೆ ಎಂದಿದ್ದಾರೆ.

ಹೈಕಮಾಂಡ್ ನಡೆ ತಲೆದಂಡದ ಕಡೆ..?

- **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ದಾವಣಗೆರೆ ವಿಧಾನಸಭೆಯ ಉಪಚುನಾವಣೆ ಬಳಿಕ ಸಚಿವ ಜಮೀರ್ ಅವರಿಗೂ ತಲೆ ದಂಡ ಕಾದಿದೆಯೆ? ಈ ಪ್ರಶ್ನೆಗೆ ಆಪ್ತವಲಯಗಳು ಹೌದು ಎನ್ನುತ್ತಿವೆ. ಅವರ ಗೌರವಯುತ ವಿದಾಯಕ್ಕೆ ಕಾಂಗ್ರೆಸ್ನಲ್ಲಿ ತೆರೆಮರೆಯ ಕಸರತ್ತುಗಳು ನಡೆಯುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ. ಈಗಾಗಲೇ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನ ಪರಿಷತ್ ಜಮೀರ್ ಅಹಮದ್ ರಾಜೀನಾಮೆ ನೀಡಿದ್ದಾರೆ. ಸಿಎಂ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ನಜೀರ್ ಅಹಮದ್ ಅವರನ್ನು ವಜಾಗೊಳಿಸಲಾಗಿದೆ. ಈ ಇಬ್ಬರ ತಲೆದಂಡದಿಂದ ಗಲಿಬಿಲಿಗೆ ಒಳಗಾಗಿರುವ ಸಚಿವ ಜಮೀರ್, ತಮ್ಮ ಕುರ್ಚಿಗೆ ಒದಗಲಿರುವ ಕಂಟಕವನ್ನು ತಪ್ಪಿಸಿಕೊಳ್ಳಲು ನಾನಾ ರೀತಿಯ ಕಸರತ್ತು ನಡೆಸುತ್ತಿದ್ದಾರೆ.

ಬಹುಬೇಡಿಕೆಯ ಕನಸು ಇದೀಗ ನನಸು.!

- **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ತಾಲೂಕಿನ ಜನತೆಯ ಬಹುದಿನಗಳ ಬೇಡಿಕೆಯಾಗಿದ್ದ ಅಗ್ನಿಶಾಮಕ ಠಾಣೆ ಆರಂಭದ ಕನಸು ಇದೀಗ ನನಸಾಗುವ ಕಾಲ ಬಂದಿದೆ. ಸರಕಾರದಿಂದ 218.00 ಲಕ್ಷಗಳು ಬಿಡುಗಡೆಯಾಗಿದ್ದು, ಶೀಘ್ರದಲ್ಲಿಯೇ ಅಗ್ನಿಶಾಮಕ ಠಾಣೆಯ ಕಟ್ಟಡ, ಸಿಬ್ಬಂದಿಯ ವಸತಿಗೃಹಗಳ ನಿರ್ಮಾಣ ಆಗಲಿದೆ ಎಂದು ಶಾಸಕ ಶಾಸಕ ಜೆಎನ್ ಗಣೇಶ್ ತಿಳಿಸಿದ್ದಾರೆ. ತಾಲೂಕಿನ ನಂ 10 ಮುದ್ದಾಪುರ ಹೊಸಪೇಟೆ ಬೈಪಾಸ್ ಮಾರ್ಗದ ಮಿನಿ ವಿಧಾನಸೌಧ ಹಿಂಭಾಗದಲ್ಲಿ ಬಳಿ ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಗೆಂದು ಮೀಸಲು ಇಟ್ಟಿದ್ದ ಜಾಗದಲ್ಲಿ ಗುರುವಾರ ಶಾಸಕ ಜೆಎನ್ ಗಣೇಶ್ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿಗಳು ಗ್ರಾಮ ಪಂಚಾಯತಿ ಪಿಡಿಒ ಹಾಗೂ ಸಿಬ್ಬಂದಿಗಳು ಮತ್ತಿತರು ಹಾಜರಿದ್ದರು.

ನಮ್ಮ ತಾಲೂಕಿನಲ್ಲಿ ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಯ ಕಚೇರಿ ಇಲ್ಲ, ಇದರಿಂದ ಅಗ್ನಿ ಅನಾಹುತಗಳ ಸಂಭವಿಸಿದಾಗ ಬೇರೆ ತಾಲೂಕಿನ ವಾಹನಗಳನ್ನು ಅವಲಂಬಿಸಬೇಕಾಗಿತ್ತು. ಅದರಿಂದ ಆಗುತ್ತಿದ್ದ ನಷ್ಟವನ್ನು ತಡೆಯಲು ತಾಲೂಕಿನಲ್ಲಿ ಅಗ್ನಿಶಾಮಕ ಠಾಣೆ ನಿರ್ಮಿಸಲಾಗುವುದು.

–**ಜೆಎನ್ ಗಣೇಶ್,** ಶಾಸಕ

ಉರಿ ಬಿಸಿಲ ಎತ್ತರ, ನಾಡ ಜನತೆ ತತ್ತರ

- **ಸತೀಶ್ ಕುಮಾರ್‌ಜಿ ತುಪ್ಪದ್, ಬೀದರ್**

ಕಡು ಬಿಸಿಲಿಗೆ ಇಡೀ ಕರ್ನಾಟಕದ ಜನತೆ ತತ್ತರಿಸಿ ಹೋಗಿದ್ದಾರೆ. ಬಳ್ಳಾರಿ, ಹುಬ್ಬಳ್ಳಿ, ದಾವಣಗೆರೆ, ಮೈಸೂರು, ಶಿವಮೊಗ್ಗ, ಬೀದರ್ ಸೇರಿದಂತೆ ರಾಜ್ಯದ ಅನ್ಯಕ ಜಿಲ್ಲೆಗಳಲ್ಲಿ ಧಗೆ ಹೆಚ್ಚಾಗಿದೆ. ಕಲಬುರಗಿಯ ಔರಾದ್ ಹೋಬಳಿಯಲ್ಲಿ 45 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಇದು ರಾಜ್ಯದಲ್ಲೇ ಅತಿ ಹೆಚ್ಚು ತಾಪಮಾನ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ಮಾಹಿತಿ ನೀಡಿದೆ.

ಕಲಬುರಗಿ ಜಿಲ್ಲೆಯ ಜೊತೆಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಬಿಸಿಲಿನ ತೀವ್ರತೆ ಹೆಚ್ಚಾಗಿದೆ. ಚಿಂಚೋಳಿ ತಾಲೂಕಿನ ಐನಾಪುರ ಹೋಬಳಿ ಮತ್ತು ಅಫಜಲ್ಪುರ ತಾಲೂಕಿನ ಅತನೂರು ಹೋಬಳಿಗಳಲ್ಲಿ ತಲಾ 44.3 ಡಿಗ್ರಿ ತಾಪಮಾನವಿದ್ದು, ಆಳಂದ ತಾಲೂಕಿನ ಮದನ ಹಿಪ್ಪರಗಾ ಹೋಬಳಿಯಲ್ಲಿ 44.1 ಡಿಗ್ರಿ ಉಷ್ಣಾಂಶ ದಾಖಲಾಗಿದೆ.

ಬೀದರ್ ಜಿಲ್ಲೆಯ ಔರಾಧ್ ತಾಲೂಕಿನ ಸಂತಪುರದಲ್ಲಿ 44.4 ಡಿಗ್ರಿ, ಕಮಲನಗರ ತಾಲೂಕಿನ ದಬಕದಲ್ಲಿ 44.1 ಡಿಗ್ರಿ ಮತ್ತು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಗುರುಗುಂಟಾ ಹೋಬಳಿಯಲ್ಲಿ 4.2 ಡಿಗ್ರಿ ತಾಪಮಾನ ದಾಖಲಾಗಿದೆ.

ಅತಿ ಹೆಚ್ಚು ತಾಪಮಾನ ದಾಖಲು: ಹವಾಮಾನ ಜಾಲದ ವರದಿ ಪ್ರಕಾರ, ರಾಜ್ಯದ ಹಲವೆಡೆ 42 ಡಿಗ್ರಿಗಿಂತ ಹೆಚ್ಚು ಉಷ್ಣಾಂಶ ದಾಖಲಾಗಿದೆ. ಕಲಬುರಗಿಯ 24 ಸ್ಥಳಗಳಲ್ಲಿ 42 ಡಿಗ್ರಿಗಿಂತ ಹೆಚ್ಚು ತಾಪಮಾನ ದಾಖಲಾಗಿದ್ದರೆ, ರಾಯಚೂರಿನಲ್ಲಿ 22, ಬೀದರ್‌ನಲ್ಲಿ 18, ವಿಜಯಪುರದಲ್ಲಿ 14, ಯಾದಗಿರಿಯಲ್ಲಿ 11 ಮತ್ತು ಬಾಗಲಕೋಟೆಯಲ್ಲಿ 7 ಸ್ಥಳಗಳಲ್ಲಿ ಉಷ್ಣಾಂಶ 42 ಡಿಗ್ರಿ ಮೀರಿದೆ. ಬಳ್ಳಾರಿ, ಗದಗ, ಕೊಪ್ಪಳ, ಉತ್ತರ ಕನ್ನಡ ಜಿಲ್ಲೆಗಳಲ್ಲಿಯೂ ಕೆಲವು ಪ್ರದೇಶಗಳಲ್ಲಿ ತಾಪಮಾನ 42 ಡಿಗ್ರಿ ದಾಟಿದೆ.



ಆರೇಂಜ್ ಹಿಟ್‌ವೇವ್ ಘೋಷಣೆ

ಈ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲಾಡಳಿತ ಏಪ್ರಿಲ್ 15ರಿಂದ 17ರವರೆಗೆ ಆರೆಂಜ್ ಹೀಟ್ ವೇವ್ ಅಲರ್ಟ್ ಘೋಷಿಸಿ ಸಾರ್ವಜನಿಕರಿಗೆ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಲು ಸೂಚಿಸಿದೆ. ಅಗತ್ಯವಿಲ್ಲದ ಹೊರಚಟುವಟಿಕೆಗಳನ್ನು ತಪ್ಪಿಸುವುದು, ಹೆಚ್ಚು ನೀರು ಕುಡಿಯುವುದು, ತೀವ್ರ ಬಿಸಿಲಿನಲ್ಲಿ ಕೆಲಸ ಮಾಡುವುದನ್ನು ನಿಯಂತ್ರಿಸುವಂತೆ ಸಲಹೆ ನೀಡಿದೆ.

ಕ್ಷೇತ್ರ ಮರುವಿಂಗಣೆ ವಿಚಾರದಲ್ಲಿ ಪ್ರತಿಪಕ್ಷಗಳು ಉತ್ತರ ದಕ್ಷಿಣವನ್ನು ವಿಭಜಿಸುವ ಮೂಲಕ ರಾಜಕೀಯ ಮಾಡುತ್ತಿವೆ: ಬಸವರಾಜ ಬೊಮ್ಮಾಯಿ

ಕುಸ್ತಿ ಸ್ಪರ್ಧೆ ವಿಜೇತ ಕುಶಾಲ್‌ಗೆ 11 ಸಾವಿರ ನಗದು ಬಹುಮಾನ

- **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ತಾಲ್ಲೂಕಿನ ಭಾತಂಬ್ರಾ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಆಯೋಜಿಸಿದ್ದ ಕುಸ್ತಿ ಸ್ಪರ್ಧೆಯಲ್ಲಿ ಮಹಾರಾಷ್ಟ್ರ ರಾಜ್ಯದ ಲಾತೂರಿನ ಕುಶಾಲ ದತ್ತಾತ್ರಿ ಲವಾಟೆ ಪ್ರಥಮ ಸ್ಥಾನ ಪಡೆದಿದ್ದು, 11 ಸಾವಿರ ರೂಪಾಯಿ ನಗದು ಬಹುಮಾನ ಪಡೆದುಕೊಂಡರು. ದ್ವಿತೀಯ ಸ್ಥಾನ ಪಡೆದ ವಿಜಯಕುಮಾರ ಶಿವಾಜಿರಾವ್ ಬಂಬಿ 5 ಸಾವಿರ ರೂಪಾಯಿ ನಗದು ಬಹುಮಾನ ಪಡೆದುಕೊಂಡರು. ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆಯ ಅನೇಕ ಕುಸ್ತಿಪಟುಗಳು ಕುಸ್ತಿ ಪಂದ್ಯಾಟದಲ್ಲಿ ಪಾಲ್ಗೊಂಡಿದ್ದರು.

ಗುರುಬಸವ ಸ್ವಾಮೀಜಿ, ದೇವಸ್ಥಾನ ಸಮಿತಿ ಅಧ್ಯಕ್ಷ ಮಹಾದೇವ ಬೇಲೂರೆ, ಕಾಶಿನಾಥ ಲದ್ದೆ, ಮಹಾಂತೇಶ ಪಾಟೀಲ, ನಾಗೇಶ ಧಬಾಲೆ, ಚಂದ್ರು ಲದ್ದೆ, ಸುರೇಶ ಗಾಮಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ರಾಜಶೇಖರ್ ಅವರಿಗೆ ಎಸ್ಪಿ ಸನ್ಮಾನ

- **ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ**



ಪಟ್ಟಣದ ಸಮಾಜ ಕಾರ್ಯಕರ್ತರು, ದಾಸೋಹಿಗಳಾದ ಹಾಗೂ ರುದ್ರ ಹನುಮಾನ ದೇವಾಲಯ ಸಮಿತಿ ಅಧ್ಯಕ್ಷ ರಾಜಶೇಖರ್ ಚಿಂಚೋಳಿ ಅವರು ಇತ್ತಿಚಿಗೆ ಪಟ್ಟಣದ ಸಂಚಾರಿ ಪೊಲೀಸ್ ಠಾಣೆಗೆ 10 ಬ್ಯಾರಿಕೆಡಗಳನ್ನು ನೀಡಿದ್ದಕ್ಕೆ ಬೀದರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ರವರು ರಾಜಶೇಖರ್ ಚಿಂಚೋಳಿ ಅವರಿಗೆ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಹುಮನಾಬಾದ ಪೊಲೀಸ್ ವಿಭಾಗದ ಡಿವೈಎಸ್ಪಿ ಮಡೋಳಪ್ಪ, ಸಿಪಿಐ ಸಂತೋಷ್, ಪಿಎಸ್‌ಐಗಳಾದ ಸುರೇಶಕುಮಾರ್, ಹುಲಿಯಪ್ಪ ಹಾಗೂ ವಿವಿಧ ಪೊಲೀಸ್ ಠಾಣೆಯ ಸಿಪಿಐಗಳು, ಪಿಎಸ್‌ಐಗಳು ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಉನ್ನತ ಗುರಿ ಇಟ್ಟುಕೊಂಡು ಅಭ್ಯಾಸ ಮಾಡಿ: ಗಬಾಡೆ

- **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ವಿದ್ಯಾರ್ಥಿಗಳು ಉನ್ನತ ಗುರಿ ಇಟ್ಟುಕೊಂಡು ಅಭ್ಯಾಸ ಮಾಡಿದರೆ ಉನ್ನತ ಹುದ್ದೆ ಪಡೆಯಲು ಸಾಧ್ಯ’ ಎಂದು ಬೀದರ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ರವೀಂದ್ರ ಗಬಾಡೆ ವಿದ್ಯಾರ್ಥಿಗಳಿಗೆ ಹೇಳಿದರು.

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪತ್ರಕರ್ತ ರಾಜಕುಮಾರ ಆರ್. ಹಡಪದ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ಶಿಸ್ತು, ಉತ್ತಮ ಸಂಸ್ಕಾರ, ಒಳ್ಳೆಯ ನಡುವಳಿಕೆ ಕಲಿಸಿಕೊಡುತ್ತದೆ. ಜೀವನದಲ್ಲಿ ನಾವು ಬದುಕುವುದು ಹೇಗೆ ಎನ್ನುವುದು ಕಲಿಸಿಕೊಡುತ್ತದೆ. ಇಲ್ಲ ಕಲಿತುಕೊಂಡ ಪ್ರತಿಯೊಂದು ಅಂಶಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕಿದರೆ ಮಾತ್ರ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಲು ಸಾಧ್ಯ ಎಂದರು. ಚಿಟಗುಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಶ್ವವಿದ್ಯಾಲಯದ ಮಾದರಿಯಲ್ಲಿ ಕಾಣುವುದಕ್ಕೆ ಪ್ರಾಂಶುಪಾಲರ ಶ್ರಮ ಬಹಳಷ್ಟು ಇದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಶೈಲೇಂದ್ರ ಕಾವಡಿ ಮಾತನಾಡಿ, ಪ್ರತಿಯೊಬ್ಬರು ಗಿಡ ಮರಗಳನ್ನು ನೆಟ್ಟು ಅದರ ಸಂರಕ್ಷಣೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ನರಸಪ್ಪ ನರನಾಳ ಮಾತನಾಡಿ, ಇಂದಿನ ಯುವಕರು ಪುಸ್ತಕ ಓದುವುದಕ್ಕಿಂತ ಹೆಚ್ಚು ಮೊಬೈಲ್ ಬಳಕೆಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಮೊಬೈಲ್ ಬಳಕೆ ಕಡಿಮೆ ಮಾಡಿ ವಿದ್ಯಾಭ್ಯಾಸವನ್ನ ಕಷ್ಟ ಪಟ್ಟು ಓದದೇ ಇಷ್ಟು ಪಟ್ಟು ಓದಬೇಕು ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲ ಡಾ. ಜಯಕುಮಾರ್ ಸಿಂಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಸದಸ್ಯ ವಿಶಾಲ ಬೋರಳೆ, ಕಿರಣರೆಡ್ಡಿ, ಡಾ. ಚಿತ್ರಶೇಖರ್ ಚಿರಳ್ಳಿ, ಎನ್‌ಎಸ್‌ಎಸ್ ಅಧಿಕಾರಿ ಶಾಂತಕುಮಾರ್ ಪಾಟೀಲ್ ಸೇರಿದಂತೆ ಉಪನ್ಯಾಸರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

> “ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸುಮಾರು 550 ವಿದ್ಯಾರ್ಥಿಗಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಕುಳಿತುಕೊಂಡು ಅಧ್ಯಯನ ಮಾಡಲು ಆಸನ ವ್ಯವಸ್ಥೆ ಇಲ್ಲ 550 ವಿದ್ಯಾರ್ಥಿಗಳಿಗೆ ಕೇವಲ 100 ಬ್ರೇನ್ಸ್ ಮಾತ್ರ ಇವೆ. ಪರೀಕ್ಷೆ ಬರೆಯುವ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಬ್ರೇಚೀಸ್ ಇಲ್ಲದೆ ಪರೀಕ್ಷೆ ಬರೆಯಲು ಅನಾನುಕೂಲ ಆಗುತ್ತಿದ್ದೇ, ಸ್ಥಳೀಯ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಕೂಡಲೇ ಕಾಲೇಜಿಗೆ ಬ್ರೇಚೀಸ್ ಕಲ್ಪಿಸಿಕೊಡಬೇಕೆಂದು ಕಸಾಪ ತಾಲೂಕಾಧ್ಯಕ್ಷ ಅನೀಲಕುಮಾರ ಸಿಂಧೆ ಹೇಳಿದರು.

ಕ್ರೀಡೆಗಳಿಂದ ಯುವಕರ ಸಮಗ್ರ ಬೆಳವಣಿಗೆ ಸಾಧ್ಯ: ನಾಯ್ಕ

- **ಮಲ್ಲಮ್ಮ ನುಡಿ ವಾರ್ತೆ, ಹಗರಿಬೊಮ್ಮನಹಳ್ಳಿ**

ಹಗರಿಬೊಮ್ಮನಹಳ್ಳಿ, ತಾಲೂಕಿನ ಹಂಪಾಪಟ್ಟಣ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಹಂಪಾಪಟ್ಟಣ ಕ್ರಿಕೆಟರ್ಸ್ ವತಿಯಿಂದ “ಹಂಪಾಪಟ್ಟಣ ಪ್ರೀಮಿಯರ್ ಲೀಗ್ ಸೀಸನ್–5” (ಊಕಏ) ಸ್ಟಂಪರ್ ಬಾಲ್ ಕ್ರಿಕೆಟ್ ಕ್ರೀಡೋತ್ಸವ 2026ನ್ನು ಹಂಪಾಪಟ್ಟಣದ ನಗರೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮಂಗಳವಾರ ಸಂಜೆ ಭರ್

ಮಕ್ಕಳಿಗೆ ವಿಶೇಷ ವಚನ ಗಾಯನ

- **ಮಲ್ಲಮ್ಮ ನುಡಿ ವಾರ್ತೆ, ಮುದಗಲ್**



ಮಕ್ಕಳ ಮನೋಲ್ಲಾಸ ಉಚಿತ ಬೇಸಿಗೆ ಶಿಬಿರ

ಸಮೀಪದ ಜನತಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೇಸಿಗೆ ರಜಾ ನಿಮಿತ್ಯ ಗುರುವಾರ ಬೇಸಿಗೆ ಶಿಬಿರದ ಅಂಗವಾಗಿ ಮಕ್ಕಳಿಗೆ ವಿಶೇಷ ವಚನ ಗಾಯನ ಕಾರ್ಯಕ್ರಮ ಜರುಗಿತು.

ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯ ವಿಷಯದ ಅಂಗವಾಗಿ ಶರಣರ ವಚನಗಳನ್ನು ರಾಗಬದ್ಧವಾಗಿ ಹಾಡುವ ಹಾಗೂ ಅವುಗಳ ಅರ್ಥವನ್ನು ತಿಳಿಯುವ ಅವಕಾಶ ಕಲ್ಪಿಸಲಾಯಿತು. ಕಾರ್ಯಕ್ರಮದಲ್ಲಿ ಲಿಂಗಸುಗೂರಿನ ಹೃದಯ ಸಂಗಮ ಸ್ಟುಡಿಯೋದ ಸಂಗೀತ ಕಲಾವಿದರಾದ ಹುಸೇನ್ ಹಾಗೂ ಜೆ.ಎಂ.ಜೆ ಪ್ರೌಢ ಶಾಲೆಯ ಸಹ ಶಿಕ್ಷಕ ರೆಹಮಾನ್ ಅವರು ಮಕ್ಕಳಿಗೆ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಸೇರಿದಂತೆ ಹಲವು ಶರಣರ ವಚನಗಳನ್ನು ಗಾಯನ ರೂಪದಲ್ಲಿ ಪರಿಚಯಿಸಿದರು. ಮಕ್ಕಳು ಕೂಡ ಅವರೊಂದಿಗೆ ವಚನಗಳನ್ನು ಹಾಡುವ ಮೂಲಕ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಶಾಲಾ ಸಹ ಶಿಕ್ಷಕ ಮೌನೇಶ್ ಎಂ. ವಿಶ್ವಕರ್ಮ ಮಾತನಾಡಿ, ಶಿಬಿರದ ಅವಧಿಯಲ್ಲಿ ವಿವಿಧ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಮಕ್ಕಳಿಗೆ ಕೌಶಲಾಧಾರಿತ ಮತ್ತು ಅನುಭವಾತ್ಮಕ ಕಲಿಕೆಯನ್ನು ನೀಡುವುದು ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಇಂದಿನ ಕಾರ್ಯಕ್ರಮವು ಮಕ್ಕಳಿಗೆ ಸಾಹಿತ್ಯ ಮತ್ತು ಸಂಗೀತದ ಮೌಲ್ಯಗಳನ್ನು ತಿಳಿಸುವಲ್ಲಿ ಸಾರ್ಥಕವಾಗಿದೆ ಎಂದರು. ಸಹ ಶಿಕ್ಷಕ ರವಿಕುಮಾರ, ಅತಿಥಿ ಶಿಕ್ಷಕಿಯರು ಜ್ಯೋತಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿವಕುಮಾರ ಸ್ವಾಮೀಜಿ ಆಧುನಿಕ ಯುಗದ ಶ್ರೇಷ್ಠ ಸಂತ

- **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ತುಮಕೂರಿನ ಸಿದ್ದಗಂಗಾ ಮಠದ ಲಿಂ. ಶಿವಕುಮಾರ ಸ್ವಾಮೀಜಿ ಅವರು ಕೇವಲ ಮಠದ ಸ್ವಾಮೀಜಿಯಾಗಿರದೆ, ಜಾತಿ–ಮತಗಳ ಬೇಧವಿಲ್ಲದೆ ಮಾನವತಾವಾದವನ್ನು ಎತ್ತಿಹಿಡಿದ ಆಧುನಿಕ ಯುಗದ ಶ್ರೇಷ್ಠ ಸಂತರಾಗಿದ್ದರು ಎಂದು ತುಮಕೂರಿನ ಸಿದ್ದಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿ ಬಣ್ಣಿಸಿದರು.

ತಾಲ್ಲೂಕಿನ ತೇಗಂಪೂರ ಗ್ರಾಮದಲ್ಲಿ ಸಿದ್ದಗಂಗಾ ಮಠದ ಹಳೇ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಂದ ಹಮ್ಮಿಕೊಂಡಿದ್ದ ತುಮಕೂರಿನ ಲಿಂ. ಶಿವಕುಮಾರ ಸ್ವಾಮೀಜಿಯ ಜನ್ಮ ದಿನಾಚರಣೆ ಹಾಗೂ ಗುರುವಂದನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಾನವಸೇವೆಯನ್ನೇ ಧರ್ಮವೆಂದು ಬೋಧಿಸಿ, ಅನ್ನ, ಅಕ್ಷರ, ಆಶ್ರಯದ ಮೂಲಕ ಲಕ್ಷಾಂತರ ಬದುಕುಗಳಿಗೆ ಬೆಳಕು ನೀಡಿದ ಮಹಾನ್ ಯೋಗಿ ಶಿವಕುಮಾರ ಸ್ವಾಮೀಜಿ ಆಗಿದ್ದರು. ಸಮಾಜದ ಎಲ್ಲ ವರ್ಗಗಳಿಗೂ ಸಮಾನ ಅವಕಾಶ ಕಲ್ಪಿಸಿದ ಅವರ ಸೇವಾ ಪರಂಪರೆ ಸರ್ವರಿಗೂ ಪ್ರೇರಣಾದಾಯಕ ಆಗಿರಲಿ ಎಂದು ತಿಳಿಸಿದರು.

ಅವರ ಆದರ್ಶಗಳು ನಮ್ಮ ನಡೆ–ನುಡಿಯಾಗಿ, ಮಾನವೀಯತೆ ನಮ್ಮ ಬದುಕಿನ ದಾರಿಯಾಗಬೇಕು. ಬಡವರು, ದೀನರು, ಶೋಷಿತರಿಗೆ ತ್ರಿವಿಧ ದಾಸೋಹ ನೀಡುವ ಮೂಲಕ ಲಕ್ಷಾಂತರ ಕುಟುಂಬಗಳಲ್ಲಿ ಆರದ ಹಣತೆಯಾಗಿ ಬೆಳಗುತ್ತಿರುವ ಮಹಾಜ್ಯೋತಿ ಅವರು.

ಭಕ್ತರು ಶ್ರೀಗಳು ಸಾರಿದ ನೀತಿಯ ಸಂದೇಶಗಳನ್ನು ಪಾಲಿಸುವ ಮೂಲಕ ಅತ್ಯುತ್ತಮ ಜೀವನ ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರೀ ಸಿದ್ದಗಂಗಾ ಮಠದ ಹಳೆಯ ವಿದ್ಯಾರ್ಥಿಗಳ, ಹಿತೈಷಿಗಳ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪೂರ, ಗುಂಡಯ್ಯ ಸ್ವಾಮಿ ತರನಳ್ಳಿ, ಏಕನಾಥ ಮೇತ್ರೆ, ಮಂಜುನಾಥ ಪಾಟೀಲ, ಪಂಪನಗೌಡ ಮುದ್ದಣ್ಣನವರ್, ನರಸಾ ರೆಡ್ಡಿ ವಾರಂಗಲ್ ಸೇರಿದಂತೆ ಶ್ರೀ ಮಠದ ಹಳೆಯ ವಿದ್ಯಾರ್ಥಿಗಳು ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

ಬಿಸಿಲಿನ ತಾಪದಿಂದ ಸಾರ್ವಜನಿಕರು ಜಾಗ್ರತೆ ವಹಿಸಬೇಕು

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚುತ್ತಿದ್ದು, ಸಾರ್ವಜನಿಕರು ಆರೋಗ್ಯದ ದೃಷ್ಟಿಯಿಂದ ಹೆಚ್ಚಿನ ಜಾಗ್ರತೆ ವಹಿಸುವುದು ಅಗತ್ಯವಾಗಿದೆ. ಮಧ್ಯಾಹ್ನ ಸಮಯದಲ್ಲಿ ಅನಗತ್ಯವಾಗಿ ಹೊರಗೆ ಸಂಚಾರ ಮಾಡುವುದನ್ನು ತಪ್ಪಿಸಿ, ಹೆಚ್ಚು ಪ್ರಮಾಣದಲ್ಲಿ ನೀರು ಸೇವಿಸಬೇಕು. ಮಕ್ಕಳು, ವೃದ್ಧರು ಹಾಗೂ ಅನಾರೋಗ್ಯ ಪೀಡಿತರು ವಿಶೇಷ ಎಚ್ಚರಿಕೆ ವಹಿಸಬೇಕಾಗಿದೆ.

ತೀವ್ರ ಬಿಸಿಲಿನ ಪರಿಣಾಮವಾಗಿ ದೇಹದಲ್ಲಿ ನೀರಿನಾಂಶ ಕಡಿಮೆಯಾಗುವ ಸಂಭವವಿರುವುದರಿಂದ ಸಾರ್ವಜನಿಕರು ಹಣ್ಣು, ನೀರು, ಮಜ್ಜಿಗೆ ಸೇರಿದಂತೆ ದ್ರವ ಪದಾರ್ಥಗಳನ್ನು ಸೇವಿಸುವುದು ಒಳಿತು. ಬಿಸಿಲಿನಲ್ಲಿ ಕೆಲಸ ಮಾಡುವ ಕಾರ್ಮಿಕರು ಹಾಗೂ ರೈತರು ತಲೆಗೆ ಬಟ್ಟೆ ಅಥವಾ ಟೋಪಿ ಧರಿಸಿ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು.

ಬಿಸಿಗಾಳಿ ಹಾಗೂ ಉಷ್ಣತೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಯಲು ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದು ಕಾಲದ ಅವಶ್ಯಕತೆಯಾಗಿದೆ. ಆರೋಗ್ಯವೇ ಭಾಗ್ಯ ಎಂಬ ನುಡಿಯನ್ನು ಮನಗಂಡು ಸಾರ್ವಜನಿಕರು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕು.

ಲೀಡರ್ ಆಫ್ ಟುಮಾರೋ ಗೌರವಕ್ಕೆ ಅಬ್ದುಲ್ ಖದೀರ್ ಆಯ್ಕೆ

- **ಮಲ್ಲಮ್ಮ ನುಡಿ ವಾರ್ತೆ, ಬೀದರ**

ನಗರದ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹ ಅಧ್ಯಕ್ಷ ಹಾಗೂ ಶಿಕ್ಷಣ ತಜ್ಞ ಡಾ. ಅಬ್ದುಲ್ ಖದೀರ್ ಅವರನ್ನು ಫೋರ್ಬ್ಸ್ ಇಂಡಿಯಾ ನಿಯತಕಾಲಿಕೆಯು ’ಲೀಡರ್ ಆಫ್ ಟುಮಾರೋ’ ಎಂದು ಗುರುತಿಸಿದೆ.

ವಿಶಿಷ್ಟ ಸಾಧನೆ ಮೂಲಕ ಗಮನಾರ್ಹ ಸಾಧನೆ ಮಾಡಿದ 10 ಭಾರತೀಯರನ್ನು ಫೋರ್ಬ್ಸ್ ಇಂಡಿಯಾ ’ನಾಳೆಯ ನಾಯಕರು’ ಎಂದು ಆಯ್ಕೆ ಮಾಡಿದ್ದು, ಅದರಲ್ಲಿ ಡಾ. ಖದೀರ್ ಸ್ಥಾನ ಪಡೆದಿರುವುದು ವಿಶೇಷವಾಗಿದೆ. ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಶಿಕ್ಷಣದ ಮುಖ್ಯವಾಹಿನಿಗೆ ತರಲು ಶಾಹೀನ್ ಸಂಸ್ಥೆ ಜಾರಿಗೊಳಿಸಿದ ’ಶೈಕ್ಷಣಿಕ ತೀವ್ರ ನಿಗಾ ಘಟಕ’ (ಂಖಅಗ) ಮಾದರಿಯನ್ನು ಫೋರ್ಬ್ಸ್ ವಿಶೇಷವಾಗಿ ಪ್ರಶಂಸಿಸಿದೆ ಬೀದರ್‌ನಲ್ಲಿ ವಿದ್ಯಾರ್ಥಿಗಳು ಖಾಸಗಿ ಟ್ಯೂಷನ್‌ಗಳ ಮೇಲೆ ಅವಲಂಬಿತರಾಗಿದ್ದ ಹಿನ್ನೆಲೆ, ಶಾಲಾ ಅವಧಿಯಲ್ಲೇ ವೈಯಕ್ತಿಕ ಗಮನ ನೀಡುವ ಕಾರ್ಯಕ್ರಮವನ್ನು ಶಾಹೀನ್ ಸಂಸ್ಥೆ ಆರಂಭಿಸಿತು. ಇದರಿಂದ ಟ್ಯೂಷನ್ ಅವಲಂಬನೆ ಕಡಿಮೆಯಾಗಿದ್ದು, ಬಳಿಕ ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಶಿಕ್ಷಣಕ್ಕೆ ತರುವ ಯೋಜನೆಯಾಗಿ ಂಖಅಗ ರೂಪುಗೊಂಡಿತು.

:CITATION:

IN THE COURT OF THE I ADDL. CIVIL JUDGE AND JMFC., AT HUMNABAD.

CRL. MISC. No.2276/2026.

Petitioners:

1. Ratan Gurunath Dhotre S/o Gurunath Dhotre, Age: 33-year, Occu : Coolie. R/o Village Waddankera, Tq. Chitguppa.

2. Jagannath Gurunath Dhotre W/o Gurunath Dhotre. Age: 30-year, Occu: Coolie, R/o Village Waddankera, Tq. Chitguppa. Now at Mumbai-MS. 3. Ravi Gurunath Dhotre W/o Gurunath Dhotre. Age: 27-year, Occu: Coolie, R/o Village Waddankera, Tq. Chitguppa. Now at Mumbai-MS. 4. Kashamma W/o Laxman, Age: 58-year, Occu: House hold. R/o Village Waddankera, Tq. Chitguppa.

Respondent:

The Registrar of Birth and Death through The Tahasildar Chitguppa. Sub:- Petition U/Sec. 13(3) of Birth and Death Registration Act-1969

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of Petitioner No.1 to 3 and Son of Petitioner No.4 by namely LATE. GURUNATH S/O LAXMAN, who was died on 17.11.2023 at Village Waddankera. Tq. Chitguppa. Dist. Bidar. The petitioners claiming the Death Certificate of said for transfer of property and other official purpose and home record. Therefore, it is hereby proclaimed that if any persons have got any objection in this regard, may approach to this Court on 29.05.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 10-04-2026

By order of the court
Chief Ministerial Officer, Prl. Civil Judge & JMFC Court, Humnabad.

ಅರ್ಥಪೂರ್ಣವಾಗಿ ಬಸವ ಜಯಂತಿ ಆಚರಣೆ

18 ಕ್ಕೆ ಬೈಕ್ ರ್‍ಯಾಲಿ,19ಕ್ಕೆ ಆರೋಗ್ಯ ತಪಾಸಣೆ, 20 ಕ್ಕೆ ಮೆರವಣಿಗೆ

- **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ಪಟ್ಟಣದ ಚನ್ನಬಸವಾಶ್ರಮದಲ್ಲಿ ಎ.20 ರಿಂದ ನಡೆಯುವ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ–2026, ಡಾ. ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಅಂಗವಾಗಿ ನಡೆಯುವ ಎಲ್ಲ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗುವುದು ಎಂದು ಹಿರೇಮಠದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಹೇಳಿದರು.

ಪ್ರಪಥಮ ಬಾರಿಗೆ ವಿಶ್ವಕ್ಕೆ ಸಂಸತ್ತಿನ ಪರಿಕಲ್ಪನೆ ಕೊಟ್ಟಿದ್ದು ವಿಶ್ವಗುರು ಬಸವಣ್ಣನವರ ನೇತೃತ್ವದ 12ನೇ ಶತಮಾನದ ಶಿವಶರಣರಿಂದ ನಡೆದ ಅನುಭವ ಮಂಟಪ. ಬಸವಣ್ಣನವರ ತತ್ವ ಸಿದ್ಧಾಂತಗಳಿಗೆ ಈಗಲೂ ಜಗತ್ತಿನಾದ್ಯಂತ ಮನ್ನಣೆ ದೊರೆಯುತ್ತಿದೆ. ಡಾ. ಚನ್ನಬಸವ ಪಟ್ಟದ್ದೇವರ ತ್ಯಾಗದ ಫಲದಿಂದ ಕ–ಕ ಭಾಗದಲ್ಲಿ ಕನ್ನಡ ಭಾಷೆ ಮತ್ತು ಗಡಿ ಪ್ರದೇಶ ನಮ್ಮಲ್ಲಿಯೆ ಉಳಿದಿದೆ. ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಗಳಿಂದ

ಈ ಭಾಗ ಆಧ್ಯಾತ್ಮೀಕ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ ಎಂಬುದನ್ನು ಯಾರು ಮರೆಯುವಂತಿಲ್ಲ. 03 ದಿವಸ ನಡೆಯುವ ಎಲ್ಲ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತರು ಪಾಲ್ಗೊಂಡು ಶೋಭೆ ತರಬೇಕು ಎಂದು ಹೇಳಿದರು.

ಮೆರವಣಿಗೆ ಸಮಿತಿ ಅಧ್ಯಕ್ಷ ಯೋಗೇಶ ಅಷ್ಟೂರೆ ಮಾತನಾಡಿ, ಎಪ್ರೀಲ್ 18 ರಂದು ಪಟ್ಟಣದ ಚನ್ನಬಸವಾಶ್ರಮದಿಂದ ಮುಂಜಾನೆ 10 ಗಂಟೆಗೆ ಹೊರಡುವ ಬೈಕ್ ಮತ್ತು ಕಾರ್ ರ್‍ಯಾಲಿಗೆ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಮತ್ತು ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ಸಾನಿಧ್ಯದಲ್ಲಿ ಸಂಸದ ಸಾಗರ ಖಂಡ್ರೆ ಮತ್ತು ಯುವನಾಯಕ ಪ್ರಸನ್ ಖಂಡ್ರೆ ಚಾಲನೆ ನೀಡಲಿದ್ದಾರೆ ರ್‍ಯಾಲಿಯು ಪಟ್ಟಣದ ಪ್ರಮುಖ ವೃತ್ತಗಳು ಸೇರಿದಂತೆ ಹಳೇ ಭಾಲ್ಕಿಯ ವಿವಿಧ ಓಣಿಗಳ ಮೂಲಕ ಪುನ: ಚನ್ನಬಸವಾಶ್ರಮದಲ್ಲಿ ಸಮಾವೇಶಗೊಳ್ಳುವುದು. ಎ.20 ಕ್ಕೆ ಮದ್ಯಾಹ್ನ 3.00 ಗಂಟೆಗೆ ನಡೆಯುವ ಭವ್ಯ ಮೆರವಣಿಗೆ ಹಿರೇಮಠ ಸಂಸ್ಥಾನದಿಂದ ಆರಂಭಗೊಂಡು ಪ್ರಮುಖ ಚೌಕ್‌ಗಳ ಮೂಲಕ ಚನ್ನಬಸವಾಶ್ರಮದಲ್ಲಿ ಕೊನೆಗೊಳ್ಳುವುದು. ಮೆರವಣಿಗೆಯಲ್ಲಿ ಪೂನಾದ ಡೋಲ್ ಬಾರಿಸುವ ಕಲಾವಿದರನ್ನು ಕರೆಸಲಾಗುತ್ತಿದೆ ಎಂದು ತಿಳಿಸಿದರು. ಡಾ. ಸಜ್ಜಲ ಬಳತೆ ಮಾತನಾಡಿ, ಎ.19 ರಂದು ಮುಂಜಾನೆ 10.00 ಗಂಟೆಗೆ ಉಚಿತ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಗುತ್ತಿದೆ. ಅರ್ಥೊ, ಡೆಂಟಲ್ ಸೇರಿದಂತೆ 06 ನುರಿತ ವೈದ್ಯರಿಂದ ಚಿಕಿತ್ಸೆ ನೀಡಿ ಉಚಿತ ಔಷಧ ವಿತರಿಸಲಾಗುತ್ತಿದೆ. ಅದೇ ದಿನ ರಕ್ತದಾನ ಶಿಬಿರ ಚನ್ನಬಸವಾಶ್ರಮದ ಆವರಣದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಶಿವು ಲೋಖಂಡೆ, ಡಾ. ಅಮೀತ ಅಷ್ಟೂರೆ,

ಡಾ. ಅನೀಲ ಸುಕಾಳೆ , ಜೈರಾಜ ಪಾತ್ರೆ, ಪ್ರಕಾಶ ಮಾಶಟ್ಟೆ, ಆಕಾಶ ರಿಕ್ಕೆ, ಟಿಂಕು ರಾಜಭವನ, ಮಹಾಂತೇಶ ದಶಮುಖೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

3 ದಿನ ಬಸವ ಜಯಂತಿ ಉತ್ಸವ ಅದ್ದೂರಿ ಆಚರಣೆ: ರಜನೀಶ ವಾಲಿ

- **ಮಲ್ಲಮ್ಮ ನುಡಿ ವಾರ್ತೆ, ಬೀದರ್**

ನಾಳೆ(ಏ.18)19 ಹಾಗೂ 20 ಶನಿವಾರ, ಭಾನುವಾರ ಹಾಗೂ ಸೋಮವಾರ ಮೂರು ದಿನಗಳ ಕಾಲ ಬಸವ ಜಯಂತಿ ಬುತ್ಸವ ಕಾರ್ಯಕ್ರಮ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಬಸವ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ಡಾ.ರಜನೀಶ.ಎಸ್.ವಾಲಿ ತಿಳಿಸಿದರು.

ಗುರುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬಸವ ಜಯಂತಿ ಉತ್ಸವ ಸಮಿತಿಯ ವತಿಯಿಂದ ಆಯೋಜಿಸಲಾದ ಪತ್ರಿಕಾಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಬಸವ ಜಯಂತಿ ಉತ್ಸವವನ್ನು ಏಪ್ರಿಲ್ 18ರಿಂದ 20ರ ವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳೊಂದಿಗೆ ವೈಭವವಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ನಾಳೆ(ಏ.18) ಬೆಳಿಗ್ಗೆ 7.00 ರಿಂದ 8.00 ರ ವರೆಗೆ ಡಾ. ಚನ್ನಬಸವ ಪಟ್ಟದ್ದೇವರ ರಂಗ ಮಂದಿರದಲ್ಲಿ ಇಷ್ಟಲಿಂಗ ಪೂಜೆ ನಡೆಯಲಿದೆ. ಶಿವಕುಮಾರ ಪಾಂಬಾಳ ಹಾಗೂ ಸಂಗಡಿಗರಿಂದ ವಚನ ಗಾಯನ ಕಾರ್ಯಕ್ರಮಹಮ್ಮಿಕೊಳ್ಳಲಾಗಿದೆ.ನಂತರ ಬೆಳಿಗ್ಗೆ 9.00 ಕ್ಕೆ ಶ್ರೀ ಸಿದ್ದಾರೂಢ ಮಠದಿಂದ ಪಾಪಪಾರ ಮಂದಿರದ ವರೆಗೆ ಕಾರುಗಳ ಭವ್ಯ ರ್ಯಾಲಿ ನಡೆಯಲಿದೆ.

ಅದೇ ದಿನ ಮಧ್ಯಾಹ್ನ 3.00ಕ್ಕೆ ವಚನ ಸಮೂಹ ನೃತ್ಯ ಸ್ಪರ್ಧೆ ಆಯೋಜಿಸಲಾಗಿದ್ದು, ಪ್ರಥಮ ಬಹುಮಾನ □10,000, ದ್ವಿತೀಯ □5,000 ಹಾಗೂ ತೃತೀಯ □3,000 ನಿಗದಿಪಡಿಸಲಾಗಿದೆ. ಸಂಜೆ 6.30ಕ್ಕೆ ಖ್ಯಾತ ಸಾಹಿತಿ ಡಾ. ವಿ.ಎಸ್. ಹಿರೇಮಠ ಅವರ ವಿಶೇಷ ಉಪನ್ಯಾಸ ನಡೆಯಲಿದ್ದು, ಶರಣೆ ಅಕ್ಕಿಸಿ ರಾಜಕುಮಾರ ಹಿರೇಮಠ ಅವರಿಂದ ವಚನ ಗಾಯನ ಕಾರ್ಯಕ್ರಮವೂ ಇರಲಿದೆ.

ಏಪ್ರಿಲ್ 19ರಂದು ಬೆಳಿಗ್ಗೆ 7.00ರಿಂದ ವಚನ ಪಾರಾಯಣ ನಡೆಯಲಿದೆ. ಮಧ್ಯಾಹ್ನ 3.00ಕ್ಕೆ ವಚನ ಭಜನೆ ಸ್ಪರ್ಧೆ ನಡೆಯಲಿದ್ದು, ಅದಕ್ಕೂ □10,000, □5,000 ಹಾಗೂ □3,000 ಬಹುಮಾನಗಳನ್ನು ನಿಗದಿಪಡಿಸಲಾಗಿದೆ. ಸಂಜೆ 6.00ಕ್ಕೆ ಶರಣರ ವೇಷ ಭೂಷಣ ಕಾರ್ಯಕ್ರಮ ನಡೆಯಲಿದ್ದು, 6.30ಕ್ಕೆ ಶರಣ ಶಂಕರ ಶಾನಭೋಗ ಹಾಗೂ ಸಂಗಡಿಗರಿಂದ ವಚನ ಸಂಗೀತೋತ್ಸವ ನಡೆಯಲಿದೆ.

ಏಪ್ರಿಲ್ 20ರಂದು ಬೆಳಿಗ್ಗೆ 11.00ಕ್ಕೆ ಬಸವ ಜಯಂತಿ ಉತ್ಸವದ ಪ್ರಮುಖ ಕಾರ್ಯಕ್ರಮ ನಡೆಯಲಿದ್ದು, ಪೂಜ್ಯ ಶರಣಬಸವ ದೇವರು ಬೆಳವಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಂಜೆ 5.00ಕ್ಕೆ ಬಸವೇಶ್ವರ ವೃತ್ತದಿಂದ ವಿಶ್ವಗುರು ಬಸವಣ್ಣನವರ ಭಾವಚಿತ್ರದ ಹಾಗೂ ವಚನ ಸಾಹಿತ್ಯದ ಭವ್ಯ ಮೆರವಣಿಗೆ ನಡೆಯಲಿದೆ ಎಂದರು.

ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಶಶಿಧರ ಹೊಸಳ್ಳಿ ಮಾತನಾಡಿ, ಮಹಾನಗರ ಪಾಲಿಕೆಯಿಂದ ಬಸವೇಶ್ವರ ವೃತ್ತದ ಜೀರ್ಣೋದ್ದಾರ ಮಾಡಲಾಗುತ್ತಿದೆ. ಕಳೆದ 10 ವರ್ಷಗಳ ಹಿಂದೆ ಇದನ್ನು ರಿಪೇರಿ ಮಾಡಲಾಗಿತ್ತು. ಅದಾದ ಬಳಿಕ ಈಗ ಅದನ್ನು ಪುನರೂಜ್ಜೀವನಗೊಳಿಸಲಾಗುತ್ತಿದೆ ಎಂದರು.

ಉತ್ಸವ ಸಮಿತಿಯ ಹಿರಿಯ ಸಲಹೆಗಾರರಾದ ಬಾಬುವಾಲಿ ಮಾತನಾಡಿ, ಬಸವ ಭಕ್ತರು ತಮ್ಮ ತಮ್ಮ ಮನೆಗಳ ಮೇಲೆ ಷಟಸ್ಥಲ ಧ್ವಜ, ದೀಪಾಲಂಕಾರ ಮಾಡಬೇಕು. ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಬೇಕೆಂದು ಕರೆ ನೀಡಿದರು.

ಸಮಿತಿಯ ಪ್ರಮುಖರಾದ ಕುಶಾಲ ಪಾಟೀಲ ಖಾಜಾಪುರ, ಸೋಮಶೇಖರ ಪಾಟೀಲ ಗಾದಗಿ, ಮಹಿಳಾ ಸಮಿತಿ ಅಧ್ಯಕ್ಷೆ ಡಾ.ದೇವಕಿ ನಾಗೂರೆ, ಮೆರವಣಿಗೆ ಸಮಿತಿಯ ಅಧ್ಯಕ್ಷ ಧನರಾಜ ಹಂಗರಗಿ, ಬಸವ ಜಯಂತಿ ಉತ್ಸವ ಸಮಿತಿಯ ನಿಟಪೂರ್ವ ಅಧ್ಯಕ್ಷ ಜಯರಾಜ ಖಂಡ್ರೆ, ಸುರೇಶ ಚನಶೆಟ್ಟಿ, ರಾಜೇಂದ್ರಕುಮಾರ ಗಂದಗೆ, ದೀಪಕ ವಾಲಿ ಮಾತನಾಡಿದರು.

ಉತ್ಸವ ಸಮಿತಿಯ ಖಜಾಂಚಿ ಸಿದ್ರಾಮಯ್ಯ ಸ್ವಾಮಿ, ಇತರೆ ಪ್ರಮುಖರಾದ .ಆಧೀಶ ವಾಲಿ, ವಿಕ್ರಮ ಮುದಾಳೆ, ಸುರೇಶ ಸ್ವಾಮಿ, ದಾನಿ ಬಾಬುರಾವ, ನೀಲಮ್ಮ ರೂಗನ್, ವೀರುಪಾಕ್ಷ ಗಾದಗಿ, ಸಂತೋಷ ಪಾಟೀಲ ಹಾಗೂ ಅನೇಕರು ಪತ್ರಿಕಾಗೋಷ್ಟಿಯಲ್ಲಿ ಉಪಸ್ಥಿತರಿದ್ದರು.

ಶಿಕ್ಷಕರ ಹಿತಾಶಕ್ತಿಗಾಗಿ ಕೆಲಸ ಮಾಡುವವರಿಗೆ ಗೆಲ್ಲಿಸುವ ಕಾರ್ಯವಾಗಲಿ: ಪಾತ್ರೆ

- **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ಶಿಕ್ಷಕರ ಹಿತಾಶಕ್ತಿಗಾಗಿ ಕೆಲಸ ಮಾಡುವ ಸಂಘಟನೆಯ ಪದಾಧಿಕಾರಿಗಳಿಗೆ ಗೆಲ್ಲಿಸುವ ಕಾರ್ಯವಾಗಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕ ನಿರಂಜಪ್ಪ ಪಾತ್ರೆ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ಸ್ವಾಭಿಮಾನಿ ಶಿಕ್ಷಕರ ಪ್ರಣಾಳಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು. ಶಿಕ್ಷಕರ ಕುಂದು ಕೊರತೆ ನೀಗಿಸುವ ನಿಟ್ಟಿನಲ್ಲಿ ಸಂಘಟನೆ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಮಾನ್ಯತೆ ನೀಡಿದೆ. ಇದೇ ಎ.19 ರಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಚುನಾವಣೆ ನಡೆಯುತ್ತಲಿದೆ. ಈ ಚುನಾವಣೆಯಲ್ಲಿ ಶಿಕ್ಷಕರ ಹಿತಕ್ಕಾಗಿ ಕೆಲಸ ಮಾಡುವ ಅಭ್ಯರ್ಥಿಗಳಿಗೆ ಗೆಲ್ಲಿಸುವ ಕಾರ್ಯವಾಗಬೇಕು. ಈ ಹಿಂದಿನ ಶಿಕ್ಷಕರ ಸಂಘಟನೆಯ ಪದಾಧಿಕಾರಿಗಳು ಮತ್ತು ಅಧ್ಯಕ್ಷರು ಶಿಕ್ಷಕರ ಯಾವುದೇ ಕಾರ್ಯ ಮಾಡಿಲ್ಲ. ಶಿಕ್ಷಕರಿಗೆ ಮಾನಸಿಕ ಕಿರುಕುಳ ನೀಡುವುದಲ್ಲದೆ, ಅವರಿಂದ ಪಡೆದ ಸದಸ್ಯತ್ವದ ಶುಲ್ಕದ ಲೆಕ್ಕ ಕೂಡ ಕೊಟ್ಟಿಲ್ಲ. ಹೀಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಶ್ರೇಯೋಭಿವೃದ್ಧಿಗಾಗಿ ಜಾತಿ ರಹಿತ ಸ್ವಾಭಿಮಾನಿ ಸಂಘ ಮುಂದೆ ಬಂದಿದೆ. ಬರುವ ಚುನಾವಣೆಯಲ್ಲಿ ಸ್ವಾಭಿಮಾನಿ ಶಿಕ್ಷಕರ ಸಂಘದ ಎಲ್ಲಾ ಪದಾಧಿಕಾರಿಗಳಿ ಆಯ್ಕೆ ಮಾಡುವ ಮೂಲಕ ಶಿಕ್ಷಕರ ಹಿತ ಕಾಪಾಡುವ ಕೆಲಸವಾಗಬೇಕು ಎಂದು ಹೇಳಿದರು.

> “ ಚುನಾವಣೆಯಲ್ಲಿ ಒಟ್ಟು 13 ಜನ ನಿರ್ದೇಶಕರನ್ನು ಆಯ್ಕೆ ಮಾಡಬೇಕಾಗಿದೆ. ಸಾಮಾನ್ಯ ಕ್ಷೇತ್ರದಲ್ಲಿ 9 ಅಭ್ಯರ್ಥಿಗಳು ಮತ್ತು ಮಹಿಳಾ ಕ್ಷೇತ್ರಕ್ಕೆ 4 ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕು. ಒಟ್ಟು 640 ಮತದಾರರಿರುವ ಭಾಲ್ಕಿ ತಾಲೂಕು ಘಟಕಕ್ಕೆ ಎ.19 ರಂದು ಚುನಾವಣೆ ನಿಗದಿಯಾಗಿದೆ. ಒಬ್ಬರು ಸಾಮಾನ್ಯ ಕ್ಷೇತ್ರದಲ್ಲಿ ಗರಿಷ್ಠ 9 ಅಭ್ಯರ್ಥಿಗಳಿಗೆ ಮತ್ತು ಮಹಿಳಾ ಕ್ಷೇತ್ರಕ್ಕೆ ಗರಿಷ್ಠ 4 ಅಭ್ಯರ್ಥಿಗಳಿಗೆ ಮತ ನೀಡಬೇಕು.
>
> **ನಿರಂಜಪ್ಪ ಪಾತ್ರೆ, ನಿರ್ದೇಶಕರು, ಕ.ರಾ.ಸ.ನೌ.ಸಂಘ ಭಾಲ್ಕಿ.**

> “ ಕೆಲವರು ಜಾತಿ ಹೆಸರಿನಲ್ಲಿ ಮತ ಕೇಳುತ್ತಿದ್ದಾರೆ. ಶಿಕ್ಷಕರದ್ದು ಒಂದೇ ಜಾತಿ ಅದು ಶಿಕ್ಷಕ ಜಾತಿ, ಹೀಗಾಗಿ ಜಾತಿ ರಹಿತ, ಶಿಕ್ಷಕರ ಹಿತ ಕಾಪಾಡುವ ಸ್ವಾಭಿಮಾನಿ ಸಂಘದ ಸದಸ್ಯರಿಗೆ ಮತ ನೀಡುವ ಮೂಲಕ ಜಾತಿ ವ್ಯವಸ್ಥೆ ಕೊನೆಗೊಳಿಸುವ ಕಾರ್ಯವಾಗಬೇಕು.
>
> **ಡಾ। ಕಾಶಿನಾಥ ಚಲವಾ, ನಿವೃತ್ತ ಶಿಕ್ಷಕರು ಭಾಲ್ಕಿ.**

> “ ಶಿಕ್ಷಕರಲ್ಲಿ ವೈಮನಸ್ಸು ಬರಬಾರದು ಎಂದು ಅವಿರೋಧ ಆಯ್ಕೆಗೆ ಎಲ್ಲಾ ರೀತಿಯ ಪ್ರಯನ್ನ ಮಾಡಲಾಯಿತು. ಆದರೆ ಶಿಕ್ಷಕರ ಸಂಘದ ಕೆಲ ಪಟ್ಟಭದ್ರ ಹಿತಾಶಕ್ತಿಯ ಅಭ್ಯರ್ಥಿಗಳಿಂದ ಇದು ಸಾಧ್ಯವಾಗಿಲ್ಲ. ಹೀಗಾಗಿ ಎಲ್ಲರ ಮನಸ್ಸಿನ ಆಶೇಯ ಮೇರೆಗೆ ಸ್ವಾಭಿಮಾನ ಸಂಘಟನೆ ರಚಿಸಿ ನನ್ನ ನೇತೃತ್ವದಲ್ಲಿ ಚುನಾವಣೆ ಕಣದಲ್ಲಿ ಧುಮುಕಿದ್ದು ಎಲ್ಲರೂ ಆಶಿರ್ವದಿಸಬೇಕು.
>
> **ಬಸವರಾಜ ದಾನಾ, ಸ್ವಾಭಿಮಾನಿ ಶಿಕ್ಷಕರ ಸಂಘದ ಮುಖಂಡರು, ಭಾಲ್ಕಿ.**

ನಿವೃತ್ತ ಶಿಕ್ಷಕ ಡಾ।ಕಾಶಿನಾಥ ಚಲವಾ ಮಾತನಾಡಿ, ಸುಮಾರು ವರ್ಷಗಳಿಂದ ಕೆಲವು ಪಟ್ಟಭದ್ರ ಹಿತಾಶಕ್ತಿಯ ಶಿಕ್ಷಕರು ಶಿಕ್ಷಕ ಸಂಘಟನೆಯನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಶಿಕ್ಷಕರ ಹಿತಕ್ಕೆ ಧಕ್ಕೆ ತರುವ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಸ್ವಾಭಿಮಾನಿ ಶಿಕ್ಷಕರೆಲ್ಲರೂ ಸೇರಿ ಸಂಘಟನೆ ಮಾಡಿ, ಮುಂದಿನ ದಿನದಲ್ಲಿ ಶಿಕ್ಷಕರಿಗಾಗಿ ಉತ್ತಮ ಕೆಲಸ ಮಾಡುವ ನಿಟ್ಟಿನಲ್ಲಿ ಪಣ ತೊಟ್ಟಿದ್ದಾರೆ.

ಹೀಗಾಗಿ ಬಸವರಾಜ ದಾನಾ ನೇತೃತ್ವದಲ್ಲಿನ ಸ್ವಾಭಿಮಾನಿ ಶಿಕ್ಷಕರ ಸಂಘಕ್ಕೆ ಚುನಾವಣೆಯಲ್ಲಿ ಗೆಲ್ಲಿಸಿ ಪ್ರಾಥಮಿಕ ಶಾಲಾ ಶಿಕ್ಷಕರು ತಮ್ಮ ಹಿತವನ್ನು ಕಾಪಾಡಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು. ನಿವೃತ್ತ ಮುಖ್ಯ ಶಿಕ್ಷಕ ಅಶೋಕ ಬಿರಾದಾರ ಮಾತನಾಡಿ, ಶಿಕ್ಷಕರಾದವರಿಗೆ ಯಾವುದೇ ಜಾತಿ ಭೇದ ವಿರಬಾರದು. ಆದರೆ ಕೆಲವರು ಜಾತಿ ಹೆಸರಿನಲ್ಲಿ ಮತ ಕೇಳುತ್ತಿರುವುದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು. ಮುಖಂಡರಾದ ಬಾಲಾಜಿ ಬೈರಾಗಿ, ಗಣಪತಿ ಭಕ್ತಾ, ಸುಧಾಕರ ಗಾಯಕವಾಡ ಮಾತನಾಡಿ, ’

ಸಂಘವು ಶಿಕ್ಷಕರ ಹಿತಕ್ಕಾಗಿ ದುಡಿಯುಂತಿರಬೇಕು. ಆದರೆ ಮೊದಲಿನ ಸಂಘಟನೆಯ ಪದಾಧಿಕಾರಿಗಳು ಶಾಲು, ಹಾರ, ತುರಾಯಿಗೆ ಸೀಮಿತರಾಗಿದ್ದುದು ದುರದೃಷ್ಟಕರ ಸಂಗತಿ ಎಂದು ಕಿಡಿ ಕಾರಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಕಲ್ಯಾಣರಾವ ಕುಂಬಾರಗೆರೆ, ಸಂದೀಪ ಉಮಾಜಿ, ಗೋವಿಂದರಾವ ಬಿರಾದಾರ, ಸಂಗೀತಾ ನಿಟ್ಟೂರೆ, ಸತ್ಯವಾನ ಕಾಂಬಳೆ, ದತ್ತಾತ್ರಿ ಕಾಟಕರ, ನಾಗನಾಥ ಭೊಸರೆ, ಅನಿತಾ ಮುಧೋಳೆ, ಬಸವರಾಜ ದಾನಾ, ದತ್ತು ಮುದಾಳೆ, ಗಣೇಶ ಸ್ವಾಮಿ, ರಾಮರಾವ ಬಾನಾ, ನರ್ಮಲಾ ಚಲವಾ, ವಿಜಯಲಕ್ಷ್ಮಿ ಪುಜಾರಿ, ರಾಜಕುಮಾರ ಬಿರಾದಾರ, ಮೊಹಮದ ಮುಜಾಮಲ್ಲಿ ಮತ್ತಿತರರು ಇದ್ದರು.

ಏ.20ಕ್ಕೆ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ

- **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಜಿಲ್ಲಾಡಳಿತ, ಜಿಲ್ಲಾ ಪಂಚಯತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ: 20-04-2026 ರಂದು ಬೆಳಿಗ್ಗೆ 11 ಗಂಟೆಗೆ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸದಸ್ಯರಾದ ಸಾಗರ ಈಶ್ವರ ಖಂಡ್ರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾಲಾ ನಾರಾಯಣರಾವ್, ಔರಾದ(ಬಿ) ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ದು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ ಜಿ.ನಮೋಶಿ, ಭೀಮರಾವ ಪಾಟೀಲ್, ಡಾ.ಎಂ.ಜಿ.ಮೂಳೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ (ಕಾಡಾ) ಭೀಮರಾಯನಗುಡಿ ಕಲಬುರಗಿಯ ಅಧ್ಯಕ್ಷ ಬಾಬು ಹೊನ್ನನಾಯ್ಕ, ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ ಗೌಸ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅವರುಗಳು ಭಾಗವಹಿಸಲಿದ್ದಾರೆ. ಹಾಗೂ ಅತಿಥಿ ಉಪನ್ಯಾಸವನ್ನು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬಸವಬೆಳವಿಯ ಶ್ರೀ ಚರಮೂರ್ತಿ ಚರಂತೇಶ್ವರ ವಿರಕ್ತಮಠದ ಪೂಜ್ಯ ಶ್ರೀ ಶರಣ ಬಸವ ಮಹಾಸ್ವಾಮಿಗಳು ಅತಿಥಿ ಉಪನ್ಯಾಸವನ್ನು ನೀಡಲಿದ್ದಾರೆ.

ಪ.ಜಾತಿ ಪ.ಪಂಗಡಗಳ ಅಲೆಮಾರಿ ಅಧ್ಯಕ್ಷರ ಪ್ರವಾಸ

- **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ.ಜಿ. ಅವರು ಏಪ್ರಿಲ್.17 ರಿಂದ 20 ರವರೆಗೆ ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಏಪ್ರಿಲ್.18 ರಂದು ಬೆಳಿಗ್ಗೆ 10.15ಕ್ಕೆ ಬೀದರನ ನೌಬಾದ, ಚೌಳಿ ಕಮಾನ್ ಹತ್ತಿರದಲ್ಲಿ ಪರಿಶಿಷ್ಟ ಜಾತಿಯ ಅಲೆಮಾರಿ ಸಿಂಧೋಳ್ಳು ಮತ್ತು ಮಾಂಗ್‌ಗಾರುಡಿ ಸಮುದಾಯದ ಕುಟುಂಬಗಳು ವಾಸಿಸುತ್ತಿರುವ ಸ್ಥಳ ಜಂಟಿ ವೀಕ್ಷಣೆ ಹಾಗೂ ಕುಂದು ಕೊರತೆಗಳನ್ನು ಆಲಿಸಲಿದ್ದಾರೆ. ಬೆಳಿಗ್ಗೆ 11.30ಕ್ಕೆ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾದಂಡಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಅನುಷ್ಠಾನ ಸಮಿತಿ ಬೀದರ ಇವರ ನೇತೃತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಜಿಲ್ಲಾ ಅನುಷ್ಠಾನ ಸಮಿತಿಯ ಸದಸ್ಯರು ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಂದಿಗೆ ದಿನಾಂಕ: 19-04-2026 ರಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಜಾರಿಯಾದ ವಿವಿಧ ಯೋಜನೆಗಳ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯ ಅನುಪಾಲನೆ ಮತ್ತು ಜಿಲ್ಲಾಡಳಿತಕ್ಕೆ ನಡೆಸಲಾದ ಪತ್ರ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಸಮಾಲೋಚನೆ ನಡೆಸಲಿದ್ದಾರೆ. ಮಧ್ಯಾಹ್ನ 1.30 ಕ್ಕೆ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ. ಸಂಜೆ 4 ಗಂಟೆಗೆ ಬೀದರ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಭೇಟಿ ನೀಡಲಿದ್ದಾರೆ. ಏಪ್ರಿಲ್.19 ರಂದು ಬೀದರ ನಗರದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಏಪ್ರಿಲ್.20 ರಂದು ಬೆಳಿಗ್ಗೆ 10 ರಂದು ಬಸವಕಲ್ಯಾಣದಲ್ಲಿ ನಡೆಯಲಿರುವ ಬಸವ ಜಯಂತಿಯಲ್ಲಿ (ಸ್ಥಳೀಯ ಕಾರ್ಯಕ್ರಮಗಳಲ್ಲಿ) ಭಾಗವಹಿಸಲಿದ್ದಾರೆ.

ಶಿಕ್ಷಕರ ಚುನಾವಣೆ: ಮುಜೀಬ್ ಪೆನಲ್ ಗೆ ಬೆಂಬಲ

- **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ**

ಶೇಕ್ ಮುಜೀಬ್ ಕ್ರಿಯಾಶೀಲ್ ಶಿಕ್ಷಕರ ಪೆನೆಲ್ ತಂಡದಿಂದ ಕಲಬುರಗಿ ಉತ್ತರ ವಲಯದ ಃಇಔ. ಃಖಅ ಕಚೇರಿಯ ಸಿಬ್ಬಂದಿಗಳು ಶೇಖ ಮುಜೀಬ್ ಪೆನೆಲ್ ಗೆ ಇನ್ನೊಮ್ಮೆ ಆರಿಸಿ ತರಲು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಮುಖ್ಯ ಗುರುಗಳ ಸಭೆಯಲ್ಲಿ ಆಸೀಪ್ ಗಂಜ ಶಾಲೆಯ ಮುಖ್ಯ ಗುರುಗಳು ಹಾಗು ಜಿಲ್ಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಕೆ.ಎಚ್. ಮಲ್ಲಿಕಾರ್ಜುನ, ಜಿಲ್ಲಾ ಮುಖ್ಯ ಗುರುಗಳ ಸಂಘದ ಪ್ರದಾನ ಕಾರ್ಯದರ್ಶಿ ಪರಮೇಶ್ವರ ವಾಗ್ದರಗಿ, ತಾಜ್ ಸುಲ್ತಾನಪುರ, ಓಂ ನಗರ ಶ್ರೀ ಶಾಲೆಯ ಮುಖ್ಯ ಗುರುಗಳಾದ ಶಿವಶರಣಪ್ಪ, ಗಣಜಲಖೇಡ ಶಾಲೆಯ ಮುಖ್ಯ ಗುರುಗಳಾದ ವಿಜಯಕುಮಾರ ಪೋಮಾಜಿ, ರಾಮಜಿ ನಗರ ಶಾಲೆಯ ಮುಖ್ಯ ಗುರುಗಳಾದ ಸಿದ್ರಾಮಪ್ಪ ಬಿರಾದಾರ, ಶ್ರೀ ನರೋಣಿ ಮುಖ್ಯ ಗುರುಗಳು ಹಾಗೂ ಕೆ.ಎಸ್.ಆರ್.ಪಿ ಕಾಲೋನಿ ಮುಖ್ಯ ಗುರುಗಳು, ಹಾಗೂ ವಿಜಯನಗರ ಕಾಲೊನಿಯ ಶ್ರೀಶೈಲ ತುಪ್ಪದ ಇದ್ದರು.

ಮುಖ್ಯ ಗುರುಗಳು ಉತ್ತರ ವಲಯ, ಮುಖ್ಯ ಗುರುಗಳ ಸಂಘ ಬರುವ ಶಿಕ್ಷಕರ ಚುನಾವಣೆಯಲ್ಲಿ ಶೇಖ್ ಮುಜೀಬ್ ಪೆನೆಲಗೆ ಮತದಾನ ಮಾಡಲು ಒಗ್ಗಟ್ಟು ನಿರ್ಣಯ ಕೈಗೊಂಡರು ಸಾಮಾನ್ಯ ಪುರುಷ ಅಭ್ಯರ್ಥಿಗಳು ಕ್ರಮ ಸಂಖ್ಯೆ,2 ಅನಿಲಕುಮಾರ ಸುಂಠಾಣ ಕ್ರಮ ಸಂಖ್ಯೆ 6,ಮೌನೇಶ್ ನಿಂಬಾಳ ಕ್ರಮ ಸಂಖ್ಯೆ 7, ನಾತು ಚವ್ಹಾಣ ಕ್ರಮ ಸಂಖ್ಯೆ 8,ಪಂಡಿತರಾಯ ಬಿರಾದಾರ ಕ್ರಮ ಸಂಖ್ಯೆ 10,ರೇವಣಸಿದ್ಧಪ್ಪ ಕ್ರಮ ಸಂಖ್ಯೆ 12,ಶೇಕ್ ಮುಜೀಬ್, ಮಹಿಳಾ ಕ್ಷೇತ್ರದಲ್ಲಿ ಮೀಸಲಾತಿ ಕ್ರಮ ಸಂಖ್ಯೆ 2,ಬಿ ಬಿ ಉಮೇ ಅಸ್ಮಾ,ಕ್ರಮ ಸಂಖ್ಯೆ 4 ರೇಣುಕಾ ಸ ಶಿ. ಕ್ರಮ ಸಂಖ್ಯೆ 6,ಉಮಾದೇವಿ ಸ ಶಿ. ಈ ಎಲ್ಲಾ ತಂಡ ಜೊತೆ ಕೂಡಿಕೊಂಡು ಭರ್ಜರಿ ಪ್ರಚಾರ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ರೋಜಾ ತೈನ್(ಊಕಖ) ಶಾಲೆಯ ಮುಖ್ಯಗುರುಗಳಾದ ಶ್ರೀಮತಿ ಮೀರಾಬಾಯಿ ಇವರನ್ನು ಭೇಟಿಯಾಗಿ ಮತಯಾಚನೆ ಮಾಡಲಾಯಿತು. ಮತದಾರರು ಉತ್ತಮ ಸ್ಪಂದನೆ ನೀಡಿದರು.ನಿಮ್ಮ ತಂಡಕ್ಕೆ ವೋಟ್ ಮಾಡುವ ಮೂಲಕ ಗೆಲುವು ತಂದು ಕೊಡುತ್ತೇವೆ ಎಂದು ಭರವಸೆ ನೀಡಿದರು.

ಲೀಟ್ಲ್ ಫ್ಲಾವರ್ ಕಾಲೇಜಿಗೆ ಶೇ.100 ಫಲಿತಾಂಶ

ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಪ್ರತಿಭೆ: ನಂದಿನಿ

- **ಮಲ್ಲಮ್ಮ ನುಡಿ ವಾರ್ತೆ, ಬೀದರ್**

ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಅತಿ ಹೆಚ್ಚು ಪ್ರತಿಭೆ ಅಡಗಿದೆ ಎಂದು ಮನ್ನಳ್ಳಿ ಠಾಣೆ ಪಿಎಸ್‌ಐ ನಂದಿನಿ ಹೇಳಿದರು. ತಾಲೂಕಿನ ಯಾಕತಪೂರ್ ಗ್ರಾಮದ ಲೀಟ್ಲ್ ಫ್ಲಾವರ್ ಪಿಯು ಕಾಲೇಜ್‌ನಲ್ಲಿ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶ ಬಂದ ಹಿನ್ನೆಲೆ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದು ಸ್ಪರ್ಧಾತ್ಮಕ ಯುಗವಾಗಿದ್ದು, ಹೊಸಹೊಸ ತಾಂತ್ರಿಕ ಪ್ರಾವಿಣ್ಯತೆಯನ್ನು ಪಡೆದು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಮುಂದೆ ಸಾಗಬೇಕು ಎಂದು ಸಲಹೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಅಧ್ಯಕ್ಷ ಸೈಯದ್ ಅಹ್ಮದ್ ಮುದ್ದೆ ಮಾತನಾಡಿ, ಎಸ್‌ಎಸ್ ಮುದ್ದೆ ಸಂಸ್ಥೆಯಡಿಯಲ್ಲಿ ಈಗಾಗಲೇ ಹಲವಾರು ವರ್ಷಗಳಿಂದ ಗ್ರಾಮೀಣ ಭಾಗದಲ್ಲಿ ಪೂರ್ವ ಪ್ರಾಥಮಿಕದಿಂದ ಹಿಡಿದು ಪ್ರೌಢ ಶಿಕ್ಷಣದವರೆಗೆ ಗುಣಮಟ್ಟದ ಶಿಕ್ಷಣ ನೀಡುತ್ತಾ ಬರಲಾಗಿದೆ. ಈಗ ಪಿಯುಸಿ ವಿಜ್ಞಾನ ತರಗತಿಗಳು ಆರಂಭಿಸಿದ್ದು, ಪ್ರಸಕ್ತ ವರ್ಷದ ಮೊದಲ ಬ್ಯಾಚ್‌ನಲ್ಲಿ ದ್ವಿತಿಯ ಪಿಯುಸಿ ಫಲಿತಾಂಶ ನೂರಕ್ಕೆ ನೂರು ಬಂದಿದ್ದು, ಇದು ಗ್ರಾಮೀಣ ಭಾಗದಲ್ಲಿನ ವಿದ್ಯಾರ್ಥಿಗಳು ಯಾವುದರಲ್ಲೂ ಕಡಿಮೆ ಇಲ್ಲ ಎಂಬುದನ್ನು ತೋರಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಾಜಿ ಎಪಿಎಂಸಿ ಅಧ್ಯಕ್ಷ ಅನೀಲ್ ಪನ್ನಾಳೆ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಸುಜಾವೋದ್ದೀನ್ ಸಾತೋಳಿ, ಪ್ರಾಂಶುಪಾಲ ಚಾಂದ ಪಾಶಾ, ಪ್ರೌಢಶಾಲಾ ಮುಖ್ಯೋಪಾಧ್ಯಾಯಿನಿ ಆಶೀಯಾ ಅಂಜು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅತೀ ಹೆಚ್ಚು ಅಂಕಗಳಿಸಿದ ಶಾಜಿಯಾ (95%), ಶಹರೀನ್ (ಶೇ. 93), ಸ್ನೇಹಾ (ಶೇ. 91), ಭಾಗ್ಯಲಕ್ಷ್ಮಿ (ಶೇ.90), ನಿಕಿತಾ (ಶೇ.90), ಆಯಿಶಾ (88%) ಹಾಗೂ ಶರೀಫ್ ಮುದ್ದೆ (89%) ಸೇರಿದಂತೆ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಟಾಪರ್‌ಗಳಿಗೆ ದೆಹಲಿ ಟೂರ್

ಪ್ರತಿ ವರ್ಷದಂತೆ ಈ ವರ್ಷವೂ ಸಾಧಕ ವಿದ್ಯಾರ್ಥಿಗಳಿಗೆ ನವದೆಹಲಿ ಹಾಗೂ ಆಗ್ರಾಗೆ ಪ್ರವಾಸ ಕರೆದ್ಯೊಯ್ಯಲಾಗುವುದು. ಈ ವರ್ಷ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಸಾಧಕ ವಿದ್ಯಾರ್ಥಿಗಳಿಗೆ ಶೀಘ್ರದಲ್ಲಿ ಉಚಿತವಾಗಿ ವಿಮಾನದಲ್ಲಿ ಪ್ರವಾಸಕ್ಕೆ ಕರೆದೊಯ್ಯಲಾಗುವುದು.

ಸೈಯ್ಯದ್ ಅಹ್ಮದ್ ಮುದ್ದೆ
ಅಧ್ಯಕ್ಷ, ಲೀಟ್ಲ್ ಫ್ಲಾವರ್ ಕಾಲೇಜ್, ಯಾಕತಪೂರ್.

ಕಾನೂನು ಬಾಹಿರ ನೇಮಕಾತಿ ಆರೋಪ: ಗುತ್ತಿಗೆ ನೌಕರರ ವಜಾಗೆ ಕರವೇ ಆಗ್ರಹ

- **ಮಲ್ಲಮ್ಮ ನುಡಿ ವಾರ್ತೆ, ಬೀದರ್**

ಬ್ರೀಮ್ಸ್ ಸಂಸ್ಥೆಯ ಹಿಂದಿನ ನಿರ್ದೇಶಕರಾಗಿದ್ದ ಡಾ.ಶಿವಕುಮಾರ್ ಶೆಟ್ಕರ್ ಅವರ ಅವಧಿಯಲ್ಲಿ ಕಾನೂನುಬಾಹಿರ ಹಾಗೂ ನಿಯಮ ಉಲ್ಲಂಘನೆ ಮಾಡಿ ನೇಮಕಗೊಂಡಿರುವ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರನ್ನು ತಕ್ಷಣ ಸೇವೆಯಿಂದ ವಜಾಗೊಳಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಜಿಲ್ಲಾ ಸಮಿತಿ ಬೀದರ್ ಆಗ್ರಹಿಸಿದೆ. ಈ ಸಂಬಂಧ ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣ ಪ್ರಕಾಶ ಪಾಟೀಲ ಅವರಿಗೆ, ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಪತ್ರ ಸಲ್ಲಿಸಲಾಗಿದೆ.

ಮನವಿ ಪತ್ರದಲ್ಲಿ, ಬ್ರೀಮ್ಸ್‌ನ ಹಿಂದಿನ ನಿರ್ದೇಶಕರಾಗಿದ್ದ ಡಾ.ಶಿವಕುಮಾರ್ ಶೆಟ್ಕರ್ ಹಾಗೂ ಕಚೇರಿಯ ಕೆಲವು ಸಿಬ್ಬಂದಿಗಳು ಸೇರಿಕೊಂಡು ಸುಮಾರು 10ರಿಂದ 12 ಗುತ್ತಿಗೆ ಮತ್ತು ಹೊರಗುತ್ತಿಗೆ ಸಿಬ್ಬಂದಿಗಳನ್ನು ಸರ್ಕಾರದ ನಿಯಮಗಳನ್ನು ಪಾಲಿಸದೆ ಕಾನೂನುಬಾಹಿರವಾಗಿ ನೇಮಕ ಮಾಡಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಶುಶ್ರೂಷಕ ಅಧಿಕಾರಿ ಲಿಂಗರಾಜ್ ಹಿರೇಮಠ್, ಟ್ಯೂಟರ್ ಡಾ.ಜೈಸಿಂಗ್ ಡಿ.ಹಾಗೂ ಕಚೇರಿ ಅಧೀಕ್ಷಕರಾದ ಶ್ರೀನಿವಾಸ ಜಮಾದಾರ ಅವರ ಹೆಸರನ್ನೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಸಿಬ್ಬಂದಿಗಳಲ್ಲಿ ಕೆಲವರು ಸಂಸ್ಥೆಯಲ್ಲಿ ನಿಯಮಿತವಾಗಿ ಸೇವೆ ಸಲ್ಲಿಸದೆ, ಅಕ್ರಮವಾಗಿ ಹಾಜರಾತಿ ಪಡೆದು ವೇತನ ಪಡೆಯುತ್ತಿದ್ದಾರೆ ಎಂಬ ಗಂಭೀರ ಆರೋಪವನ್ನು ಕರವೇ ಮಾಡಿದೆ.

ಇಂತಹ ಸಿಬ್ಬಂದಿಗಳನ್ನು ಗುರುತಿಸಿ 15 ದಿನಗಳೊಳಗೆ ತಕ್ಷಣ ಸೇವೆಯಿಂದ ವಜಾಗೊಳಿಸಬೇಕು ಎಂದು ಸಂಘಟನೆ ಒತ್ತಾಯಿಸಿದೆ.

ಒಂದು ವೇಳೆ ಈ ವಿಚಾರದಲ್ಲಿ ಕ್ರಮ ಕೈಗೊಳ್ಳದಿದ್ದರೆ, ಬ್ರೀಮ್ಸ್ ಸಂಸ್ಥೆ ಎದುರು ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಪೀಟರ್ ಚಿಟಗುಪ್ಪಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ್ ಮರ್ಜಾಪುರ್, ಜಿಲ್ಲಾ ಸಂಚಾಲಕ ಬಸವರಾಜ್ ನಂದಗಾವ್, ವಿದ್ಯಾರ್ಥಿ ಘಟಕ ಅಧ್ಯಕ್ಷ ನಾಗೇಶ ರಾಯಣ್ಣೂರ್, ಜಿಲ್ಲಾ ಸಹಕಾರ್ಯದರ್ಶಿ ಅಲೆಕ್ಸಾಂಡರ್, ಜಿಲ್ಲಾ ಮುಖಂಡ ಸಂಜಯ್ ಕುಮಾರ್, ನಗರ ಪ್ರಧಾನ ಕಾರ್ಯದರ್ಶಿ ಗಿರೀಶ್ ಓಂಕಾರೆ, ದಕ್ಷಿಣ ಕ್ಷೇತ್ರದ ಉಪಾಧ್ಯಕ್ಷ ಧನರಾಜ್ ಚಿಟ್ಟವಾಡಿ, ದಕ್ಷಿಣ ಕ್ಷೇತ್ರದ ಕಾರ್ಯದರ್ಶಿ ರಾಜಗೊಂಡ, ಗ್ರಾಮ ಘಟಕ ಅಧ್ಯಕ್ಷ ಅನಿಲ್ ಕಮಠಾಣಾ, ಗ್ರಾಮ ಘಟಕ ಕಾರ್ಯಾಧ್ಯಕ್ಷ ಸುಮಂತ ಸೇರಿದಂತೆ ಅನೇಕ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

ಬಾಲಕಿಯರ ಸರಕಾರಿ ಕಾಲೇಜಿಗೆ 63.03 ಫಲಿತಾಂಶ

- **ಮಲ್ಲಮ್ಮ ನುಡಿ ವಾರ್ತೆ, ರಾಯಚೂರು**

ನಗರದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1ರ ಪರೀಕ್ಷೆಗೆ ಕಲಾ ವಿಭಾಗ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗ ಸೇರಿದಂತೆ ಒಟ್ಟು 614 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, ಈ ಪೈಕಿ 387 ವಿದ್ಯಾರ್ಥಿಗಳು ಪಾಸ್ ಆಗುವ ಮೂಲಕ ಕಾಲೇಜಿನ ಒಟ್ಟು ಶೇಕಡ 63.03ರಷ್ಟು ಫಲಿತಾಂಶವನ್ನು ಪಡೆಯುವ ಉತ್ತಮ ಸಾಧನೆ ಮಾಡಲಾಗಿದೆ ಎಂದು ಪ್ರಾಂಶುಪಾಲರಾದ ಡಾ.ಕುಂಟೆಪ್ಪ ಗೌರಿಪುರ ಹೆಚ್. ಅವರು ತಿಳಿಸಿದ್ದಾರೆ.

ಮೈಸೂರು: ಮೈಸೂರಿನಲ್ಲಿ ಅಶೋಕಪುರಂ. ಯೂಥ್ ಅಸೋಸಿಯನ್. ಗೆಳೆಯರ ಬಳಗದಿಂದ. ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ. ವಿವಿಧ ಇಲಾಖೆಯಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು.ಜಿಲ್ಲಾ ಉಸ್ತುವಾರಿ ಮಂತ್ರಿ ಹಾಗೂ. ಸಮಾಜ ಕಲ್ಯಾಣ ಸಚಿವರಾದ. ಡಾಕ್ಟರ್ ಎಚ್ ಸಿ ಮಾದೇವಪ್ಪನವರು. ಮಾಜಿ ಶಾಸಕ ಸೋಮಣ್ಣ. ಮಾಜಿ ಮೇಯರ್ ಪುರುಷೋತ್ತಮ್.. ಯೂಥ್ ಸಮಿತಿಯ ಅಧ್ಯಕ್ಷರು ಪದಾಧಿಕಾರಿಗಳು ಮುಂತಾದ ಗಣ್ಯರು ಪಾಲ್ಗೊಂಡಿದ್ದರು.

ಹಿತೈಶಿ ಪೆನಲ್ ಗೆ ಬೆಂಬಲಿಸಲು ಮನವಿ

- **ಮಲ್ಲಮ್ಮ ನುಡಿ ವಾರ್ತೆ, ಕಮಲಾಪೂರ**

ತಾಲೂಕಿನ ಎಲ್ಲಾ ಪ್ರಧಾನ ಗುರುಗಳು ಹಾಗೂ ಎಲ್ಲ ಗುರುಗಳು-ಗುರುಮಾತೆಯರಿಗೆ ನಮ್ಮ ನಮಸ್ಕಾರಗಳು ಮಾನ್ಯ ಶಿಕ್ಷಕ-ಶಿಕ್ಷಕಿ ಬಂಧು ಭಗಿನಿಯರಲ್ಲಿ ನಾವು ವಿನಂತಿ ಮಾಡಿಕೊಳ್ಳುವ ಉದ್ದೇಶ ಏನೆಂದರೆ ಸದಾಕಾಲ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಕಮಲಾಪೂರ ತಾಲೂಕ ಘಟಕದ ವತಿಯಿಂದ ನಾವು ಚುನಾವಣೆಯಲ್ಲಿ ಸ್ಪರ್ಧಿಸಿದ್ದೇವೆ ಸೃಜನಶೀಲ ಚಟುವಟಿಕೆಗಳ ಹಾಗೂ ಪ್ರಾಮಾಣಿಕ ಹೋರಾಟದ ಮುಖೇನ ಸಂಘದ ಸಂಘಟನೆ ಮತ್ತು ಶಿಕ್ಷಕರ ಸಮಸ್ಯೆಗಳ ಕುರಿತು ಧ್ವನಿ ಎತ್ತಿ ಸೇವೆ ಮಾಡಲು ಪ್ರಾಮಾಣಿಕವಾಗಿ ದುಡಿಯುತ್ತೇವೆ. ಆದ್ದರಿಂದ ಪ್ರಜ್ಞಾವಂತರಾದ ತಾವು ತಮ್ಮ ಅತ್ಯಮೂಲ್ಯವಾದ ಔ6 ಮತಗಳನ್ನು ನಮ್ಮ ಪ್ಯಾನಲಗೆ ನೀಡಿ ಬಹುಮತದಿಂದ ಆರಿಸಿ ತಂದು ತಮ್ಮ ಸೇವೆಗೆ ಅಣಿಗೊಳಿಸಬೇಕೆಂದು ಅವರು ವಿನಂತಿ ಮಾಡಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಶ್ರೀನಿವಾಸ ಗುತ್ತೇದಾರ ನೇತೃತ್ವದಲ್ಲಿ ಮಹಾದೇವ ಪಾಟೀಲ, ಮನೋಹರ, ಶ್ರೀಮತಿ ರಾಜಶ್ರೀ ಪಾಟೀಲ, ಶ್ರೀಮತಿ ಪಾರ್ವತಿ, ಶ್ರೀಮತಿ ರೇಖಾ ಗುತ್ತೇದಾರ ಸೇರಿದಂತೆ ಶಿಕ್ಷಕರು ಇದ್ದರು.

ಪೊಲೀಸ್ ವರಿಷ್ಠಾಧಿಕಾರಿಗಳಿಂದ ಕಳುವಾದ ವಸ್ತುಗಳು ವಾರಸುದಾರರಿಗೆ ವಿತರಣೆ

- **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ಹುಮನಾಬಾದ ಪೊಲೀಸ್ ಉಪ ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಕಳ್ಳತನ, ದರೋಡೆ ಸೇರಿದಂತೆ ಸುಮಾರು 20 ಪ್ರಕರಣಗಳು ವರದಿಯಾಗಿದ್ದವು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಹಾಗೂ ಡಿವೈಎಸ್ಪಿ ಮಡೋಳಪ್ಪ ಇವರ ಮಾರ್ಗದರ್ಶನ ಮೇರೆಗೆ ಹುಮನಾಬಾದ ಸಿಪಿಐ ಸಂತೋಷ, ಚಿಟಗುಪ್ಪ ಸಿಪಿಐ ಶ್ರೀನಿವಾಸ ಅಲ್ಲಾಪುರೇ, ಮಂಠಾಳ ಸಿಪಿಐ ಅಮೂಲ ಕಾಳೆ, ಬಸವಕಲ್ಯಾಣ ಸಿಪಿಐ ಅಲಿಸಾಬ್ ಇವರುಗಳ ನೇತೃತ್ವದಲ್ಲಿ ಅಪರಾಧ ವಿಭಾಗ, ಕಾನೂನು ಸುವ್ಯವಸ್ಥೆ ಪೊಲೀಸ್ ಠಾಣೆಯ ಪಿಎಸ್ಐ ರವರು 20 ಪ್ರಕರಣಗಳು ಪತ್ತೆ ಹಚ್ಚಿ ಒಟ್ಟು 36,05,300. ರೂಪಾಯಿ ಸ್ವತ್ತನ್ನು ಜಪ್ತಿ ಮಾಡಲಾಗಿದೆ. 8 ದ್ವಿಚಕ್ರ ವಾಹನ, 1ಮಹಿಂದ್ರ್ ಗೂಡ್ಸ್, ಆಟೋ ರಿಕ್ಷಾ, ಒಟ್ಟು 8,70,000 ಬೆಲೆ ಬಾಳುವ ವಾಹನಗಳು ಜಪ್ತಿ ಮಾಡಲಾಗಿದೆ. ಕಳುವುಯಾದ ಪ್ರಕರಣಗಳ ಸ್ವತ್ತುಗಳು ವಾರಸುದಾರರಿಗೆ ವಿತರಿಸಲಾಯಿತು. ಇದೇ ವೇಳೆ ಸಾರ್ವಜನಿಕರಿಗೆ ಸುಮಾರು 400 ಹೆಲ್ಮೆಟ್ ಉಚಿತವಾಗಿ ವಿತರಿಸಿದರು. ಈ ಸಂದರ್ಭದಲ್ಲಿ ಪಿಎಸ್ಐಗಳಾದ ಸುರೇಶಕುಮಾರ್ ಚವ್ಹಾಣ, ಬಸಲಿಂಗಪ್ಪ ಎಂ. ಗೋಧಿಹಾಳ, ಮಹೇಂದ್ರ, ಸವಿತಾ, ಜೈಶ್ರೀ ಸೇರಿದಂತೆ ವಿವಿಧ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಬಳ್ಳಾರಿ ಜಿಲ್ಲೆಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಬೇಕು: ವೆಂಕಟೇಶ್ ಹೆಗಡೆ

- **ಮಲ್ಲಮ್ಮ ನುಡಿ ವಾರ್ತೆ , ಬಳ್ಳಾರಿ**

ಜಿಲ್ಲೆಗೆ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆರಂಭಿಸಲು ಜಿಲ್ಲೆಯ ರಾಜಕಾರಣಿಗಳು, ಸಹಕಾರಿಗಳು,ಬ್ಯಾಂಕಿನ ನಮ್ಮ ಭಾಗದ ನಿರ್ದೇಶಕರು,ಮತ್ತು ಸಾರ್ವಜನಿಕರು ಸರ್ಕಾರದ ಮೇಲೆ ಒತ್ತಡ ತರಲು ಮುಂದಾಗಬೇಕು ಎಂದು ಕೆಪಿಸಿಸಿ ಮಾಧ್ಯಮ ವಕ್ತಾರ ವೆಂಕಟೇಶ್ ಹೆಗಡೆ ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು. ಒಂದು ಜಿಲ್ಲೆಗೆ ಒಂದು ಬ್ಯಾಂಕ್ ಎಂದು ಕೇಂದ್ರ ಸರ್ಕಾರದ ಸಹಕಾರಿ ಇಲಾಖೆ ಈ ಹಿಂದೆಯೇ ಜಿಲ್ಲೆಗೆ ಪ್ರತ್ಯೇಕ ಬ್ಯಾಂಕ್ ಆರಂಭಿಸಲು ಬೇಕಾದ ಕ್ರಮ ವಹಿಸುವಂತೆ ಸೂಚನೆ ನೀಡಿದೆ. ಅಗತ್ಯ ಸಿಬ್ಬಂದಿ ನೇಮಕಾತಿ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸಲು ಎಲ್ಲಾ ರೀತಿಯ ಬೆಂಬಲ ನೀಡುವುದಾಗಿ ಘೋಷಿಸಿದೆ. ಇದಕ್ಕೆ ತಕ್ಕಂತೆ ರಾಜ್ಯ ಸಹಕಾರಿ ಇಲಾಖೆಯೂ ಕ್ರಮ ವಹಿಸಿದೆ ಅಧಿಕಾರಿಗಳ ನಿರ್ಲಕ್ಷ್ಯ ಒಂದು ಕಡೆಯಾದರೆ ನಮ್ಮ ಭಾಗದಲ್ಲಿ ಬರುವ ಬ್ಯಾಂಕಿನ ನಿರ್ದೇಶಕರುಗಳ ನಿರಾಸಕ್ತಿಯೂ ಇನ್ನೊಂದು ಕಾರಣವಾಗಿ ಇದುವರೆಗೆ ನಮ್ಮ ಜಿಲ್ಲೆಯಲ್ಲಿ ನಮ್ಮದೇ ಬಿಡಿಸಿಸಿ ಬ್ಯಾಂಕ್ ಆರಂಭ ಆಗಿಲ್ಲ.ಬಳ್ಳಾರಿ ಜಿಲ್ಲೆ ಆರ್ಥಿಕವಾಗಿ ಸಾಕಷ್ಟು ಪ್ರಬಲವಾಗಿದೆ.ವಾಣಿಜ್ಯ ವಹಿವಾಟುಗಳಲ್ಲಿ ಮುಂದಿದೆ. ಆದರೆ,ಇದುವರೆಗೆ ನಮಗೆ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಇರುವುದಿಲ್ಲ. ಈ ಮೊದಲು ಸಹ ಬಿಡಿಸಿಸಿ ಬ್ಯಾಂಕ್ನ ಪ್ರಧಾನ ಕಚೇರಿ ಹೊಸಪೇಟೆಯಲ್ಲಿಯೇ ಇತ್ತು. ಒಂದೇ ಜಿಲ್ಲೆ ಆಗಿದ್ದರಿಂದ ಎಲ್ಲರೂ ಸಹಕಾರ ಮಾಡಿಕೊಂಡು ಹೋಗಿದ್ದರು. ಆದರೆ, ಇದೀಗ ಜಿಲ್ಲೆ ಆರಂಭವಾಗಿ 6 ವರ್ಷ ಆಗುತ್ತಾ ಬಂದರೂ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆರಂಭ ಆಗಿರುವುದಿಲ್ಲ.

ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆಗುವುದರಿಂದ ಬ್ಯಾಂಕಿನ ಬ್ರಾಂಚ್ಗಳ ವಿಸ್ತರಣೆಗೆ ಅವಕಾಶ ಆಗಲಿದೆ.ವಿಜಯನಗರ ಜಿಲ್ಲೆಯಲ್ಲಿ ಪ್ರಧಾನ ಕಚೇರಿ ಇರುವುದರಿಂದಲೇ ಅಲ್ಲಿ ಹೋಬಳಿ,ಗ್ರಾಮ ಮಟ್ಟದ ಬಿಡಿಸಿಸಿ ಬ್ಯಾಂಕ್ಗಳು ತಲೆ ಎತ್ತಿವೆ.ನಮ್ಮಲ್ಲಿ ತಾಲ್ಲೂಕು ಮಟ್ಟದಲ್ಲಿ ಬಿಟ್ಟರೆ ಹೋಬಳಿ, ಗ್ರಾಮ ಮಟ್ಟಕ್ಕೆ ಬ್ಯಾಂಕ್ ಪರಿಚಯವೇ ಆಗಿಲ್ಲ.

ಈ ತಕ್ಷಣ ನಮ್ಮ ಜಿಲ್ಲೆಯಲ್ಲಿರುವ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಸಂಸದರು ಈ ಕಡೆ ಹೆಚ್ಚಿನ ಗಮನ ಹರಿಸಬೇಕು. ಈ ಮೂಲಕ ನಮ್ಮದೇ ಆದ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆರಂಭಕ್ಕೆ ಮುಂದಾಗಬೇಕು ಎಂದಿದ್ದಾರೆ

ಸಿಬಿಎಸ್ಇ ಎಸ್ಎಸ್ಎಲ್ಸಿ ಫಲಿತಾಂಶ ಪ್ರಕಟ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಪ್ರಕಟವಾದ ಸಿಬಿಎಸ್ಇ ಎಸ್ಎಸ್ಎಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ನಮ್ಮ ಡಿ ಡಿ ಯು ಶಾಲೆ ಶಹಾಪುರ ಶೇ.100 ಫಲಿತಾಂಶ ಸಾಧಿಸಿದೆ. ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ, ಬಿಂದು ತಂದೆ ಶರಣಗೌಡ ಗರಿಷ್ಠ ಶೇ. 95.8 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಪರೀಕ್ಷೆಗೆ ಹಾಜರಾದ 92 ವಿದ್ಯಾರ್ಥಿಗಳ ಪೈಕಿ ಡಿಸ್ಟಿಂಕ್ಷನ್ 21 ಪ್ರಥಮ ಶ್ರೇಣಿ 40 ದ್ವಿತೀಯ ಶ್ರೇಣಿ–31ಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು ಶಾಲೆಯ ಹೆಮ್ಮೆಯ ವಿಷಯವಾಗಿದೆ.

ಈ ಸಾಧನೆಗೆ ಸಂಸ್ಥಾಪಕರಾದ ಡಾ. ಭೀಮಣ್ಣ ಮೇಟಿ, ಕಾರ್ಯದರ್ಶಿ ದೇವೀಂದ್ರಪ್ಪ ಮೇಟಿ, ಅಧ್ಯಕ್ಷೆ ವಿದ್ಯಾ ಬಿ ಮೇಟಿ, ಆಡಳಿತಾಧಿಕಾರಿ ಮಲ್ಲಿಕಾರ್ಜುನ ಮೇಟಿ ಹಾಗೂ ಎಲ್ಲಾ ಶಿಕ್ಷಕ ವೃಂದವು ವಿದ್ಯಾರ್ಥಿಗಳನ್ನು ಪ್ರಶಂಸಿಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ನಾಗರಾಜ ಅಂಬೇಡ್ಕರ್ ರತ್ನ ಪ್ರಶಸ್ತಿ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಸಾಮಾಜಿಕಕ್ಷೇತ್ರದಲ್ಲಿನಗಣನೀಯ ಮತ್ತು ನಿರಂತರ ಸೇವೆಯನ್ನು ಗುರುತಿಸಿ, ಯಾದಗಿರಿ ನಗರದ ವಕೀಲರಾದ ನಾಗರಾಜ ಬೀರನೂರ ಅವರಿಗೆ ಪ್ರತಿಷ್ಠಿತ 'ಡಾ. ಬಿ.ಆರ್. ಅಂಬೇಡ್ಕರ್ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯ ಅಂಗವಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬೆಂಗಳೂರಿನ ಸರ್. ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್) ಏಪ್ರಿಲ್ 15ರಂದು ಆಯೋಜಿಸಲಾಗಿದ್ದ ಅದ್ದೂರಿ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು . ಈ ಸಮಾರಂಭದಲ್ಲಿ ರಾಜ್ಯದ ಉಪ ಲೋಕಾಯುಕ್ತರಾದ ಬಿ. ವೀರಪ್ಪ, ಪ್ರಮುಖರಾದ ಹೆಚ್.ಟಿ. ನರೇಂದ್ರ ಪ್ರಸಾದ್, ಎಸ್. ರಾಚಯ್ಯ, ರೈಲ್ವೇಸ್ ಪೊಲಿಸ್ ಉಪ–ಮಹಾನಿರ್ದೇಕ್ಷಕರಾದ ಜೆ.ಕೆ. ರಶ್ಮಿ, ಮುಖ್ಯ ಆಯುಕ್ತರಾದ ಮಹೇಶ್ವರರಾವ್ ಹಾಗೂ ಎ. ಅಮೃತರಾವ್ ಸೇರಿದಂತೆ ನಾಡಿನ ಹಲವು ಗಣ್ಯರು ಉಪಸ್ಥಿತರಿದ್ದರು.

ಶಾಲಾ ಬೇಸಿಗೆ ಶಿಬಿರಕ್ಕೆ ಉಪ ನಿರ್ದೇಶಕ ಕೆ.ಡಿ.ಬಡಿಗೇರ ಭೇಟಿ

ಮಕ್ಕಳ ಮನೋಲ್ಲಾಸ ಉಚಿತ ಬೇಸಿಗೆ ಶಿಬಿರ
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಜನತಾಪುರ

- **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಸಮೀಪದ ಜನತಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವ 15 ದಿನಗಳ ಉಚಿತ ಮಕ್ಕಳ ಬೇಸಿಗೆ ಶಿಬಿರಕ್ಕೆ ರಾಯಚೂರು ಜಿಲ್ಲೆಯ ಉಪ ನಿರ್ದೇಶಕರಾದ ಕೆ.ಡಿ. ಬಡಿಗೇರ ಭೇಟಿ ನೀಡಿ ಪರಿಶೀಲಿಸಿದರು.

ಇಂಡಿಯಾ ಸುಧಾರ್ ಎಜುಕೇಶನ್ ಹಾಗೂ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿರುವ "ಮಕ್ಕಳ ಮನೋಲ್ಲಾಸ" ಶಿಬಿರದ ಎರಡನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು, ಮಕ್ಕಳೊಂದಿಗೆ ಸಂವಾದ ನಡೆಸಿ ಶಿಬಿರದ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರು. ಮಕ್ಕಳು ಇಲ್ಲಿ ಕಲಿಯುವ ವಿಷಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರಕಾರಿ ಶಾಲೆಗಳಲ್ಲಿ ಇಂತಹ ಶಿಬಿರಗಳ ಆಯೋಜನೆ ವಿರಳವಾಗಿದ್ದು, ಶಿಕ್ಷಕರ ಈ ಪ್ರಯತ್ನ ಶ್ಲಾಘನೀಯವಾಗಿದೆ ಎಂದು ಹೇಳಿದರು. ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಹೊರತರುವಲ್ಲಿ ಇಂತಹ ಶಿಬಿರಗಳು ಸಹಾಯಕವಾಗಲಿವೆ ಎಂದರು.

ಸಹ ಶಿಕ್ಷಕ ಮೌನೇಶ್ ಎಂ. ವಿಶ್ವಕರ್ಮ, ಅತಿಥಿ ಶಿಕ್ಷಕಿಂಯರು ಕುಮಾರಿ ಗೀತಾ, ಜ್ಯೋತಿ ಯರದಿಹಾಳ, ಯೋಗ ಶಿಬಿರಾರ್ಥಿ ನೀಲಮ್ಮ, ಸೇರಿದಂತೆ ಶಿಕ್ಷಕರು ಉಪಸ್ಥಿತರಿದ್ದರು.

ಬೆಟ್ಟದಪುರ ಠಾಣೆಗೆ ನಾಗಲಕ್ಷ್ಮಿ ಭೇಟಿ

- **ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ**

ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣೆಗೆ ಇಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೇ ನಾಗಲಕ್ಷ್ಮಿ ಚೌದರಿ ಅವರು ಭೇಟಿ ನೀಡಿ ನೂರಾರು ಮಹಿಳೆಯರ ಹಾಗೂ ಸಾರ್ವಜನಿಕರ ದೂರುಗಳನ್ನು ಪರಿಶೀಲಿಸಿ ಪೊಲೀಸ್ ಠಾಣೆಯಲ್ಲಿ ಹಲವಾರು ಪ್ರಕರಣಗಳಲ್ಲಿ ಸುಳ್ಳು ಮೊಕದ್ದಮೆಗಳು ದಾಖಲಾಗುತ್ತಿದ್ದು ಅವುಗಳಲ್ಲೂ ಪೊಲೀಸರು ಪರಿಶೀಲಿಸಿ ಯಾವುದೇ ಮಹಿಳೆಗೆ ಅನ್ಯಾಯವಾಗದಂತೆ ಪೊಲೀಸರು ಎಚ್ಚರವಹಿಸಿ ತಪ್ಪಿಸುತ್ತಿರ ವಿರುದ್ಧ ಮಾತ್ರ ದೂರು ದಾಖಲಿಸಿಕೊಂಡು ಅಮಾಯಕರ ಮೇಲೆ ಯಾವುದೇ ದೌರ್ಜನ್ಯ ಎಸಗಬಾರದೆಂದು ಪೊಲೀಸರಿಗೆ ತಿಳಿಸಿದರು ಶಾಲೆಗಳಲ್ಲಿ ಓದುವ ಮಕ್ಕಳಿಗ ಮೇಲೆ ಅಪಘಾತಗಳು ಮತ್ತು ಶಾಲೆಗಳಲ್ಲಿ ಆಗುವ ಅನಾಹುತಗಳಿಗೆ ಖಾಸಗಿ ಶಾಲೆಯವರು ಯಾವುದೇ ರೀತಿಯ ಮಕ್ಕಳಿಗೆ ಚಿಕಿತ್ಸೆ ನೀಡದೆ ಹಲವಾರು ಪ್ರಕಣಗಳಲ್ಲಿ ನ್ಯೂನ್ಯತೆ ಅಂಗವಿಕಲತೆ ಉಂಟಾಗಿರುವುದರಿಂದ ಅಂತಹ ಪ್ರಕರಣಗಳಲ್ಲಿ ಖಾಸಗಿ ಶಾಲೆಗಳಿಗೆ ಪರಿಹಾರ ನೀಡಿ ಮಕ್ಕಳ ಬದುಕಿಗೆ . ಸಹಾಯ ಮಾಡುವಂತೆ ಕಾನೂನು ಸಲಹೆ ನೀಡಬೇಕೆಂದು ಪೊಲೀಸರಿಗೆ ತಿಳಿಸಿದರು ಹಲವಾರು ಮಹಿಳೆಯರಿಗೆ ಮಾಶಾಸನ ವಿಶೇಷ ಚೇತನರಿಗೆ ಸರ್ಕಾರದ ಸೌಲಭ್ಯಗಳು ಸಿಗುತ್ತಿಲ್ಲ ಎಂಬ ದೂರುಗಳಿಂದ ನಾಗಮಣಿ ಚೌಧಿರಿ ಅವರು ಮಹಿಳಾ ಮತ್ತು ಮಕ್ಕಳ ಇಲಾಖೆ ಅಧಿಕಾರಿಗಳಿಗೆ ಸಲಹೆ ನೀಡಿ ಕೂಡಲೇ ಮಾಶಾಸನ ಮತ್ತು ಅಂಗವಿಕಲ ಮಕ್ಕಳಿಗೆ ಬರಬೇಕಾದ ಸರ್ಕಾರದ ಸೌಲಭ್ಯಗಳು ಹಾಗೂ ದೌರ್ಜನಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ ಕೇಂದ್ರಗಳು ಹಾಗೂ ಸರ್ಕಾರದ ಪರಿಹಾರಗಳನ್ನು ಕೂಡ ಒದಗಿಸಬೇಕೆಂದು ಅವರು ತಿಳಿಸಿದರು

ಈ ಸಂದರ್ಭದಲ್ಲಿ ನೇರಳೆಕುಪ್ಪೆ ನವೀನ್ ಬೆಟ್ಟದ ತುಂಗ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಪ್ರೀತಿ ಅರಸ್ ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಸರಸ್ವತಿ ತಾಲೂಕು ಪಂಚಾಯತಿ ಮಾಜಿ ಸದಸ್ಯ ಅನಿತಾ ಬೆಟ್ಟದಪುರ ಗ್ರಾಮ ಪಂಚಾಯತಿ ಪಿಡಿಓ ಮಂಜುನಾಥ್ ದಲಿತ ಮುಖಂಡರಾದ ಮಲ್ಲಿಕಾ ಚಾಮರಾಜನ ಕೋಟೆ ಜಗದೀಶ್ ಸುಣ್ಣದಕೇರಿ ಮಂಜುನಾಥ್ ಪೊಲೀಸ್ ಹಿರಿಯ ಅಧಿಕಾರಿಗಳಾದ ಡಿವೈಎಸ್ಪಿ. ರವಿ .ಪಿಎಸ್ಐ ಅಜಯ್ ಕುಮಾರ್. ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು

ಪಿ.ಯು.ಸಿ ಹೆಚ್ಚು ಅಂಕ ಪಡೆದ ಭವಾನಿ ಎಸ್.ಹಿರೇಮಠಗೆ ಸಮಾಜದ ಸನ್ಮಾನ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಯಾದಗಿರಿ ಜಿಲ್ಲಾಮಟ್ಟದಲ್ಲಿ ದ್ವಿತೀಯ ಪಿ. ಯು.ಸಿ. ವಿಜ್ಞಾನ ವಿಭಾಗದಲ್ಲಿ 583 ಅಂಕಗಳಿಸಿ ಜಿಲ್ಲೆಗೆ ಕೀರ್ತಿ ತಂದ ಕುಮಾರಿ ಭವಾನಿ ಎಸ್.ಹಿರೇಮಠ ಇವರಿಗೆ ಯಾದಗಿರಿ ಜಿಲ್ಲೆಯ ಜಂಗಮ ಸಮಾಜದ ವತಿಯಿಂದ ಸನ್ಮಾನಿಸಲಾಯಿತು.

ಈ ಸನ್ಮಾನದ ದಿವ್ಯ ನೇತೃತ್ವವನ್ನು ಪರಮಪೂಜ್ಯ ಚನ್ನವೀರ ದೇವರು ಸೊಪ್ಪಿಮಠ್ ವಹಿಸಿದರು . ವಿದ್ಯಾರ್ಥಿ ಭವಾನಿ ಎಸ್ ಹಿರೇಮಠ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಕನ್ನಡ 98, ಇಂಗ್ಲಿಷ್ 93,ರಸಾಯನಶಾಸ್ತ್ರ 95, ಭೌತಶಾಸ್ತ್ರ 99 ,ಗಣಿತಶಾಸ್ತ್ರ 99 ಜೀವಶಾಸ್ತ್ರ 99 ಒಟ್ಟು 583 ಅಂಕಗಳನ್ನು ಪಡೆದು ಸಹ್ಯಾದ್ರಿ ವಿಜ್ಞಾನ ಪದವಿಪೂರ್ವ ಕಾಲೇಜು ಹಾಗೂ ಯಾದಗಿರಿ ಜಿಲ್ಲೆಗೆ ಕೀರ್ತಿಯನ್ನು ತಂದಿರುತ್ತಾರೆ,

ಈ ನಿಮಿತ್ಯ ಜಿಲ್ಲಾ ಜಂಗಮ ಸಮಾಜದ ಅಧ್ಯಕ್ಷರಾದ ಚನ್ನವೀರಯ್ಯ ಸ್ವಾಮಿ ಹಾಗೂ ತಾಲೂಕ ವೀರಶೈವ ಸಮಾಜದ ಅಧ್ಯಕ್ಷರಾದ ಮಲ್ಲು ಗುಡಿಮಠ ಮತ್ತು ರುದ್ರಸ್ವಾಮಿ, ವಿಶ್ವನಾಥಯ್ಯ ಚತುರಾಚಾರ್ಯ ಮಠ, ಚನ್ನಬಸಯ್ಯ ಸ್ವಾಮಿ, ಬಸಯ್ಯಸ್ವಾಮಿ, ವಿಶ್ವರಾಧ್ಯ ಹಾಗೂ ವಿದ್ಯಾರ್ಥಿಯ ಪೋಷಕರು ಉಪಸ್ಥಿತರಿದ್ದರು.

ಹಸಿರು ಕ್ರಾಂತಿಯ ಶಿಲ್ಪಿಗೆ ಭವ್ಯ ನಮನ

- **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ**

ಮಾಜಿ ಉಪ ಪ್ರಧಾನಮಂತ್ರಿ ಡಾ. ಬಾಬು ಜಗಜೀವನರಾಂ ಅವರ 119ನೇ ಜಯಂತಿಯನ್ನು ಹುಣಸಗಿಯಲ್ಲಿ ತಾಲೂಕು ಆಡಳಿತ ವತಿಯಿಂದ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಹೂಮಾಲೆ ಅರ್ಪಿಸಿ ಗೌರವ ನಮನ ಸಲ್ಲಿಸಲಾಯಿತು.

ತಹಶೀಲ್ದಾರ್ ಕಚೇರಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಡಾ. ರಮೇಶ ಮಾಳಗಿ, ದೇಶದಲ್ಲಿ ಆಹಾರ ಬಿಕ್ಕಟ್ಟು ಎದುರಿಸಿದ ಸಂದರ್ಭದಲ್ಲಿ ರೈತರಿಗೆ ಬೆಂಬಲ ನೀಡುವ ಮೂಲಕ ಹಸಿರು ಕ್ರಾಂತಿಗೆ ದಾರಿತೋರಿದ ಜಗಜೀವನರಾಂ ಅವರು ದೇಶದ ಆಹಾರ ಭದ್ರತೆಗೆ ಮಹತ್ತರ ಕೊಡುಗೆ ನೀಡಿದ ಅಪರೂಪದ ನಾಯಕರು ಎಂದು ಹೇಳಿದರು.

ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಹಾಗೂ ತಹಶೀಲ್ದಾರ್ ಎಂ. ಬಸವರಾಜ್ ಮಾತನಾಡಿ, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಜಗಜೀವನರಾಂ ಅವರು ಜೀವನಪೂರ್ತಿ ಹೋರಾಟ ನಡೆಸಿದರು. ಕಾರ್ಮಿಕ ಸಚಿವರಾಗಿದ್ದಾಗ ಅನೇಕ ಕಲ್ಯಾಣಕಾರಿ ಕಾಯ್ದೆಗಳನ್ನು ಜಾರಿಗೆ ತಂದು ಕಾರ್ಮಿಕರ ಜೀವನ ಮಟ್ಟವನ್ನು ಸುಧಾರಿಸಿದರು ಎಂದು ತಿಳಿಸಿದರು.ಗುರು ಹುಲಕಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಜಗಜೀವನರಾಂ ಅವರು ಸುಮಾರು 30 ವರ್ಷಗಳ ಕಾಲ ವಿವಿಧ ಇಲಾಖೆಗಳ ಸಚಿವರಾಗಿ ಸೇವೆ ಸಲ್ಲಿಸಿದ್ದು, 1979ರಲ್ಲಿ ಉಪ ಪ್ರಧಾನಿಯಾಗಿ ದೇಶಕ್ಕೆ ಸೇವೆ ಸಲ್ಲಿಸಿದ ಮಹಾನ್ ನಾಯಕರು ಎಂದು ಹೇಳಿದರು. ಅವರ ತತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಕರೆ ನೀಡಿದರು.

ಇದಕ್ಕೂ ಮೊದಲು ಸುರಪುರ ಕ್ಷೇತ್ರದ ಶಾಸಕ ರಾಜಾ ವೇಣುಗೋಪಾಲ ನಾಯಕ ಅವರು ಮಹಾಂತಸ್ವಾಮಿ ವೃತ್ತದಲ್ಲಿ ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಭವ್ಯ ಮೆರವಣಿಗೆಗೆ ಚಾಲನೆ ನೀಡಿದರು. ನಂತರ ವಾದ್ಯಗಳೊಂದಿಗೆ ಮೆರವಣಿಗೆ ನಗರದಲ್ಲಿ ಸಂಚರಿಸಿತು.

ಈ ಸಂದರ್ಭದಲ್ಲಿ ಕಲಾವಿದ ನಾಗರಾಜ್ ಕೊಡೇಕಲ್, ಯುವ ಕವಿ ಮಲ್ಲು ಹುಲಿಮನಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಮೆರವಣಿಗೆಯಲ್ಲಿ ಕೆಪಿಸಿಸಿ ಸದಸ್ಯ ಸಿದ್ದಣ್ಣ ಮಲಗಲದಿನ್ನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ದಂಡಿನ, ಪ್ರಚಾರ ಸಮಿತಿ ಅಧ್ಯಕ್ಷ ಆರ್.ಎಂ. ರೇವಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ್ ಸಜ್ಜನ್, ಪಪಂ ಸದಸ್ಯರಾದ ಶರಣು ಸಾಹುಕಾರ ದಂಡಿನ, ಸಿದ್ರಾಮಪ್ಪ ಮುದಗಲ್, ಮಲ್ಲು ಹೆಬ್ಬಾಳ, ಬಸಣ್ಣ ಬಾಲಗೌಡ್ರ, ಸಿದ್ದನಗೌಡ ಕರಿಭಾವಿ, ನಿಂಗರಾಜ್ ಬಾಚಿಮಟ್ಟಿ, ರವಿ ಮಲಗಲದಿನ್ನಿ, ಶಿವಪ್ಪ ಸದಬ, ನಂದಪ್ಪ ಪೀರಾಪುರ, ಪವಡೆಪ್ಪ ಕಕ್ಕೇರಾ, ಅಮಲಪ್ಪ ಹಳ್ಳಿ, ದೇವಪ್ಪ ಮಂಜಲಾಪುರ, ನಿಂಗರಾಜ್ ದ್ಯಾಮನಾಳ, ಕಾಶೀನಾಥ ಹಾದಿಮನಿ, ಶರಣು ಕಟ್ಟಿಮನಿ, ಬಸವರಾಜ್ ದೊಡ್ಡಮನಿ, ಪರಶುರಾಮ ಕನಕೇರಿ, ಪರಮಣ್ಣ ಬೈಲಾಪುರ, ಮಲ್ಲು ವಜ್ಜಲ್ ಸೇರಿದಂತೆ ವಿವಿಧ ಮುಖಂಡರು ಪಾಲ್ಗೊಂಡಿದ್ದರು.

ದೇವಿಂದ್ರಪ್ಪ ಬಳಿಚಕ್ರ ಸ್ವಾಗತಿಸಿದರು. ಬಸವರಾಜ ಕಾಮನಟಗಿ ಕಾರ್ಯಕ್ರಮ ನಿರೂಪಿಸಿದರು. ಮಲ್ಲು ಮ್ಯಾಗೇರಿ ವಂದಿಸಿದರು.

ಮಲ್ಲಾ ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ

- **ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ**

ಸಮೀಪದ ಮಲ್ಲಾ(ಬಿ) ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತೋತ್ಸವವನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು. ಗ್ರಾಮದ ಮುಖಂಡರಾದ ಗೌಡಪ್ಪಗೌಡ ವಣಿಕ್ಯಾಳ ಹಾಗೂ ಮಲ್ಲನಗೌಡ ತಳೆವಾಡ ಅವರು ಧ್ವಜಾರೋಹಣ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಜುನಾಥ ಕೊಂಬಿನ ವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಗೌಡಪ್ಪಗೌಡ ವಣಿಕ್ಯಾಳ ಅವರು, ಡಾ. ಅಂಬೇಡ್ಕರ್ ಅವರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ, ಅವರು ಈ ದೇಶದ ಮಹಾನ್ ಆಸ್ತಿ. ಇಂದು ಅವರ ವಿಚಾರಧಾರೆಗಳು ವಿಶ್ವದಾದ್ಯಂತ ಪಸರಿಸಿವೆ. ಸಮಾಜದಲ್ಲಿ ಬೇರೂರಿರುವ ಜಾತಿಯತೆ ಹಾಗೂ ಮೇಲು–ಕೀಳು ಎಂಬ ತಾರತಮ್ಯವನ್ನು ತೊಡೆದುಹಾಕಲು ಶಿಕ್ಷಣವೊಂದೇ ಪ್ರಬಲ ಅಸ್ತ್ರ. ಆದ್ದರಿಂದ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಸಂಕಲ್ಪ ಮಾಡಬೇಕು, ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ರಮೇಶ್ ಗೌಡ ಅರಕೇರಿ, ಬಸನಗೌಡ ಕಲಗೊಂಡ, ಗೊಲ್ಲಾಳಪ್ಪಗೌಡ, ಪಪ್ಪುಗೌಡ ಪೊಲೀಸ್ ಪಾಟೀಲ್, ಸುಭಾಷ್ ಪಾಟೀಲ್, ಸುಭಾನಿ ಗುತ್ತೇದಾರ್ ಹಾಗೂ ಮಾನಪ್ಪ ಬಡಿಗೇರ, ಸಂಗಣ್ಣ ಬಡಿಗೇರ, ಶಿವಪ್ಪ ಬಡಿಗೇರ, ಶಿವಪ್ಪ ದೊರೆ, ಮರುಳಸಿದ್ದಪ್ಪ, ಬಸವರಾಜ ತಳವಾರ, ಮಹೇಶ್ ಸಜ್ಜನ್, ಮರೆಪ್ಪ ಗೌಂಡಿ, ಮಾಜಿ ದವಲಸಾಬ್ ಮುಲ್ಲಾ, ವೀರಣ್ಣ ಬಡಿಗೇರ ಸೇರಿದಂತೆ ಗ್ರಾಮದ ನೂರಾರು ಯುವಕರು ಹಾಗೂ ನಾಗರಿಕರು ಭಾಗವಹಿಸಿ ಜಯಂತೋತ್ಸವವನ್ನು ಯಶಸ್ವಿಗೊಳಿಸಿದರು.

ಬಸವಕಲ್ಯಾಣ: ತಾಲೂಕಿನ ಸೈದಾಪುರ ಗ್ರಾಮದಲ್ಲಿ ಅಖಂಡ ಹರಿನಾಮ ಸಪ್ತಾಹ ನಿಮಿತ್ಯ ಜರುಗಿದ ಕಾಲಾ ಕಾರ್ಯಕ್ರಮಕ್ಕೆ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಗುರುವಾರ ಸಂಜೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ದಿನೇಶ್ ಪಾಟೀಲ, ಗೋವಿಂದ ಪೊಲೀಸ್ ಪಾಟೀಲ, ರಾಹುಲ ಪೊಲೀಸ್ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

ಬಿ.ಆರ್ ಅಂಬೇಡ್ಕರ್ ಅವರ ವೃತ್ತ ನಾಮಫಲಕ ಉದ್ಘಾಟನೆ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಬೋದಿಸತ್ವ, ಸಂವಿಧಾನ ಶಿಲ್ಪಿ,ಭಾರತರತ್ನ ಡಾ.ಬಿ.ಆರ್ ಅಂಬೇಡ್ಕರ್ ರವರ 135 ನೇ ಜಯಂತೋತ್ಸವವನ್ನು ಯಾದಗಿರಿ ಸಮೀಪದ ಬಳಿಚಕ್ರ ಗ್ರಾಮದಲ್ಲಿ ಡಾ ಬಿ. ಆರ್ ಅಂಬೇಡ್ಕರ್ ವೃತ್ತ ಮತ್ತು ನಾಮಫಲಕವನ್ನು ಪೊಲೀಸ್ ಇನ್ಸೆಕ್ಟರ್ ರಾದ ಶಿವಾನಂದ್ ಮರಡಿ ರವರು ಉದ್ಘಾಟನೆ ಮಾಡಿದರು ಮತ್ತು ಧ್ವಜಾರಣವನ್ನು ಬಳಿಚಕ್ರ ಸರಕಾರಿ ಆಸ್ಪತ್ರೆ ವೈದ್ಯಧಿಕಾರಿಗಳಾದ ಮುದ್ದಾಸಿರ್ ಮಾಡಿದರು. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಖಾದರ್ ಪಟೇಲ್, ಭೀಮರಾಯ ಬಳಿಚಕ್ರ, ದಸಂಸ ಜಿ ಸಂ ಸಂಚಾಲಕರು, ಆಂಜನೇಯ ಬಳಿಚಕ್ರ ತಾ ಸಂಚಾಲಕರು, ಮಲ್ಲಿಕಾರ್ಜುನ ಕೋಟಗಾರ್, ಶಂಕರ್ ಕೋಟಗಾರ್, ಸಾಬರೆಡ್ಡಿ ಕೊಟ್ಬಾರ್,ಹೊನ್ನೇಶ್ ದೊಡ್ಡಮನಿ,ಮೈಪಾಲ್ ರೆಡ್ಡಿಗೌಡ, ಭದ್ರಪ್ಪ ಬೊಮ್ಮಣ್,ನಾಗಪ್ಪ ಬೋಹಿನ್, ಮಲ್ಲಪ್ಪ ದೋಸಿ, ನರಸಿಂಹ ಕಾಕಿ, ಕಾಳಪ್ಪ ಬಡಿಗೇರ್, ಬಸಲಿಂಗ ಬೋಳಿ, ಭದ್ರಪ್ಪ ಬೋಳಿ,ರಾಜಪ್ಪ, ಮಶಪ್ಪ ಕಾಶಿ, ತಾಯಪ್ಪ ಕಲಾಲ್, ಹಣಮಂತ ಕುರುಬರ್, ರಮೇಶ್ ಕೋಟಗಾರ ಮಹದೇವಪ್ಪ ಬೇಗಾರ್, ಸುರೇಶ್, ಸಿದ್ದಪ್ಪ, ಯಮನಪ್ಪ, ಶಂಕ್ರಪ್ಪ, ಲಕ್ಷ್ಮಣ್,ಕಾಶಪ್ಪ, ಹುಸೇನಪ್ಪ,ಪ್ರಕಾಶ್,ಮಹದೇವ್, ಮಹೇಶ್ ಇನ್ನೂ ಊರಿನ ಮುಖಂಡರು, ಹಾಗೂ ಸಮಾಜದ ಬಾಂಧವರು ಇದ್ದರು.

ಅಂಬೇಡ್ಕರ್ ಜಗಜೀವನ್ ರಾಮ್ ಜಯಂತಿ ಸಂಭ್ರಮ

- **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ 135ನೇ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ 119ನೇ ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನೋತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಹಳೆಯ ತಾಲೂಕು ಕಚೇರಿಯಿಂದ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಶಾಸಕ ನೇಮಿರಾಜ ನಾಯ್ಕ್, ತಹಶೀಲ್ದಾರ್ ಕವಿತಾ ಆರ್., ಪುರಸಭೆ ಅಧ್ಯಕ್ಷೆ ನೇತ್ರಾವತಿ ಹುಚ್ಚಪ್ಪ ಸೇರಿದಂತೆ ಪುರಸಭೆ ಸದಸ್ಯರು ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ಪ್ರಸ್ತಾವಿಕವಾಗಿ ತಹಶೀಲ್ದಾರ್ ಕವಿತಾ ಆರ್. ಮಾತನಾಡಿ, ಮಹನೀಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮಹತ್ವವನ್ನು ವಿವರಿಸಿದರು. ಬಳಿಕ ಶಾಸಕ ನೇಮಿರಾಜ ನಾಯ್ಕ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಅಂಬೇಡ್ಕರ್ ಮತ್ತು ಜಗಜೀವನ್ ರಾಮ್ ಅವರ ಸಾಮಾಜಿಕ ನ್ಯಾಯದ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.ಈ ವೇಳೆ ಹಿರಿಯ ಮುಖಂಡರಾದ ಹೆಗ್ಡಾಳ್ ರಾಮಣ್ಣ, ದೊಡ್ಡ ಬಸಪ್ಪ, ಸಿ. ಬಸವರಾಜ, ಮಾದೂರು ಮಹೇಶ್, ಸರೇಗಾರ ಹುಚ್ಚಪ್ಪ, ಪ್ರಭಾಕರ, ಕಿತ್ತನೂರು ದುರುಗಪ್ಪ, ಮಹೇಶ್ ಮೇಘರಾಜ, ಪರಶುರಾಮ, ಗ್ಯಾರಂಟಿ ಸಮಿತಿ ಅಧ್ಯಕ್ಷ ಗುರುಬಸವರಾಜ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು. ಕಾರ್ಯಕ್ರಮವು ಶಿಸ್ತಿನಿಂದ ಹಾಗೂ ಗೌರವಪೂರ್ಣವಾಗಿ ನಡೆಯಿತು.

ವಿದ್ಯಾರ್ಥಿಗಳಿಗೆ ಡಾ.ಅಂಬೇಡ್ಕರ್ ವಿಚಾರಗಳು ಅತ್ಯಂತ ಅವಶ್ಯ : ಚಂದ್ರಶೇಖರ ಗೊರೇಬಾಳ

- **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಬಾಬಾ ಸಾಹೇಬ್ ರ ವಿಚಾರಗಳನ್ನು ತಿಳಿದುಕೊಳತ್ತಾ ಅವರೊಂದಿಗೆ ಅನುಸಂಧಾನವಾಗಬೇಕಾಗಿದೆ.ಎಂದು ನಗರದ ಎಲ್ ಬಿ ಕೆ ಪದವಿ ಪೂರ್ವ ನೊಬಲ್ ಪದವಿ ಮಹಾವಿದ್ಯಾಲಯ ಹಾಗೂ ಎನ್ ಎಸ್ ಎಸ್ ಘಟಕ ದಿಂದ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅವರ ಜಯಂತಿಯಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತಾಡಿದರು.

ಇಂದು ಎಲ್ಲಡೆ ಕಾಟಾಚಾರದ ಸರಕಾರಿ ಜಯಂತಿಗಳನ್ನು ಆಚರಣೆ ಮಾಡುತ್ತಿರುವುದು ವಿಷಾಧಕರ .ಈ ಹಿಂದೆ ಇದ್ದ ದಲಿತ ಸಂಘಟನೆಗಳು ಅಂಬೇಡ್ಕರ್ ಅವರನ್ನು ಪರಿಯಿಸುವ ಕೆಲಸ ಮಾಡುತ್ತಿದ್ದವು. ಈ ಹಿಂದೆ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲಾ ಮಕ್ಕಳಿಗೆ ಸಾಮಾನತೆ ಅವಕಾಶ ಇರದೆ ತರಗತಿಯಲ್ಲಿ ಮೂರು ಸಾಲುಗಳಲ್ಲಿ ದಲಿತರು ತಾವು ತಗಿದುಕೊಂಡು ಬಂದ ಗೋಣಿಚೀಲ ಹಾಸಿಕೊಂಡು ಹೊರಗಡೆ ಕುಳಿತುಕೊಳ್ಳುವ ಆ ಕಾಲ ಇಂದು ಇಲ್ಲ ಕಾರಣ ಅಂಬೇಡ್ಕರ್ ಅವರ ಸಂವಿಧಾನವೆ ಕಾರಣ. ಇಂತಹ ವ್ಯವಸ್ಥೆಯಿಂದ ಈಗ ಅರಿವಿನ ಪ್ರಜ್ಞೆ ಬಂದಿದೆ.

ಸಮಾನತೆಯ ಸಮಾಜದ ಆಶಯಗಳನ್ನು ಕಾನೂನು ರೂಪದಲ್ಲಿ ಬಂದಿದರಿಂದ ಇಂದು ಸಮಸಮಾಜ ರೂಪಗೊಳ್ಳುತ್ತಿರವುದು ಆಶದಾಯಕವಾಗಿದೆ.

ಅಂಬೇಡ್ಕರ್ ಅವರ ಮೊಮ್ಮಗಳ ಮಗ ಚಿಂತಕರಾದ ತೆಲತುಂಬಡಿ ಅವರು ಅಂಬೇಡ್ಕರ್ ಕುರಿತು ಈ ಹಿಂದೆ ಇದ್ದ ಜಾತಿಯನ್ನು ಬಹಿರಂಗವಾಗಿ ಆಚರಿಸುವ ಕಾಲಘಟ್ಟ ಇಂದು ಮಸಕು ಹಾಕಿಕೊಂಡು ಆಚರಿಸುವಷ್ಟುರ ಮಟ್ಟಿಗೆ ಸಮಾಜ ಬದಾಲಾಯಿಸಿದ್ದಾರೆ.ಇದು ಬದಲಾವಣೆ. ಪ್ರತಿ ದರ್ಮದಲ್ಲಿಯೂ ಇಂತಹ ಅಸಮಾನತೆಯಿಂದ ಬಳಲುತಿವೆ.



ಈ ದೇಶದಲ್ಲಿ ಓಟ ನೀಡಿ ಪ್ರಜಾಸತ್ತಾತ್ಮಕ ಸಾಮಾಜ ಕಟ್ಟಿದವರು.ಆರ್ಥಿಕ ಅಸಮಾನತೆ ತೊಗಲಿಸಲು ಬೇರೆ ದೇಶದಿಂದ ಎರವಲು ಪಡೆದುಕೊಂಡು ಆರ್ಥಿಕ ಶಕ್ತಿ ತುಂಬಿದರು.ಹೆಣ್ಣಿಗೆ ಆಸ್ತಿ ಹಕ್ಕು ದಕ್ಕಿಸಿಕೊಟ್ಟು ಪುರುಷ ಮಹಿಳೆ ಎಂಬ ಬೇದವನ್ನು ದೂರ ಇಟ್ಟಿದ್ದಾರೆ.

ಮೀಸಲಾತಿ ವಿಷಯವಾಗಿ ದಲಿತ ಹಿಂದುಳಿದ ಅಲೆಮಾರಿಗಳು ಮಾತ್ರ ಫಲನಾಬವಿಗಳಲ್ಲ .ಎಲ್ಲಾ ಸಮುದಾಯದ ಜನತೆಯೂ ಮೀಸಲಾತಿ ಪಡೆಯುತ್ತಿದ್ದಾರೆ. ಪ್ರಭುತ್ವ ಮತ್ತು ಅಲ್ಪಸಂಖ್ಯಾತರು ಕೃತಿಯಲ್ಲಿ ಭೂಮಿ ಒಳಗೊಂಡಂತೆವಿ ಇನ್ನಿತರ ಸೇವಾ ಕ್ಷೇತ್ರಗಳು ಖಾಸಗಿಯಲ್ಲಿ ಇದ್ದವು ಆದರೆ ಇಂದು ರಾಷ್ಟ್ರಿಕರಣವಾಗಿತ್ತಿರುವುದು ಆಶಯದಾಯಕವಾಗಿವೆ.ಜಾಗತೀಕರಣ, ಖಾಸಗೀಕರಣ, ಉದಾರೀಕರಗಳ ಪ್ರಭಾವಕ್ಕೊಳಾಗಾಗಿ ಇಂದು ಎಲ್ಲಾ ಕ್ಷೇತ್ರಗಳು ಖಾಸಗೀಕರಣ ಮಾಡಿ ಜನ ಸಾಮನ್ಯರ ಜೀವನ ದುರ್ಬಲವಾಗಿಸಿವೆ. ಇಂದು ದಲಿತ ಅಲೆಮಾರಿ ಹಿಂದುಳಿದ ಅಲ್ಪಸಂಖ್ಯಾತ ಜನರನ್ನು ಮನಷ್ಯರಂತೆ ಕಾಣುವು ಅಗತ್ಯತವಿದೆ.

ಈ ಸಂದರ್ಭದಲ್ಲಿ ಕಾಲೇಜು ಅಧ್ಯಕ್ಷರಾದ ಪರಶುರಾಮ ಮಲ್ಲಾಪುರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಕಾರ್ಯದರ್ಶಿಯಾದ ಡಾ.ಅರುಣಕುಮಾರ ಬೇರ್ಗಿ ಖಜಾಂಚಿಯಾದ ಜಯಪ್ಪ ಗೊರೇಬಾಳ ನೊಬೆಲ್ ಪ್ರಾಂಶುಪಾಲರಾದ ಶ್ರೀಮತಿ ಐಶ್ವರ್ಯ ದಳವಾಯಿ,ಎಲ್ ಬಿ ಕೆ ಕಾಲೇಜಿನ ಪ್ರಾಂಶುಪಾಲರಾದ ಶೀವುಕುಮಾರ ಬಿಂಗಿ ಹಾಗೂ ಎನ್ ಎಸ್ ಎಸ್ ಅಧಿಕಾರಿಗಳಾದ ಹೊನ್ನಪ್ಪ ಬೆಳಗುರ್ಕಿ ಓದು ಬಳಗದ ಸಂಚಲಾಕರಾದ ವಸಂತಕುಮಾರ ನುಡಿ ಕೂಟದ ಸಂಚಲಕಾರದ ಜ್ಯೋತಿ ವೇದಿಕೆಯ ಮೇಲಿದ್ದರು. ಉಪನ್ಯಾಸಕರಾದ ಬಸವರಾಜ ದೇವಿಪುರ ಮೌಲಸಾಬ ಪಂಚಾಕ್ಷರಿಯ್ಯ ನಂದಿನಿ ಅಶ್ವಿನಿ ಉಪಸ್ಥಿತಿ ಇದ್ದರು.ಕು ಪಾರ್ವತಿ ನಿರೂಪಸಿದರು.

ಬೇಸಿಗೆ ಶಿಬಿರದಲ್ಲಿ ರಂಗಕಲಾ ತರಬೇತಿ

- **ಮಲ್ಲಮ್ಮ ನುಡಿ ವಾರ್ತೆ ಪೀಣ**

ದಾಸರಹಳ್ಳಿ: ಕುಣಿಗಲ್ ನೆಲಗಮಲು ಮಕ್ಕಳ ಕಲಾ ತರಬೇತಿ ಶಿಬಿರ, ಸಿದ್ದರಾಮ ಸ್ಕೂಲ್ ಆಫ್ ಪರ್ಫಾರ್ಮೆನ್ಸ್ ಆರ್ಟ್ಸ್ ಹಾಗೂ ಕೋಲಾರದ ಬುಡ್ಡಿ ದೀಪ ಸಂಸ್ಥೆ ವತಿಯಿಂದ ಬೆಂಗಳೂರಿನ ಅಂದ್ರಹಳ್ಳಿ ರಸ್ತೆಯ ವಿಧ್ಯಾಭೂಷಣ ವಿದ್ಯಾಸಂಸ್ಥೆಯ ಅವರಣದಲ್ಲಿ ಏಪ್ರಿಲ್ 15 ರಿಂದ ಮೇ 5 ರ ಮಂಗಳವಾರದ ತನಕ ಬೇಸಿಗೆ ಶಿಬಿರದಲ್ಲಿ 6ನೇ ತರಗತಿಯಿಂದ 9ನೇ ತರಗತಿಯ 40 ಮಕ್ಕಳಿಗೆ ಇಂದಿನಿಂದ 20 ದಿನಗಳ ಕಾಲ ರಂಗಕಲಾ ತರಬೇತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶಾಲೆಯ ಸಂಸ್ಥಾಪಕ ಬ.ನಾ ರವಿ ಮಾತನಾಡಿ, 'ಹಾಡು, ನೃತ್ಯ, ಅಭಿನಯ, ಚಿತ್ರಕಲೆ, ಸೃಜನಶೀಲ ಬರವಣಿಗೆ, ಕೌಶಲ್ಯ, ಮಗುವಿನಲ್ಲಿರುವ ಅಂತರ್ಗತ ಕೌಶಲ್ಯಗಳ ವೃದ್ಧಿ ಒಟ್ಟು ನಮ್ಮ ಮುಖ್ಯ ಉದ್ದೇಶವಾಗಿದ್ದು ಶಾಲೆಯ ರಂಗ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು ಮೇ 5 ರಂದು ಮಂಗಳವಾರ ಕುಣಿಗಲ್ ಬಯಲು ರಂಗಮಂದಿರದಲ್ಲಿ ಲಲಿತಕಲಾ ನಾಟಕಗಳ ಪ್ರದರ್ಶನಲ್ಲಿ ಪ್ರದರ್ಶನ ನೀಡಲಿದ್ದಾರೆ',ಎಂದರು.

ದಲಿತ ಹೋರಾಟಗಾರ, ಚಿತ್ರ ಸಂಭಾಷಣೆ ರಚನೆ, ನಾಟಕಗಾರ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ,'ಮೊದಲು ಮಕ್ಕಳ ಕಲಿಯುವ ಜಾಗವನ್ನು ಸೌಂದರ್ಯಗೊಳಿಸುವುದು ಹಾಗೂ ಪಠ್ಯ ಪುಸ್ತಕಗಳಲ್ಲಿ ಪ್ರವಚನಗಳನ್ನು ಸುಂದರಗೊಳಿಸುವುದು, ಆಯಾಯ ಊರುಗಳ ನೆಲ ಸಂಸ್ಕೃತಿ ಕಲೆ ಕಲಿಸುವ ನೆಲಗಮಲು ಶಿಕ್ಷಣವನ್ನು ಕಲಿಸುವ ಉದ್ದೇಶ ಇದಾಗಿದೆ', ಎಂದರು.

ಶಿಬಿರದ ನಿರ್ದೇಶಕಿ ಅಂಜುಲಾ ಮಾತನಾಡಿ,'ಮೊಬೈಲ್ ಗೀಳಿನಿಂದ ಮಕ್ಕಳು ಓದಿನ ಕಡೆಗೆ ಮನಹರಿಸುತ್ತಿಲ್ಲ. ಉತ್ತಮ ಬೆಳವಣಿಗೆಗೆ ಇದು ಮಾರಕವಾಗುತ್ತಿದೆ. ಪೋಷಕರು ಇದರ ಬಗ್ಗೆ ಗಮನ ಹರಿಸಿ ಮಕ್ಕಳನ್ನು ಸರಿಯಾದ ಮಾರ್ಗವನ್ನು ತಿಳುವಳಿಕೆ ನೀಡುವ ಮಹತ್ತರ ಜವಾಬ್ದಾರಿ, ಹೊಣೆಗಾರಿಕೆ ಪೋಷಕರ ಮೇಲಿದೆ', ಎಂದರು.

ಈ ಕಾರ್ಯಕ್ರಮದಲ್ಲಿ ದಲಿತ ಹೋರಾಟಗಾರ, ಚಿತ್ರಸಂಭಾಷಣೆ ರಚನೆ, ನಾಟಕಕಾರ ಕೋಟಿಗಾನಹಳ್ಳಿ ರಾಮಯ್ಯ, ವಿದ್ಯಾಭೂಷಣ್ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಬ.ನಾ ರವಿ ಹಾಗೂ ಪ್ರಾಂಶುಪಾಲೆ ಪಾರ್ವತಿ ಬ.ನಾ ರವಿ ಚಲನಚಿತ್ರ ವಿತರಕ ದೇವರಾಜು, ಶಿಬಿರದ ನಿರ್ದೇಶಕಿ ಅಂಜಲಿ, ಒಕ್ಕಲಿಗ ಧರ್ಮ ಮಹಾಸಭಾ ರಾಜ್ಯ ಸಂಚಾಲಕ ಆನಂದ್‌ಕುಮಾರ್, ಸಮಾಜಸೇವಕರಾದ ಸಂತೋಷ್ ಹನಿಯೂರು, ಸಿಪಿಎಂ ನ ಬಾಲರಾಜ್ ಮತ್ತಿತರರು ಇದ್ದರು.

ಸಿದ್ದರಾಮಯ್ಯನವರೇ ಗುತ್ತಿಗೆ ಕಾರ್ಮಿಕರ ಕತ್ತು ಕೊಯ್ಯುವುದನ್ನು ನಿಲ್ಲಿಸಿ : ಮಾನಸಯ್ಯ

- **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಕರ್ನಾಟಕ ರಾಜ್ಯ ವಸತಿ ಶಾಲೆ ಹೊರ ಗುತ್ತಿಗೆ ನೌಕರರ ಸಂಘ(ಖಿಗಅಖ)ದ ನೇತೃತ್ವದಲ್ಲಿ ಇಂದು ದಿನಾಂಕ 15–4–2026 ರಂದು ರಾಜಧಾನಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಬಂದಿದ್ದ ಗುತ್ತಿಗೆ ಕಾರ್ಮಿಕರು ಇಡೀ ದಿನ ಪ್ರತಿಭಟನೆ ನಡೆಸಿದರು.

ಕಳೆದ 20–25 ವರ್ಷಗಳಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಕಾನೂನು ಬದ್ಧವಾಗಿ ಖಾಯಂಗೊಳಿಸಲೇಬೇಕು. ಖಾಯಂಗೊಳಿಸುವ ತನಕ ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಕಾಯಂ ನೌಕರರಿಗೆ ಕೊಡುವ ಸಂಬಳವನ್ನು ಪಾವತಿ ಮಾಡಬೇಕು ಎಂಬ ಪ್ರಮುಖವಾದ ಬೇಡಿಕೆಯನ್ನು ಹೋರಾಟದ ಬಿಡಾರದಲ್ಲಿ ಸಮರ್ಥವಾಗಿ ಮಂಡಿಸಲಾಯಿತು. ಕಾರ್ಮಿಕ ಕಾಯ್ದೆಗಳನ್ನು ನೇರವಾಗಿ ಉಲ್ಲಂಘನೆ ಮಾಡಿ ರಾಜ್ಯ ಸರ್ಕಾರವೇ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದೆ. ರಾಜ್ಯ ಸರ್ಕಾರವೇ ಪ್ರಕಟಿಸಿದ ಮಾಸಿಕ 19,000ರೂ – 21,000ರೂ ಕೂಲಿಯ ಬದಲು, ಹೊರಗುತ್ತಿಗೆ ಏಜೆನ್ಸಿಗಳು ಮುಖ್ಯ ಅಡಿಗೆಯವರಿಗೆ 13000, ಸಹಾಯಕ ಅಡುಗೆಯವರಿಗೆ 12000, ಸ್ವಚ್ಛತೆ ಹಾಗೂ ಕಾವಲು ಸಿಬ್ಬಂದಿಗೆ ಕೇವಲ 11000 ರೂ ಪಾವತಿ ಮಾಡುತ್ತಿದ್ದಾರೆ. ದಿನಕ್ಕೆ ಹತ್ತರಿಂದ ಹದಿನೈದು ಗಂಟೆ ಕೆಲಸ ಮಾಡುವ, ವಾರದ ರಜೆ ಹಬ್ಬದ ರಜೆ ರಾಷ್ಟ್ರೀಯ ರಜೆ ಇಲ್ಲದೆ ಸರ್ಕಾರಿ ಮಾದರಿಯ ಹಾಸ್ಟೆಲ್ ಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಒಂದೆಡೆ ರಾಜ್ಯ ಸರ್ಕಾರ, ಮತ್ತೊಂದೆಡೆ ಗುತ್ತೇದಾರರು ಸೇರಿ ಮೋಸ ಮಾಡುತ್ತಿದ್ದಾರೆ. ಕನಿಷ್ಟ ವೇತನ ಕಾಯ್ದೆ–1948 ಹಾಗೂ ವೇತನ ಪಾವತಿ ಕಾಯ್ದೆ–1936 ಗುತ್ತಿಗೆ ರದ್ದತಿ ಹಾಗೂ ನಿಯಂತ್ರಣ ಕಾಯ್ದೆ–1970 ಸೇರಿದಂತೆ, ಇದುವರೆಗೆ ಹೊರಬಂದ ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯಗಳ ಬಹುತೇಕ ಗುತ್ತಿಗೆ ಕಾರ್ಮಿಕರ ಪರವಾದಂತ ತೀರ್ಪುಗಳ ಉಲ್ಲಂಘನೆ ನಡೆದಿದೆ.

ಹಾಗಾಗಿ, ಸಿದ್ದರಾಮಯ್ಯ ಸರಕಾರ ತನ್ನ ಸಂವಿಧಾನದ ಬದ್ಧತೆಯನ್ನು ಉಳಿಸಿಕೊಳ್ಳಬೇಕೆಂದು ಆಗ್ರಹಿಸಲಾಯಿತು. ತಡ ಮಾಡದೆ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಮಿಕರ ಕೂಲಿ ಕದ್ದ ಹೊರಗುತ್ತಿಗೆ ಏಜೇನ್ಸಿಗಳ ಮೇಲೆ ಕಠಿಣವಾದ ಕಾನೂನು ಕ್ರಮ ಕೈಗೊಳ್ಳಬೇಕು. ಕದ್ದ ಕೂಲಿಯನ್ನು ಅರಿಯರ್ಸ್ ರೂಪದಲ್ಲಿ ಕಾರ್ಮಿಕರಿಗೆ ಹಿಂದಿರುಗಿಸಬೇಕು. ನಿಗದಿತ ಕೆಲಸ, ನಿಗದಿತ ರಜೆಗಳು ಕೊಡಲೇಬೇಕು. ಸಮಾನ ದುಡಿಮೆಗೆ ಸಮಾನ ವೇತನ ಜಾರಿ ಮಾಡಬೇಕು ಎಂದು ಪ್ರತಿಭಟನೆ ಉದ್ದಕ್ಕೂ ಸರ್ಕಾರಕ್ಕೆ ಒತ್ತಾಯಿಸಲಾಯಿತು.

ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ(ಏಖಖಖಇ)ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಕಾಂತರಾಜ್ ಮತ್ತು ಇತರೆ ಅಧಿಕಾರಿಗಳು ಹೋರಾಟದ ಬಿಡಾರದಲ್ಲಿ ಸರಾಸರಿ ಒಂದುವರೆ ಗಂಟೆಗಳ ಕಾಲ ಕಾರ್ಮಿಕರ ಬೇಡಿಕೆಗಳ ಮಂಡನೆಯನ್ನು ಆಲಿಸಿದರು. ತದನಂತರ ಕಾನೂನು ಬದ್ಧವಾಗಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಕ್ರಮ ಜರುಗಿಸುವದಾಗಿ ಕಾರ್ಮಿಕರ ಮುಂದೆ ವಾಗ್ದಾನ ಮಾಡಿದರು.

ಈ ಹೋರಾಟದ ನೇತೃತ್ವವನ್ನು ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಆರ್. ಮಾನಸಯ್ಯ, ರಾಜ್ಯ ಕಾರ್ಯದರ್ಶಿ ಎಂ ಗಂಗಾಧರ್, ಮುಖಂಡರಾದ ಹೆಚ್ ಎಸ್ ಮಲ್ಲೇಶ್ ಬೊಮ್ಮನಾಳ್ , ಜಿ ಅಡವಿರಾವ್, ಆದೇಶ ನಗನೂರ್, ಬಸವರಾಜ್ ವಿಂಡ್ ಪವರ್, ರಮೇಶ್ ವಿಂಡ್ ಪವರ್, ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಉಪಾಧ್ಯಕ್ಷರಾದ ರಂಗನಾಥ್ ಮಸ್ಕಿ, ಮತ್ತೊಬ್ಬ ಉಪಾಧ್ಯಕ್ಷರಾದ ಸುಂದರಮ್ಮ ಮಂಡ್ಯ ಜಿಲ್ಲೆ , ಪಾರ್ವತಮ್ಮ ಹಾಸನ, ಪ್ರಧಾನ ಕಾರ್ಯದರ್ಶಿ ಮೈಲಾರಲಿಂಗಪ್ಪ ಕೊಪ್ಪಳ, ಖಜಂಚಿಯಾದ ಮಾರುತಿ ಚಿತ್ರದುರ್ಗ, ದ್ಯಾಮಣ್ಣ ಕೊಪ್ಪಳ, ಮಧು ಸೊರಬ, ಪ್ರಕಾಶ್ ಕೊಪ್ಪಳ, ದೇವೇಂದ್ರಪ್ಪ ಸಿಂಧನೂರ, ಹುಸೇನಪ್ಪ ಬಿಜಾಪುರ, ದೇವಮ್ಮ ಈಚನಾಳ, ನಸ್ರಿನ್ ಬೇಗಮ್ ಲಿಂಗಸಗೂರ, ದೇವಮ್ಮ ದೇವದುರ್ಗ, ಸಂತೋಷ್ ಕವಿತಾಳ , ಶಿವಯ್ಯ ರಾಯಚೂರು ಮುಂತಾದವರು ಇದ್ದರು. ಕ್ರಾಂತಿಕಾರಿ ಸಾಂಸ್ಕೃತಿಕ ವೇದಿಕೆ(ಆರ್ ಸಿ ಎಫ್)ಮೊಳಗಿಸಿದ ಕಾರ್ಮಿಕ,ರೈತರ ಹಾಗೂ ಕ್ರಾಂತಿಕಾರ ಹಾಡುಗಳು ಇಂದಿನ ಪ್ರತಿಭಟನ ಧರಣಿಗೆ ನಿಜವಾದ ಸಾಂಸ್ಕೃತಿಕ ಶಕ್ತಿ ತುಂಬಿದವು. ಕುಮಾರ ಸಮರ ಸಿಂಧನೂರಿನ ಹಾಡಿಕೆಯು ಅತ್ಯಂತ ಆಕರ್ಷಕವಾಗಿತ್ತು.

ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದಾಗಲಿ!ಎಲ್ಲಾ ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಿ! ಅಲ್ಲಿಯವರೆಗೆ ಸಮಾನ ದುಡಿಮೆಗೆ ಸಮಾನ ವೇತನ ಕೊಡಿ! ಕೂಲಿ ಕದ್ದ ಏಜೆನ್ಸಿಗಳನ್ನು ಬ್ಲಾಕ್ ಲಿಸ್ಟ್ ಗೆ ಸೇರಿಸಿ! ಕದ್ದ ಕೂಲಿಯನ್ನು ಅರಿಯರ್ಸ್ ರೂಪದಲ್ಲಿ ಕಾರ್ಮಿಕರಿಗೆ ವಾಪಸ್ ಕೊಡಿ! ರಾಜ್ಯ ವಸತಿ ಶಾಲೆ ಕಾರ್ಮಿಕರ ಸಂಘಕ್ಕೆ ಜಯವಾಗಲಿ! ಟಿಯುಸಿಐ ಗೆ ಜಯವಾಗಲಿ! ಇಂಕ್ವಿಲಾಬ್ ಜಿಂದಾಬಾದ್ ಘೋಷಣೆಗಳು ಸತತವಾಗಿ ಮೊಳಗಿದವು.

ಇಲಾಖೆಗಳು ಕೆಜಿಐಎಸ್ ಆವೃತ್ತಿ 2.0 ಪ್ರಯೋಜನ ಪಡೆಯಿರಿ: ಕರಾಳೆ

- **ಮಲ್ಲಮ್ಮ ನುಡಿ ವಾರ್ತೆ, ಬೀದರ,**

ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆಯ ಸುಧಾರಿತ ಆವೃತ್ತಿಯಾದ ಕೆ.ಜಿ.ಐ.ಎಸ್. ಆವೃತ್ತಿ 2.0 ಅನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಇಂದು ಕಾರ್ಯಾಗಾರ ಆಯೋಜಿಸಿದ್ದು, ಎಲ್ಲಾ ಇಲಾಖೆಗಳು ಇದರ ಪ್ರಯೋಜನ ಪಡೆಯಬೇಕೆಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ತಿಳಿಸಿದರು.

ಅವರಿಂದು ಜಿಲ್ಲಾ ಪಂಚಾಯತ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ಕರ್ನಾಟಕ ಸರ್ಕಾರ ಬೀದರ ಜಿಲ್ಲಾಡಳಿತ ಸಹಯೋಗದಲ್ಲಿ ಕೆ.ಜಿ.ಐ.ಎಸ್. 2.0 ಸ್ಥಳಿಯ ಆಡಳಿತಾತ್ಮಕ ಜಿ.ಐ.ಎಸ್. ಆಧಾರಿತ ಮಾಹಿತಿಯನ್ನು ತಲುಪಿಸುವ ತಾಂತ್ರಿಕ ಕಾರ್ಯಾಗಾರ ಉದ್ಘಾಟಿಸಿ ಮಾತನಾಡುತ್ತಾ, ಸರ್ಕಾರದದ ವಿವಿಧ ಯೋಜನೆಗಳ ಸಮರ್ಪಕ ಅನುಷ್ಠಾನ ಆಸ್ತಿಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ನಿಖರ ಮೇಲ್ವಿಚಾರಣೆ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿ.ಐ.ಎಸ್.) ಅತ್ಯಗತ್ಯವಾಗಿದೆ.ಈ ಹೊಸ 2.0 ಆವೃತ್ತಿಯ ಜಿಲ್ಲಾಡಳಿತಕ್ಕೆ ಭೂಮಿಯ ಅಂಕಿ ಅಂಶಗಳು, ನಕ್ಷೆಗಳು ಮತ್ತು ಇಲಾಖಾವಾರು ದತ್ತಾಂಶಗಳನ್ನು ಅತ್ಯಂತ ಸುಲಭವಾಗಿ, ವೇಗವಾಗಿ ನಿರ್ವಹಿಸಲು ಸಹಾಯ ಮಾಡಲಿದೆ ಎಂದರು.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಬೆಂಗಳೂರಿನ ನಿರ್ದೇಶಕರಾದ ಡಾ.ರಾಜೇಶ ಎನ್.ಎಲ್. ಕಾರ್ಯಾಗಾರ ಮುಖ್ಯ ಉದ್ದೇಶಗಳ ಕುರಿತು ಮಾತನಾಡುತ್ತಾ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ) ಕರ್ನಾಟಕ ಸರ್ಕಾರದ ಸ್ಥಾಪನೆಗೊಂಡ ಬಗ್ಗೆ ಹಾಗೂ ನಂತರದ ದಿನಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಹಲವು ಮಹತ್ವದ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಕುರಿತು ವಿವರಿಸುತ್ತಾ, ಕೆ.ಜಿ.ಐ.ಎಸ್. ಆವೃತ್ತಿ 1.0 ನ್ನು 2016 ರಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಸುಮಾರು 600 ಜಿ.ಐ.ಎಸ್. ಪದರಗಳು ಮತ್ತು 20 ಲಕ್ಷ ಸರ್ಕಾರಿ ಆಸ್ತಿಗಳ ಮಾಹಿತಿಯನ್ನು ಕೆ.ಜಿ.ಐ.ಎಸ್. ಪೋರ್ಟಲನಲ್ಲಿ ಒಂದೇ ಸೂರಿನಲ್ಲಿ ಲಭ್ಯವಾಗುವಂತೆ ತಂತ್ರಜ್ಞಾನವನ್ನು ಕೆ.ಎಸ್.ಆರ್.ಎಸ್.ಎ. ಕೇಂದ್ರವು ಅಭಿವೃದ್ಧಿಪಡಿಸಿದೆ. ಇದರಲ್ಲಿ 41 ಮೊಬೈಲ್ ಅನ್ವಯಿಕೆಗಲು ಲಭ್ಯವಿದ್ದು, ನಾಗರಿಕರು ಮತ್ತು ಇಲಾಖೆಗಳು ಬಳಸಿಕೊಳ್ಳುತ್ತಿರುವುದಾಗಿ ತಿಳಿಸಿದರು.

ಕೆ.ಜಿ.ಐ.ಎ. ಯೋಜನೆಗೆ 2024ನೇ ಸಾಲಿನ ರಾಷ್ಟ್ರೀಯ ಇ ಆಡಳಿತ ಚಿನ್ನದ ಪ್ರಶಸ್ತಿಯು ಕೇಂದ್ರಕ್ಕೆ ಲಭಿಸಿದೆ. ಜಿಲ್ಲೆ, ತಾಲ್ಲೂಕು, ಗ್ರಾಮ ಪಂಚಾಯಿತಿ ತನ್ನದೇ ಆದ ವೈಶಿಷ್ಟಗಳ ಜೊತೆಗೆ ಸ್ಥಳಿಯ ಸಮಸ್ಯೆ ಹೊಂದಿದ್ದು, ಈ ಸಮಸ್ಯೆಗಳಿಗೆ ಭೂದೈಶಿಕ ದತ್ತಾಂಶದ ಮೂಲಕ ಪರಿಹಾರ ಕಂಡುಕೊಳ್ಳಲು ಹಾಗೂ ವೆಬ್ ಮತ್ತು ಮೊಬೈಲ್ ಅನ್ವಯಿಕೆಗಳನ್ನು ತಯಾರಿಸಲು ಈ ಜಿಲ್ಲಾ ಮಟ್ಟದ ಕೆ.ಜಿ.ಐ.ಎಸ್. 2.0 ಕಾರ್ಯಾಗಾರವನ್ನು ಜಿಲ್ಲಾಡಳಿತದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಇ–ಆಡಳಿತ ವೈಜ್ಞಾನಿಕ ಅಧಿಕಾರಿಗಳಾದ ಕರುಣಾಕರ ಸಂಗನಬಸಪ್ಪ ಅವರು ಕೆ.ಜಿ.ಐ.ಎಸ್. 2.0 ಬಗ್ಗೆ ಮಾಹಿತಿ ನೀಡಿದರು.

ಈ ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿಗಳಾದ ಶರಣಪ್ಪ ಕೊಟ್ಟಪ್ಪಗೊಳ, ಡಿ.ವೈ.ಎಸ್.ಪಿ.ದೂದಪೀರ ಮುಲ್ಲಾ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಬಾ ಸಾಹೇಬ್ ಮಾನವೀಯ ಮಹಾಸಾಗರ


ಡಾ|| ಬಿ.ಆರ್ ಅಂಬೇಡ್ಕರ್ ರವರ 135ನೇ ಜಯಂತ್ಯೋತ್ಸವ
ಹಾಗೂ
ರಾಮ್ ರವರ 119ನೇ ಜಯಂತ್ಯೋತ್ಸವ
ಜೈ ಭೀಮ್

- **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಸಾಮಾಜಿಕ ಸಮಾನತೆ, ಭ್ರಾತೃತ್ವ, ಶಿಕ್ಷಣ, ಸ್ವಾವಲಂಬನೆ, ಮಹಿಳಾ ಹಕ್ಕುಗಳ ಪರವಾಗಿ ಹೋರಾಡಿದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮಾನವೀಯ ಮಹಾಸಾಗರ ಆಗಿದ್ದರು ಎಂದು ದ.ಸಂ.ಸ ತಾಲೂಕು ಅಧ್ಯಕ್ಷ ಶರಣಪ್ಪ ಕಟ್ಟಿಮನಿ ಅಭಿಪ್ರಾಯ ಪಟ್ಟರು.

ಪುರಸಭೆ ಕಾರ್ಯಾಲಯದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜಿ ಸಲ್ಲಿಸಿ ಮಾತನಾಡಿದ ಅವರು ಅಂಬೇಡ್ಕರ್ ಅವರು ಸಮಾಜದ ಉನ್ನತಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು. ಅವರ ಜೀವನಾದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆನೀಡಿದರು. ಪುರಸಭೆ ಮುಖ್ಯಾಧಿಕಾರಿ ಪ್ರವೀಣ್ ಕುಮಾರ್ ಬೋಗಾರ್ ಮಾತನಾಡಿ ಡಾ. ಬಿ.ಆರ್ ಸಾಹೇಬ್ ಅಂಬೇಡ್ಕರ್ ಅವರು ಕೇವಲ ಸಂವಿಧಾನ ಶಿಲ್ಪಿ ಅಲ್ಲ, ಬದಲಾಗಿ ಮಾನವೀಯತೆ, ಸಮಾನತೆ ಮತ್ತು ಮಾನವನ ಘನತೆಯನ್ನು ಎತ್ತಿ ಹಿಡಿದ ಮಹಾನ್ ನೇತಕಾರ ಎಂದು ಹೇಳಿದರು. ನಾಡ ಕಾರ್ಯಾಲಯ, ಗ್ರಂಥಾಲಯ, ರೈತ ಸಂಪರ್ಕ ಕೇಂದ್ರ, ಕೃಷಿ ಮಾರುಕಟ್ಟೆ ಕೇಂದ್ರ, ಸರ್ಕಾರಿ ಪದವಿಪೂರ್ವ ಕಾಲೇಜ್, ಸರಕಾರಿ ಪ್ರಥಮ ದರ್ಜೆ ಕಾಲೇಜ್, ಸೇರಿದಂತೆ ವಿವಿಧ ಸಂಘ–ಸಂಸ್ಥೆ ಹಾಗೂ ಗ್ರಾಮೀಣ ಭಾಗದ ಗ್ರಾಮ ಪಂಚಾಯಿತಿಗಳಲ್ಲಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಜಯಂತಿ ಆಚರಣೆ ಮಾಡಿದರು.

ಉಪ ತಹಸಿಲ್ದಾರ ತುಳಜಾ ರಾಮಸಿಂಗ, ದ.ಸಂ.ಸ ಅಧ್ಯಕ್ಷ ಬಸವರಾಜ ಬಂಕದಮನಿ, ಶಿವಶಂಕರ್ ಗೌಡ ಪಾಟೀಲ್ ಉಪ್ಪಾರ ನಂದಿಹಾಳ, ಮಹಾಂತೇಶ್ ಪಾಟೀಲ್, ತಮ್ಮಣ್ಣ ಗುತ್ತೇದಾರ್, ಹಾಜಿಮಲಂಗ ಬಾಬಾ, ದೇವೇಂದ್ರ ವಕೀಲ, ದುರ್ಗಪ್ಪ ಕಟ್ಟಿಮನಿ, ಕರಿಯಪ್ಪ ಯಾದವ, ಮೆಹಬೂಬ್ ಕಡ್ಡಿಪುಡಿ, ರವಿ ಕಟ್ಟಿಮನಿ, ವೆಂಕಟೇಶ ಹಿರೇಮನಿ, ಬಸವರಾಜ್ ಜಲ್ಲಿ, ಗುಂಡಪ್ಪ ಗಂಗಾವತಿ, ಹುಸೇನಲಿ, ಖದೀರ್ ಪಾನವಾಲೆ, ಕೃಷ್ಣ ಚಲವಾದಿ, ಹುಲುಗಪ್ಪ ಚಲವಾದಿ, ಸಂಜು ಚಲವಾದಿ, ನಂದಪ್ಪ ಕತ್ತಿ, ಸತ್ಯಪ್ಪ ಬೋವಿ, ವ್ಯವಸ್ಥಾಪಕ ಸುರೇಶ ಎನ್ ಹೊನ್ನಳ್ಳಿ, ಕಂದಾಯ ನಿರೀಕ್ಷಕ ಅಂತೋನಿ, ಸೇರಿದಂತೆ ಇತರರಿದ್ದರು.

ಭರವಸೆ ಕೊಟ್ಟು ಮರೆತ ಸರ್ಕಾರ

ಪಂಚಾಯತಿ ನೌಕರರ ಸಂಘದ ಬೃಹತ್ ಪ್ರತಿಭಟನೆ

ಗ್ರಾಮ ಪಂಚಾಯಿತಿ ನೌಕರರಿಗೆ ಕನಿಷ್ಠ ವೇತನಕ್ಕಾಗಿ ಒತ್ತಾಯಿಸಿ,
ನಿವೃತ್ತಿ ಉಪದಾನ 5 ಲಕ್ಷ ಇಡಿಗಂಟು ಹಾಗೂ ESI,PF ಜಾರಿಗೆ ಒತ್ತಾಯಿಸಿ
ಜಿಲ್ಲಾ ಪಂಚಾಯಿತಿ ಮುಂದೆ ಪ್ರತಿಭಟನೆ
ದಿನಾಂಕ : 16-04-2026
CITU

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ರಾಜ್ಯ ಸರ್ಕಾರದ ಭರವಸೆಗಳು ಕೇವಲ ಮಾತಿನ ಮಟ್ಟದಲ್ಲೇ ಉಳಿದಿವೆ ಎಂಬ ಆರೋಪದೊಂದಿಗೆ ಗ್ರಾಮ ಪಂಚಾಯತ್ ನೌಕರರು ಜಿಲ್ಲೆಯಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ (ಸಿಐಟಿಯು) ಬಳ್ಳಾರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ, ಜಿಲ್ಲಾ ಪಂಚಾಯತ್ ಕಚೇರಿ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.

ಜಿಲ್ಲಾ ಅಧ್ಯಕ್ಷ ಎ.ಎಸ್. ಕುಮಾರ್ ಅವರ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ನೌಕರರು ಸರ್ಕಾರ ಹಾಗೂ ಗ್ರಾಮೀಣಾಭಿವೃದ್ಧಿ–ಪಂಚಾಯತ್ ರಾಜ್ ಇಲಾಖೆಯ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು.

ಸಂಘದ ಮಾಹಿತಿ ಪ್ರಕಾರ, ಕಳೆದ ಡಿಸೆಂಬರ್ 20, 2025ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿ ಸರ್ಕಾರದ ಗಮನ ಸೆಳೆದಿದ್ದರೂ, ಡಿಸೆಂಬರ್ 22ರಂದು ನಡೆದ ಸಭೆಯಲ್ಲಿ ನೀಡಿದ ಭರವಸೆಗಳು ಇನ್ನೂ ಜಾರಿಯಾಗಿಲ್ಲ. 19 ಬೇಡಿಕೆಗಳಲ್ಲಿ ಕನಿಷ್ಠ 7 ಬೇಡಿಕೆಗಳನ್ನು ಈಡೇರಿಸುವುದಾಗಿ ಹೇಳಿದರೂ, ಮೂರು ತಿಂಗಳು ಕಳೆದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ನೌಕರರಲ್ಲಿ ಅಸಮಾಧಾನ ಹೆಚ್ಚಿಸಿದೆ.

"ಮಾತಿನಲ್ಲಿ ಭರವಸೆ – ಕಾರ್ಯದಲ್ಲಿ ಶೂನ್ಯ" ಎಂಬ ಸರ್ಕಾರದ ಧೋರಣೆಯನ್ನು ಖಂಡಿಸಿದ ನೌಕರರು, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಮನ್ವಯಿತ ಹೋರಾಟ ನಡೆಸುತ್ತಿದ್ದಾರೆ.

ಸರ್ಕಾರ ತಕ್ಷಣ ಸ್ಪಂದಿಸದಿದ್ದರೆ "ಬೆಂಗಳೂರು ಚಲೋ" ಹೋರಾಟ ಹಮ್ಮಿಕೊಳ್ಳುವುದಾಗಿ ಸಂಘ ಎಚ್ಚರಿಸಿದೆ.

ಸಂಘವು ಮುಂದಿಟ್ಟಿರುವ ಬೇಡಿಕೆಗಳಲ್ಲಿ ಎಲ್ಲಾ ನೌಕರರಿಗೆ ರೂ.5000 ವೇತನ ಹೆಚ್ಚಳ, ನಿವೃತ್ತಿ/ನಿಧನಕ್ಕೆ ರೂ.6 ಲಕ್ಷ ಪರಿಹಾರ, ಸೇವಾ ಹಿರಿತನ ಆಧಾರಿತ ವೇತನ, ಸ್ವಚ್ಛವಾಹಿನಿ ನೌಕರರ ಸಮಸ್ಯೆಗೆ ಪರಿಹಾರ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ನೇಮಕಾತಿ, ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಅನುಮೋದನೆ ಸೇರಿದಂತೆ ಹಲವು ಪ್ರಮುಖ ವಿಷಯಗಳು ಸೇರಿವೆ. ಚಿನ್ನು ಗುಳಂಬ ಸಹಿಸಲಾಗದ ತಕ್ಷಣ ಆದೇಶವಡಿಸಿ ನ್ಯಾಯ ಒದಗಿಸಬೇಕೆಂದು ಸರ್ಕಾರವನ್ನು ಕಠಿಣವಾಗಿ ಆಗ್ರಹಿಸಿದೆ.

ಪ್ರತಿಭಟನೆಯ ಬಳಿಕ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೀರಸೇನರೆಡ್ಡಿ, ರಾಜ್ಯ ಪದಾಧಿಕಾರಿ ರಾಜಸಾಬ್ ಸೇರಿದಂತೆ ಹಲವು ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ನೌಕರರು ಭಾಗವಹಿಸಿದ್ದರು.

ಬಸವಣ್ಣ ಜಯಂತಿ ಮಹೋತ್ಸವ: ಶರಣ ಸಂಗಮ, ದಾಸೋಹಕ್ಕೆ ಭಕ್ತರ ಭಾರಿ ಸ್ಪಂದನೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ವಿಶ್ವಗುರು ಬಸವಣ್ಣನವರ 893ನೇ ಜಯಂತಿ ಮಹೋತ್ಸವದ ಅಂಗವಾಗಿ ಬಳ್ಳಾರಿಯಲ್ಲಿ ಭಕ್ತಿ, ಶ್ರದ್ಧೆ ಹಾಗೂ ಸೇವಾಭಾವದ ವಾತಾವರಣ ಕಂಡುಬಂದಿತು.

ರಾಷ್ಟ್ರೀಯ ಬಸವದಳ, ಬಳ್ಳಾರಿ ಜಿಲ್ಲಾ ಘಟಕದ ವತಿಯಿಂದ ಬೆಂಗಳೂರು ರಸ್ತೆಯ ಎ.ಪಿ.ಎಂ.ಸಿ ಆವರಣದಲ್ಲಿರುವ ರೈತ ಭವನದಲ್ಲಿ ಗುರುವಾರ ಬೆಳಿಗ್ಗೆ 11 ಗಂಟೆಗೆ ಶರಣ ಸಂಗಮ ಹಾಗೂ ದಾಸೋಹ ನಡೆಯಿತು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ನಡೆಸುತ್ತಿರುವ 'ರೈತಣ್ಣನ ಊಟ'ದಲ್ಲಿ ಬಸವ ಭಕ್ತರು, ಸಾರ್ವಜನಿಕರು ಹಾಗೂ ಬಸವಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬಸವಣ್ಣನವರ ತತ್ವಗಳನ್ನು ಸ್ಮರಿಸಿದರು. ಬಸವ ತತ್ವ ಪ್ರಸಾರಕರಾದ ಪರಮಪೂಜ್ಯ ಬಸವದೇವರು (ಬಸವಕಲ್ಯಾಣ) ಅವರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಬಸವಣ್ಣನವರ ಸಮಾನತೆ, ಸಮಾಜ ಸುಧಾರಣೆ ಹಾಗೂ ಮಾನವೀಯ ಮೌಲ್ಯಗಳ ಸಂದೇಶಗಳನ್ನು ಜನತೆಗೆ ತಲುಪಿಸುವ ಉದ್ದೇಶದಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ರೈತರಿಗೆ ವಿಶೇಷವಾಗಿ ದಾಸೋಹ (ಅನ್ನಸಂತರ್ಪಣೆ) ವ್ಯವಸ್ಥೆ ಮಾಡಲಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅನ್ನಸಂತರ್ಪಣೆಯಲ್ಲಿ ಭಾಗವಹಿಸಿದರು. ಇದೇ ವೇಳೆ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ವತಿಯಿಂದ ರೈತ ಭವನದಲ್ಲಿ ಅನ್ನಸಂತರ್ಪಣೆಯು ನಡೆಯಿತು. ಅತಿಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಕೆ. ಸಿ. ಸುರೇಶ ಬಾಬು, ಮಾಜಿ ಅಧ್ಯಕ್ಷರು ಹಾಗೂ ರೈತಣ್ಣನ ಕಲ್ಯಾಣ ಸಮಿತಿಯ ಚೇರ್ಮನರಾದ ಬಿ. ಮಹಾರುದ್ರ ಗೌಡ, ಜಂಟಿ ಕಾರ್ಯದರ್ಶಿಗಳಾದ ವಿ. ರಾಮಚಂದ್ರ ಅವರನ್ನು ಸನ್ಮಾನಿಸಲಾಯಿತು.

ಎಂ. ಗುರುಸ್ವಾಮಿ, ಬಿ.ವಿ. ಬದರಿನಾರಾಯಣ ಹಾಗೂ ರೈತಣ್ಣನ ಕಲ್ಯಾಣ ಸಮಿತಿಯ ಸದಸ್ಯರು ಹಾಗೂ ಎಪಿಎಂಸಿ ವರ್ತಕರು ಮತ್ತು ಸದಸ್ಯರು ಉಪಸ್ಥಿತರಿದ್ದರು. ಒಟ್ಟಾರೆ, ಬಸವಣ್ಣನವರ ಜಯಂತಿ ಅಂಗವಾಗಿ ನಡೆದ ಈ ಶರಣ ಸಂಗಮ ಮತ್ತು ದಾಸೋಹ ಕಾರ್ಯಕ್ರಮವು ಭಕ್ತಿ, ಸೇವಾ ಮನೋಭಾವ ಮತ್ತು ಸಾಮಾಜಿಕ ಏಕತೆಯ ಸಂಕೇತವಾಗಿ ಯಶಸ್ವಿಯಾಗಿ ನೆರವೇರಿತು.

ಪುರಸಭೆ ಕರವಸೂಲಿಗಾರರ ಮೇಲೆ ಬಾಡಿಗೆದಾರರ ದರ್ಪ

ಕಾಣದ ಕೈಗಳಿಂದ ಧಮ್ಕಿ, ಪ್ರಗತಿ ಕಾಮಗಾರಿಗಳಿಗೆ ಹಿನ್ನಡೆ

ವರದಿ: ವಸಂತಯ್ಯ ಡಿ.ಕೆ.

ಹೊಳೆನರಸೀಪುರ: ಪುರಸಭೆಯ ವಾಣಿಜ್ಯ ಮಳಿಗೆಗಳ ಬಾಡಿಗೆ ವಸೂಲಿ ಮಾಡಲು ಹೋದ ಸಿಬ್ಬಂದಿಗಳ ಮೇಲೆ ಬಾಡಿಗೆದಾರರು ಹಾಗೂ ಕಿಡಿಗೇಡಿಗಳು ಧಮ್ಕಿ, ಬೆದರಿಕೆ ಹಾಕುತ್ತಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ತೆರಿಗೆ ಪಾವತಿಸದ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಅಬ್ಬರದಿಂದಾಗಿ ಕರ ವಸೂಲಿ ಪ್ರಕ್ರಿಯೆ ಕುಂಠಿತಗೊಂಡಿದ್ದು, ಪಟ್ಟಣದ ಅಭಿವೃದ್ಧಿ ಕಾಮಗಾರಿಗಳ ಮೇಲೆ ಇದು ನೇರ ಪರಿಣಾಮ ಬೀರಿದೆ.

ಈ ಹಿಂದೆ ಪುರಸಭೆಗೆ ಗಣನೀಯ ಪ್ರಮಾಣದಲ್ಲಿ ಬಾಡಿಗೆ ಆದಾಯ ಬರುತ್ತಿತ್ತು. ಆದರೆ, ಪುರಸಭೆ ಸದಸ್ಯರ ಬೇಜವಾಬ್ದಾರಿ ಹಾಗೂ ಮಳಿಗೆದಾರರೊಂದಿಗೆ ಶಾಮೀಲಾಗಿ 'ಮರು ಹರಾಜು' ಎಂಬ ಅಡ್ಡದಾರಿ ಹಿಡಿದಿರುವುದು ಪುರಸಭೆಯ ಲಾಭಕ್ಕೆ ದೊಡ್ಡ ಹೊಡೆತ ನೀಡಿದೆ. ಹಿಂದೆ ಮಳಿಗೆಗಳಿಗೆ ಹೆಚ್ಚಿನ ಬೇಡಿಕೆಯಿತ್ತು. ಆದರೆ ಈಗ ಪ್ರಭಾವಿಗಳ ಒತ್ತಡದಿಂದಾಗಿ ಮಳಿಗೆಗಳ ಹರಾಜಿನಲ್ಲಿ ಇತರರು ಸ್ಪರ್ಧಿಸದಂತೆ ತಡೆಯಲಾಗುತ್ತಿದೆ. ಅಲ್ಲದೆ, ಅಧಿಕಾರಿಗಳು ಮಳಿಗೆದಾರರೊಂದಿಗೆ ಒಳೊಪ್ಪಂದ ಮಾಡಿಕೊಂಡು ಸರ್ಕಾರದ ಕನಿಷ್ಠ ಬಾಡಿಗೆ ದರದಲ್ಲಿ ಮರು ಹರಾಜು ಪ್ರಕ್ರಿಯೆ ನಡೆಸುತ್ತಿದ್ದಾರೆ ಎಂದು ಕೆಲವು ಪ್ರಾಮಾಣಿಕ ಮಳಿಗೆದಾರರು ಅಳಲು ತೋಡಿಕೊಂಡಿದ್ದಾರೆ.

ಪ್ರಭಾವಿ ವ್ಯಕ್ತಿಗಳು ಹಲವು ವರ್ಷಗಳಿಂದ ಬಾಡಿಗೆ ಪಾವತಿಸದಿದ್ದರೂ ಅಧಿಕಾರಿಗಳು ಮೌನ ವಹಿಸಿದ್ದಾರೆ. ಆದರೆ, ಯಾವುದೇ ಪ್ರಭಾವವಿಲ್ಲದ ಸಾಮಾನ್ಯ ವ್ಯಾಪಾರಿಗಳಿಗೆ ಪ್ರತಿ ತಿಂಗಳು ಬಾಡಿಗೆ ಕಟ್ಟುವಂತೆ ಪೀಡಿಸಿ ಹಿಂಸೆ ನೀಡಲಾಗುತ್ತಿದೆ. ಈ ತಾರತಮ್ಯದ ಬಗ್ಗೆ ಕೇಳಬೇಕಾದ ಯಾವ ಅಧಿಕಾರಿಗಳಾಗಲಿ ಅಥವಾ ಸದಸ್ಯರಾಗಲಿ ಚಕಾರ ಎತ್ತುತ್ತಿಲ್ಲ.

ವಸೂಲಾತಿ ವಿಫಲ ಅಭಿವೃದ್ಧಿ ಮರೀಚಿಕೆ:

ಪುರಸಭೆಯು ಸಾರ್ವಜನಿಕರಿಗೆ ರಸ್ತೆ, ಚರಂಡಿ, ಯುಜಿಡಿ ಮತ್ತು ಸ್ವಚ್ಛತೆಯಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ತೆರಿಗೆ ಹಣವೇ ಮೂಲಾಧಾರ. ಆದರೆ, ಮಳಿಗೆಗಳ ಬಾಡಿಗೆದಾರರು ಸಕಾಲಕ್ಕೆ ಹಣ ಪಾವತಿಸದೆ ಸರ್ಕಾರಕ್ಕೆ ವಂಚಿಸುತ್ತಿದ್ದಾರೆ. ಸಾರ್ವಜನಿಕರು ಕೂಡ ತಮ್ಮ ಮನೆ, ನಿವೇಶನ ಮತ್ತು ನೀರಿನ ತೆರಿಗೆಯನ್ನು ಬಾಕಿ ಉಳಿಸಿಕೊಂಡಿರುವುದು ಪುರಸಭೆಯ ಆರ್ಥಿಕ ಸ್ಥಿತಿಯನ್ನು ಹದಗೆಡಿಸಿದೆ. ಇದರಿಂದಾಗಿ ಪಟ್ಟಣದ ಪ್ರಗತಿಗೆ 'ಗ್ರಹಣ' ಹಿಡಿದಂತಾಗಿದೆ.

ಬಾಕಿ ಉಳಿದ ಕೋಟ್ಯಾಂತರ ರೂಪಾಯಿ

ಪುರಸಭೆ ವ್ಯಾಪ್ತಿಯಲ್ಲಿ ಒಟ್ಟು 372 ವಾಣಿಜ್ಯ ಮಳಿಗೆಗಳಿದ್ದು, ಈ ಪೈಕಿ 260 ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದೆ.

ಪ್ರತಿ ವರ್ಷ ಬರಬೇಕಾದ ಬಾಡಿಗೆ ಹಣ–232 ಲಕ್ಷ.

ಈವರೆಗೆ ವಸೂಲಿಯಾಗಿರುವುದು:–150 ಲಕ್ಷ

ಪ್ರಸ್ತುತ ಸಾಲಿನ ಬಾಕಿ ಮೊತ್ತ: –80 ಲಕ್ಷ

ಸುಮಾರು 12 ಮಳಿಗೆದಾರರು ತಲಾ 8 ರಿಂದ 10 ಲಕ್ಷ ರೂಪಾಯಿಗಳಷ್ಟು ಬೃಹತ್ ಮೊತ್ತದ ಬಾಡಿಗೆಯನ್ನು ಬಾಕಿ ಉಳಿಸಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಸಾರ್ವಜನಿಕರ ಆಕ್ರೋಶ

'ಕರ ವಸೂಲಿಗಾರರ ಮೇಲೆ ದೌರ್ಜನ್ಯ ಎಸಗುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಇಷ್ಟು ದೊಡ್ಡ ಮೊತ್ತದ ಬಾಡಿಗೆ ಬಾಕಿ ಉಳಿಯಲು ಅಧಿಕಾರಿಗಳ ನಿರ್ಲಕ್ಷ್ಯವೂ ಕಾರಣ, ಪುರಸಭೆ ವಾಣಿಜ್ಯ ಮಳಿಗೆದಾರರು ಒಬ್ಬೊಬ್ಬರು ಎಂಟರಿಂದ ಹತ್ತು ಲಕ್ಷದವರೆಗೆ ಬಾಡಿಗೆ ಉಳಿಸಿಕೊಂಡಿದ್ದು ಇದು ಪುರಸಭೆಯ ಅಧಿಕಾರಿಗಳ ವೈಫಲ್ಯ ವಿರಬಹುದು ಅಥವಾ ರಾಜಕಾರಣಿಗಳ ಕಪಿ ಮುಷ್ಟಿಗೆ ಸಿಲುಕಿಕೊಂಡು ಕೆಲವರಿಗೆ ರಾಜಕಾರಣಿಗಳ ಬೆಂಬಲವಿದ್ದು ಬಾಡಿಗೆ ಕಟ್ಟಲು ಹಿಂದೆ ಮುಂದೆ ಯೋಚಿಸುತ್ತಿದ್ದಾರೆ. ಕೆಲವು ರಾಜಕೀಯ ವ್ಯಕ್ತಿಗಳಿಂದಲೂ ಬಾಡಿಗೆ ಬರಬೇಕು. ಅಧಿಕಾರಿಗಳಿಗೆ ನುಂಗಲಾರದ ತುಪ್ಪವಾಗಿದೆ. ಪಟ್ಟಣ ಅಭಿವೃದ್ಧಿ ಕಾಣದೆ ಮರೀಚಿಕೆಯಾಗಿದ್ದು ಎಲ್ಲಾ ಬಡಾವಣೆಗಳ ರಸ್ತೆಗಳು ಗುಂಡಿಮಯವಾಗಿವೆ. ಇದೊಂದು ಪ್ರಜಾಪ್ರಭುತ್ವದ ಕಗ್ಗೊಲೆ ಹಾಗೂ ಹಗಲು ದರೋಡೆ ಎಂದು ಭಾವಿಸಬೇಕಾಗುತ್ತದೆ. ಏಕೆಂದರೆ ಪುರಸಭಾ ವಸೂಲಿದಾರರು ಹಣ ಕೇಳಲು ಹೋದರೆ ದುಂಡಾವರ್ತನೆ ಮಾಡಿ ಬೆದರಿಕೆ ಹಾಕುತ್ತಿರುವುದು ಕಂಡು ಬಂದಿದೆ. ಆದ್ದರಿಂದ ಪುರಸಭಾ ಅಧಿಕಾರಿಗಳು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಪೊಲೀಸ್ ಠಾಣೆಗೆ ದೂರು ನೀಡಿ ಪುರಸಭೆಗೆ ಬರಬೇಕಾದ ಬಾಡಿಗೆ ಹಣವನ್ನು ವಸೂಲಿ ಮಾಡಿ ಪಟ್ಟಣದ ಅಭಿವೃದ್ಧಿಗೆ ಶ್ರಮಿಸಬೇಕೆಂದು ದಸಂಸ ರಾಜ್ಯ ಸಂಚಾಲಕ ಎಂ. ಸೋಮಶೇಖರ್ ಒತ್ತಾಯಿಸಿದ್ದಾರೆ.

"ಸಿಬ್ಬಂದಿ ಅಳಲು , ಮುಖ್ಯಾಧಿಕಾರಿ ಎಚ್ಚರಿಕೆ:

ಕರ ವಸೂಲಿಗಾರ ಮೋಹನ್ ಮಾತನಾಡಿ, 'ಬಾಡಿಗೆ ಕೇಳಲು ಹೋದಾಗ ಬಾಡಿಗೆದಾರರು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. 'ಯಾರಿಗೆ ಬೇಕಾದರೂ ಹೇಳಿಕೊ, ನಮ್ಮನ್ನು ಏನೂ ಮಾಡಲು ಸಾಧ್ಯವಿಲ್ಲ' ಎಂದು ಧಮ್ಕಿ , ಬೆದರಿಕೆ ಹಾಕುತ್ತಾರೆ.ಈ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದೇನೆ. ಈಗಾಗಲೇ ಕೆಲವರಿಗೆ ನೋಟಿಸ್ ನೀಡಿ ಅತಿ ಹೆಚ್ಚು ಬಾಡಿಗೆ ಉಳಿಸಿಕೊಂಡಿರುವ ಮಳಿಗೆಗಳಿಗೆ ಬೀಗ ಜಡಿಯಲಾಗಿದೆ,' ಎಂದು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಮುಖ್ಯಾಧಿಕಾರಿ ಶಿವಶಂಕರ್ ಪ್ರತಿಕ್ರಿಯೆ

'ಬಾಡಿಗೆದಾರರು ಕರ ವಸೂಲಿಗಾರರ ಮೇಲೆ ದೌರ್ಜನ್ಯ ನಡೆಸುವುದು ಸರಿಯಲ್ಲ. ಈಗಾಗಲೇ ಬಾಕಿ ಉಳಿಸಿಕೊಂಡಿರುವ ೨೫ ಮಳಿಗೆಗಳಿಗೆ ಬೀಗ ಹಾಕಲಾಗಿದೆ. ಇನ್ನು ಮುಂದೆ ಸಿಬ್ಬಂದಿಗೆ ಬೆದರಿಕೆ ಹಾಕಿದರೆ ಅಥವಾ ಸಹಕರಿಸದಿದ್ದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಿ, ಪೊಲೀಸ್ ಪ್ರಕರಣ ದಾಖಲಿಸಲಾಗುವುದು. ಅಭಿವೃದ್ಧಿ ದೃಷ್ಟಿಯಿಂದ ಬಾಡಿಗೆದಾರರು ಕೂಡಲೇ ಬಾಕಿ ಪಾವತಿಸಬೇಕು ಎಂದು ಹೇಳಿದ್ದಾರೆ.

'ಪುರಸಭೆಯು ತೆರಿಗೆ ವಸೂಲಿ ಮಾಡುವಲ್ಲಿ ನಾಟಕವಾಡಬಾರದು. ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಪುರಸಭೆ ಹಿಂದೇಟು ಹಾಕಿರುವುದರಲ್ಲಿ ಯಾವುದೇ ಅನುಮಾನವಿಲ್ಲ. ಸಾರ್ವಜನಿಕರು ತೆರಿಗೆ ಪಾವತಿಸದೆ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಪಟ್ಟಣದ ರಸ್ತೆಗಳು ಗುಂಡಿ ಬಿದ್ದು ಅಪಘಾತಗಳು ಸಂಭವಿಸುತ್ತಿವೆ. ತಕ್ಷಣವೇ ತೆರಿಗೆ ಸಂಗ್ರಹಿಸಿ ರಸ್ತೆಗಳ ದುರಸ್ತಿ ಮತ್ತು ಡಾಂಬರೀಕರಣ ಮಾಡಬೇಕು,' ಎಂದು ಬಾಗಿವಾಳು ಮಂಜೇಗೌಡ ಆಗ್ರಹಿಸಿದ್ದಾರೆ.

ಮಳಿಗೆ ಬಾಡಿಗೆ ಮತ್ತು ಮರು ಹರಾಜಿನಲ್ಲಿ ಭ್ರಷ್ಟಾಚಾರದ ಬಗ್ಗೆ ಲೋಕಾಯುಕ್ತದಲ್ಲಿ ೨ ದೂರ ಸಲ್ಲಿಸಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಜನಪ್ರತಿನಿಧಿಗಳ ತಾತ್ಸಾರ ಮನೋಭಾವನೆ ಇದಕ್ಕೆ ಮುಖ್ಯ ಕಾರಣ. ಮಾಂಸದ ಮಳಿಗೆಗಳನ್ನು ವಾರ್ಷಿಕ ಹರಾಜು ಬಿಟ್ಟು ಮಾಸಿಕ ಬಾಡಿಗೆ ಕೊಟ್ಟು ಅವರಿಂದ ಬಾಡಿಗೆ ವಸೂಲಿ ಮಾಡದೇ ಪುರಸಭೆಗೆ ಆರ್ಥಿಕ ನಷ್ಟ ಉಂಟು ಆಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಮುತ್ತುರಾಜ್ ತಿಳಿಸಿದ್ದಾರೆ.

ನಗರದಲ್ಲಿ ಕಾರುಗಳ ಬೃಹತ್ ರ್‍ಯಾಲಿ

ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ :– ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಹಾಗೂ ವಿಶ್ವಸ್ಥ ಸಮಿತಿ ವತಿಯಿಂದ ಹಮ್ಮಿಕೊಂಡಿರುವ ಮಹಾತ್ಮ ಬಸವೇಶ್ವರರ ಜಾತ್ರಾ ಮಹೋತ್ಸವದ ನಿಮಿತ್ತ ನಗರದಲ್ಲಿ ಕಾರುಗಳ ಬೃಹತ್ ರ್‍ಯಾಲಿ ಯನ್ನು ರಥ ಮೈದಾನದಲ್ಲಿ ಜೇವರ್ಗಿ ಚಿರಗಳ್ಳಿಯ ಶ್ರೀ ಜಗದ್ಗುರು ಮರಳಶಂಕರ ದೇವರ ಗುರು ಪೀಠದ ಪೂಜ್ಯಶ್ರೀ ಸಿದ್ದಬಸವ ಕಬೀರ್ ಸ್ವಾಮಿಗಳು ಚಾಲನೆ ನೀಡಿದರು. ರಥ ಮೈದಾನ ದಿಂದ ಹೊರಟ ಈ ಕಾರುಗಳ ರಾಲ್ಲಿ ಬಸವೇಶ್ವರ ವೃತ್ತ. ಐತಿಹಾಸಿಕ ಕೋಟೆ ಮಾರ್ಗವಾಗಿ. ಬಸವೇಶ್ವರ ದೇವಸ್ಥಾನ. ಗಾಂಧಿ ವೃತ್. 108.ಅ.ಡಿ. ಬಸವೇಶ್ವರ ಮೂರ್ತಿ. ಬಸವಕಲ್ಯಾಣದ ಮುಖ್ಯ ಮಹಾ ದ್ವಾರ ಮುಖಾಂತರ ತಿಪುರಾಂತ. ನಾರಾಯಣಪುರ. ಹುಲಸೂರ ಕ್ರಾಸ ಮಾರ್ಗವಾಗಿ ಮತ್ತೆ ಬಸವೇಶ್ವರ ರಥ ಮೈದಾನಕೆ ಬದ್ದು ತಲುಪಿದವು . ಈ ಸಂದರ್ಭದಲ್ಲಿ. ಮಾಜಿ ಶಾಸಕರಾದ ಮಲ್ಲಿಕಾರ್ಜುನ ಎಸ್ ಖೂಬಾ. ದೇವಸ್ಥಾನದ ಅಧ್ಯಕ್ಷರಾದ ಅನೀಲ ಕುಮಾರ ರಗಟೆ. ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಕುರಕೋಟೆ. ಕೋಶಾಧ್ಯಕ್ಷರಾದ ಜಗನ್ನಾಥ ಖುಬಾ. ಕಾರ್ಯದರ್ಶಿ ಅಶೋಕ ನಾಗರಾಳೆ. ಸಹ ಕಾರ್ಯದರ್ಶಿ ಬಸವರಾಜ ಬಾಲಕಿಲೆ. ಸುನೀಲ ರಾಯವಾಡೆ. ನಿರ್ದೇಶಕರಾಗಿ ಬಸವರಾಜ ಕೊರಕೆ. ಇರಣ್ಣಾಹಲಶೆಟ್ಟೆ. ಬದರಿನಾಥ ಪಾಟೀಲ. ವಿವೇಕಾನಂದ ಹೊದಲೂರೆ. ಬಸವರಾಜ ತೊಂಡಾರೆ. ಮಲ್ಲಿಕಾರ್ಜುನ ಚಿರಡೆ. ಸುನೀಲ ಕುಮಾರ ಹೊಳಕುಂದೆ. ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಉಪಾಧ್ಯಕ್ಷರಾದ ಡಾ. ಜಿ. ಎಸ್. ಭುರಳೆ. ಕಾರ್ಯದರ್ಶಿ ನಾಗಯ್ಯ ಸ್ವಾಮಿ. ಕೋಶಾಧ್ಯಕ್ಷರಾದ ಶಿವರಾಜ ಶಾಶಟೆ. ಮಲ್ಲಿಕಾರ್ಜುನ ಮಂಠಾಳೆ. ಅಲ್ಲದೆ ಡಾ. ಧನರಾಜ ಚಂದನಕೆರೆ. ವಿಜಯಕುಮಾರ ಮಂಠಾಳೆ. ರವೀಂದ್ರ ಕೊಳಕೂರ. ಶಿವಕುಮಾರ್ ಬಿರಾದಾರ. ಶಿವಕುಮಾರ ಆಗ್ರೆ. ಲೋಕೇಶ್ ಮೊಳಕೆರೆ. ಸಿದಾಣಟಿಜಜಜುಟಿಜಜಮ ಕಾಮಣ್ಣ . ನಾಗಪ್ಪಾ ನಿಣ್ಣೆ. ಸೇರಿದಂತೆ ಅನೇಕರ ಸಂಘ ಸಂಸ್ಥೆಗಳು ಪ್ರಮುಖರು ಬಸವಾಭಿಮಾನಿಗಳು ಭಾಗವಹಿಸಿದ್ದರು.

ತರಕಾರಿ ವ್ಯಾಪಾರಿಗಳಿಗೆ ಜಾಗದ ಪತ್ರ ವಿತರಣೆ

ಬಳ್ಳಾರಿ,: ಸ್ಥಳೀಯ ಪಾರ್ವತಿ ನಗರ ಮುಖ್ಯ ರಸ್ತೆಯಲ್ಲಿರುವ ಜೈಲ್ ಗೋಡಿ ಪಕ್ಕದಲ್ಲಿ.. ತರಕಾರಿ ಮಾರುಕಟ್ಟೆ ಅಂಗಡಿಗಳ ಸಂಖ್ಯೆಗಳನ್ನು.. ವ್ಯಾಪಾರಿಗಳ ಸಮಕ್ಷಮದಲ್ಲಿ ಲಾಟರಿ ಮೂಲಕ.. ಹತ್ತು ಜನ ವ್ಯಾಪಾರಸ್ಥರಿಗೆ.. ಜಾಗಗಳನ್ನು ಗುರುತಿಸಿ ವ್ಯಾಪಾರ ಮಾಡಲು ಪತ್ರವನ್ನು ನೀಡಲಾಯಿತು.. ಈ ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಮೇಯರ್ ಗಾದೆಪ್ಪ ಹಾಗೂ ಶಾಸಕರಾದ ನಾರಾ ಭರತ್ ರೆಡ್ಡಿ. ಹಾಗೂ ಪಾಲಿಕೆ ಆಯುಕ್ತರು ಹಾಗೂ ಪಾಲಿಕೆ ಸದಸ್ಯರಾದ ಗುಡಿಗಂಟು ಹನುಮಂತು ಕುಬೇರ ಹಾಗೂ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು

ದ್ವಿತೀಯ ಪಿಯು ಪರೀಕ್ಷೆ ವಿಜ್ಞಾನದಲ್ಲಿ ಜಿಲ್ಲೆಗೆ ಪ್ರಥಮ ವೆಂಕಟಸಾಯಿಗೆ ಡಿಸಿ ಗೌರವ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪ್ರಸಕ್ತ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 594/600 ಅಂಕ ಪಡೆದು ರಾಜ್ಯ ಮಟ್ಟದಲ್ಲಿ ಐದನೇ ರ್‍ಯಾಂಕ್ ಹಾಗೂ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಪಡೆದು ಕೀರ್ತಿ ತಂದಿರುವ ವೆಂಕಟಸಾಯಿ . ವಿದ್ಯಾರ್ಥಿಯನ್ನು ಜಿಲ್ಲಾಧಿಕಾರಿಗ ಕೆ ನಾಗೇಂದ್ರ ಪ್ರಸಾದ್ ತಮ್ಮ ಕಚೇರಿಯಲ್ಲಿ ನಿನ್ನೆ ಸನ್ಮಾನಿಸಿ ಗೌರವಿಸಿದ್ದಾರೆ. ಈ ವಿದ್ಯಾರ್ಥಿಯು ಮುಂದೆ ವೈದ್ಯಕೀಯ ಕೋರ್ಸ್ ಮಾಡುವುದಾಗಿ ಹೇಳಿದ್ದಾನೆ.

ಏಪ್ರಿಲ್ 25ರಿಂದ ವ್ಯಕ್ತಿತ್ವ ವಿಕಸನ ಶಿಬಿರ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇಲ್ಲಿನ ಗಾಧಿನಗರ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಏ. 25 ರಿಂದ ಮೇ 5 ರ ವರೆಗೆ ಪ್ರತಿದಿನ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆವರೆಗೆ ಶ್ರೀರಾಮಕೃಷ್ಣ ಮಿಷನ್ ನಿಂದ. ವಿವೇಕ ವಿಹಾರ ಎಂಬ ವ್ಯಕ್ತಿತ್ವ ವಿಕಸನ ಶಿಬಿರ ಹಮ್ಮಿಕೊಳ್ಳಲಾಗಿದೆ.

ಬಳ್ಳಾರಿ ಶ್ರೀರಾಮಕೃಷ್ಣ ಮಿಷನ ಮುಖ್ಯಸ್ಥ ಸ್ವಾಮಿ ಮಂಗಳಾನಾಥಾನಂದ ಮಹಾರಾಜ್ ಅವರ ಮಾರ್ಗದರ್ಶನದಲ್ಲಿ ಶಿಬಿರ ಜರುಗಲಿದೆ. 6ರಿಂದ 9ನೇ ತರಗತಿಯ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಬಹುದು. ಧ್ಯಾನ, ಆಧ್ಯಾತ್ಮಿಕ ಚಟುವಟಿಕೆಗಳು, ಶಾರೀರಕ–ಕ್ರೀಡಾ ಚಟುವಟಿಕೆಗಳು, ಬೌದ್ಧಿಕ ಹಾಗೂ ವ್ಯಕ್ತಿತ್ವ ನಿರ್ಮಾಣದ ಚಟುವಟಿಕೆಗಳು ಶಿಬಿರದಲ್ಲಿ ನಡೆಯಲಿವೆ. ನೋಂದಣಿಗೆ ಏ. 23 ಕೊನೆಯ ದಿನವಾಗಿದೆ ಹೆಚ್ಚಿನ ಮಾಹಿತಿಗೆ 7676161099, 9008462344 ಅಥವಾ 7892391348ನ್ನು ಸಂಪರ್ಕಿಸಬಹುದು ಎಂದು ಶಿಬಿರದ ಸಂಯೋಜಕ ಜಗನ್ನಾಥ ತಿಳಿಸಿದ್ದಾರೆ.

ದ್ರವ್ಯಸೇವನೆ ಇಬ್ಬರ ಬಂಧನ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮಾದಕ ದ್ರವ್ಯ ಸೇವನೆ ಪ್ರಕರಣದಡಿ ಬಳ್ಳಾರಿಯಲ್ಲಿ ಇಬ್ಬರನ್ನು ಬಂಧಿಸಲಾಗಿದೆಂದು ಎಸ್ಪಿ ಸುಮನ್ ಡಿ.ಪೆನ್ನೇಕರ್ ತಿಳಿಸಿದ್ದಾರೆ. ಕಳೆದ ಮಾರ್ಚ 27 ರಿಂದ ಎಪ್ರಿಲ್ 14 ರ ವರೆಗೆ ಈ ಕುರಿತು ಸಂಜೆ 8 ರಿಂದ ರಾತ್ರಿ 11 ವರೆಗೆ ಮಾದಕ ದ್ರವ್ಯ ಸೇವನೆ ಮಾಡುವವರನ್ನು ಪತ್ತೆ ಹಚ್ಚಲು ವಿಶೇಷ ಗಸ್ತನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಚರಣೆಯಲ್ಲಿ 766 ಜನರನ್ನು ಪರಿಶೀಲನೆ ಮಾಡಿ, 63 ಜನರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾತ್ತು. ಇವರಲ್ಲಿ ಇಬ್ಬರು ಮಾದಕ ದ್ರವ್ಯಸೇವನೆ ಮಾಡಿರುವುದು ಧೃಡಪಟ್ಟಿರುತ್ತದೆ. ಈ ಇಬ್ಬರ ವಿರುದ್ಧ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ. ಉಳಿದ 762 ಜನರ ವಿರುದ್ಧ ಅನುಮಾನಸ್ಪದ ಓಡಾಟ ಆಧಾರದಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಯಡಿಯಲ್ಲಿ ಲಘು ಪ್ರಕರಣಗಳನ್ನು ದಾಖಲಿಸಲಾಗಿದೆಂದು ಅವರು ಹೇಳಿದ್ದಾರೆ.

ಮಿನಿ ಬಸ್-ಟ್ರ್ಯಾಕ್ಟರ್ ಡಿಕ್ಕಿ ವೃದ್ದೆ ಸಾವು ,ಐವರಿಗೆ ಗಾಯ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಕುರುಗೋಡು ಪಟ್ಟಣದ ಹೊರ ವಲಯದ ಯಲ್ಲಾಪುರ ಕ್ರಾಸ್ ಬಳಿ ಇಂದು ಬೆಳಿಗ್ಗೆ ಮಿನಿ ಬಸ್ ಹಾಗು ಟ್ರಾಕ್ಟರ್ ನಡುವೆ ಮುಖಾಮುಖಿ ಡಿಕ್ಕಿಯಾದ ಘಟನೆಯಲ್ಲಿ ಓರ್ವ ವೃದ್ದೆ ಸಾವನ್ನಪ್ಪಿದ್ದು. ಐವರು ಗಾಯಗೊಂಡಿದ್ದಾರೆ. ಕುರುಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಟಿಟಿ ಮಿನಿ ಬಸ್ ನಲ್ಲಿ ತಿರುಪತಿ ತಿಮ್ಮಪ್ಪನ ದರ್ಶನಮುಗಿಸಿ ಬಂದವರಿಗೆ ಜಾವರಾಯ ಯಮನಂತೆ ಬಂದ ಟ್ರಾಕ್ಟರ್ ಡಿಕ್ಕಿಯಾಗಿದೆ. ಕಳೆದೆರಡು ದಿನಗಳ ಹಿಂದೆ ಕೊಪ್ಪಳ ಜಿಲ್ಲೆಯ ಹಾಳ ಗ್ರಾಮದಿಂದ ಟಿಟಿ ಬಸ್ ನಲ್ಲಿ ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಹದಿನೈದು ಜನರು ಹೋಗಿದ್ದರು. ದರ್ಶನ ಮಾಗಿಸಿಕೊಂಡು ವಾಪಸ್ ಊರಿಗೆ ಬರುವ ಸಂದರ್ಭದಲ್ಲಿ ಯಲ್ಲಾಪುರ ಕ್ರಾಸ್ ಹತ್ತಿರದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಸಗಣಿ ಗೊಬ್ಬರ ಹೊತ್ತು ಸಾಗುತ್ತಿದ್ದ ಟ್ರಾಕ್ಟರ್ ನ ಚಾಲಕನ ನಿರ್ಲಕ್ಷದಿಂದ ಅಪಘಾತ ಸಂಭವಿಸಿದೆ. ಸ್ಥಳದಲ್ಲಿ ವೃದ್ಧ ಮಹಿಳೆ ರತ್ನಮ್ಮ (70) ಅಸುನೀಗಿದ್ದಾಳೆ ಐದು ಜನರಿಗೆ ಗಾಯಗಳಾಗಿದ್ದು ಸ್ಥಳೀಯ ಆರೋಗ್ಯ ಕೇಂದ್ರದಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದರು.ಟ್ರಾಕ್ಟರ್ ಚಾಲಕ ಪರಾರಿಯಾಗಿದ್ದಾನೆ.

ಬಿಜೆಪಿ ಮಹಿಳಾ ಮೋರ್ಚಾ, ನಾರಿ ಶಕ್ತಿ ವಂದನಾ ಜಾಥಾ

- **ಮಲ್ಲಮ್ಮ ನುಡಿ ವಾರ್ತೆ,** ಕುರುಗೋಡು

ಪಟ್ಟಣದ ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನದಿಂದ ಎದುರು ಬಸವಣ್ಣನ ಗುಡಿಯವರೆಗೆ ನಾರಿ ಶಕ್ತಿ ವಂದನಾ ಜಾಥಾವನ್ನು ಕುರುಗೋಡು ಮಂಡಲದ ಬಿಜೆಪಿ ಮಹಿಳಾ ಮೋರ್ಚಾದ ವತಿಯಿಂದ ಗುರುವಾರ ನಡೆಸಲಾಯಿತು.

ಈ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷರಾದ ಹಂಪಿ ರಮಣ ರಾಜ್ಯ ಕಾರ್ಯ ಕರ್ಣಿ ಸದಸ್ಯರಾದ ಡಾ.ಅರುಣಾ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ವಿಜಯ ಲಕ್ಷ್ಮಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಬಿಯಾ ಹಾಗೂ ಭಾರತಿ ಹಾಗೂ ಸಿರುಗುಪ್ಪ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷರಾದ ಮಹಾಲಕ್ಷ್ಮೀ ಅವರು ಮಾತನಾಡಿದರು.

ಈ ವೇಳೆ ಕುರುಗೋಡು ಪುರಸಭೆ ಸದಸ್ಯರಾದ ಲಲಿತಾ ತಿಪ್ಪನಗೌಡ ರವರು,ಹಾಗೂ ಕುರುಗೋಡು ಪುರಸಭೆ ಮಾಜಿ ಉಪಾಧ್ಯಕ್ಷರಾದ ಪೂರ್ಣಿಮಾ ಕುರುಗೋಡು ಮಹಿಳಾ ಮೋರ್ಚಾ ಅಧ್ಯಕ್ಷರಾದ ಲತಾ ಕುರುಗೋಡು ಮಂಡಲ ಅಧ್ಯಕ್ಷರಾದ ಮದಿರೆ ಕುಮಾರಸ್ವಾಮಿ ಮಹಾಶಕ್ತಿ ಕೇಂದ್ರ ಅಧ್ಯಕ್ಷರಾದ ವೀರಭದ್ರಗೌಡ ಹಾಗೂ ಯುವ ಮೋರ್ಚಾ ಅಧ್ಯಕ್ಷರಾದ ಮೇಲಗಿರಿ ಬಸವರಾಜ ಉಪಸ್ಥಿತರಿದ್ದರು.

ಆಸ್ಪತ್ರೆಗೆ ಬಂದವರಿಗೆ ಕೊರತೆಯಾಗದಂತೆ ನೋಡಿಕೊಳ್ಳಿ: ಚೌಧರಿ

- **ಮಲ್ಲಮ್ಮ ನುಡಿ ವಾರ್ತೆ, ಪಿರಿಯಾಪಟ್ಟಣ**

ಆಸ್ಪತ್ರೆಗೆ ಬಂದ ಗರ್ಭಿಣಿ ಸ್ತ್ರೀಯರು ಮತ್ತು ಮಕ್ಕಳಿಗೆ ಹಾಗೂ ರೋಗಿಗಳಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ವೈದ್ಯರು ಹಾಗೂ ಸಿಬ್ಬಂದಿಗಳಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳ ಯೋಗಕ್ಷೇಮವನ್ನು ಆಲಿಸಿದ ನಂತರ ಮಾತನಾಡಿದರು.

ಆಸ್ಪತ್ರೆಯಲ್ಲಿ ವೈದ್ಯರ ಸೇವೆ ರೋಗಿಗಳಿಗೆ ನ್ಯಾಯಯುತವಾಗಿ ದೊರೆಯುತ್ತಿರುವ ಪರಿಣಾಮ ಜಿಲ್ಲಾ ಆಸ್ಪತ್ರೆ ಸೇರಿದಂತೆ ಇನ್ನಿತರ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ಹೆಚ್ಚು ಹೋಗದಂತಾಗುತ್ತಿದೆ ಎಂದು ಹಲವರು ತಿಳಿಸಿದ್ದಾರೆ ಆದ್ದರಿಂದ ನನಗೆ ಸಮಾಧಾನ ತಂದಿದೆ ಎಂದರು.

ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಕೊರತೆಯ ಜೊತೆಗೆ ಔಷಧಿ ಮಾತ್ರೆಗಳ ಕೊರತೆಯೂ ಕಂಡುಬಂದಿದ್ದು ಇಲಾಖೆಯ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡ ಆರೋಗ್ಯ ಇಲಾಖೆ ಆಯುಕ್ತರಿಗೆ ಇರುವ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವಂತೆ ಪತ್ರ ವ್ಯವಹಾರ ನಡೆಸುವುದಾಗಿ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಶ್ರೀನಿವಾಸ್ ಕೃಷ್ಣಪ್ಪ ಆಸ್ಪತ್ರೆಯ ಆಡಳಿತ ಅಧಿಕಾರಿ ಡಾ. ಶಶಿಧರ್ ಮತ್ತು ಡಾ. ಶೋಭಾ ಇನ್ನಿತರ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಾರ್ವಜನಿಕರು ಹಾಜರಿದ್ದರು.

ಸ್ವಯಂ ಗಣತಿಯಲ್ಲಿ ಬಾಗಲಕೋಟೆ 3ನೇ ಸ್ಥಾನ

- **ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ**

ಜಿಲ್ಲೆಯಲ್ಲಿ ಎಪ್ರೀಲ್ 1 ರಿಂದ 15 ವರೆಗೆ ನಡೆದ ಸ್ವಯಂ ಗಣತಿ ಕಾರ್ಯ ಮುಕ್ತಾಯಗೊಂಡಿದ್ದು, ಎಪ್ರೀಲ್ 16 ರಿಂದ ಮೇ 15 ರವರೆಗೆ ಮನೆ ಮನೆ ಗಣತಿ ಕಾರ್ಯ ನಡೆಯುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

ಮನೆ ಮನೆ ಗಣತಿ ಕಾರ್ಯಕ್ಕೆ 3190 ಬ್ಲಾಕ್‌ಗಳನ್ನು ಮಾಡಲಾಗಿದೆ. ಪ್ರತಿಯೊಂದು ಬ್ಲಾಕ್‌ಗೆ ಓರ್ವ ಗಣತಿದಾರರು ಸೇರಿದಂತೆ ಒಟ್ಟು 4212 ಗಣತಿದಾರರನ್ನು ನಿಯೋಜಿಸಲಾಗಿದೆ.

6 ಜನ ಗಣತಿದಾರರಿಗೆ ಓರ್ವ ಸುಪರ್‌ವೈಜರ್‌ನಂತೆ ಒಟ್ಟು 776 ಸುಪರ್ ವೈಜರಗಳನ್ನು ನೇಮಿಸಲಾಗಿದೆ. ಜಿಲ್ಲೆಯಲ್ಲಿ 4,40,602 ಮನೆಗಳಿದ್ದು, ಪ್ರತಿಯೊಂದು ಮನೆಗಳಿಗೆ ತೆರಳಿ ಗಣತಿದಾರರು ಮನೆಯ ಸ್ಥಿತಿಗತಿ, ಮೂಲಸೌಕರ್ಯ ಸೇರಿದಂತೆ ಇತರೆ ಮಾಹಿತಿಗಳನ್ನು ಕಲೆ ಹಾಕಲಿದ್ದಾರೆಂದು ತಿಳಿಸಿದರು.

ಮನೆಗಣತಿ ಕಾರ್ಯವನ್ನು ನಿಖರವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಗಣತಿದಾರರಿಗೆ ಈಗಾಗಲೇ ತರಬೇತಿ ಕೂಡಾ ನೀಡಲಾಗಿದೆ. ಯಾವುದೇ ಮಾಹಿತಿ ತಪ್ಪದೇ ದಾಖಲಾಗುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕರು ಸಹ ಸಹಕಾರ ನೀಡಿ, ಸರಿಯಾದ ಮಾಹಿತಿಯನ್ನು ನೀಡುವಂತೆ ಮನವಿ ಮಾಡಿದ್ದಾರೆ.

ಜಿಲ್ಲೆಯಲ್ಲಿ ಎ.1 ರಿಂದ 15 ರವರೆಗೆ ನಡೆದ ಸ್ವಯಂ ಗಣತಿ ಕಾರ್ಯದಲ್ಲಿ ಜಿಲ್ಲೆಯಲ್ಲಿರುವ 4,40,602 ಮನೆಗಳ ಪೈಕಿ 72,789 ಮನೆಗಳು ಸ್ವಯಂ ಗಣತಿ ಕೈಗೊಳ್ಳುವ ಮೂಲಕ ಶೇ.16.52 ಪ್ರಗತಿ ಸಾಧಿಸುವ ಮೂಲಕ ರಾಜ್ಯದಲ್ಲಿ 3ನೇ ಸ್ಥಾನ ಪಡೆದುಕೊಂಡಿದೆ.

ಬಳ್ಳಾರಿ ಜಿಲ್ಲೆ ಶೇ.19.02 ರಷ್ಟು ಪ್ರತಿ ಸಾಧಿಸುವ ಮೂಲಕ ಪ್ರಥಮ ಸ್ಥಾನ ಪಡೆದುಕೊಂಡರೆ, ದಕ್ಷಿಣ ಕನ್ನಡ ಶೇ.17.48 ರಷ್ಟು ಪ್ರತಿ ಸಾಧಿಸುವ ಮೂಲಕ ದ್ವಿತೀಯ ಸ್ಥಾನ ಪಡೆದುಕೊಂಡಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ನೀರು ಇಲ್ಲದೆ ಸೊರಗುತ್ತಿರುವ ತಾಲೂಕಾ ಕಚೇರಿಯ ಉದ್ಯಾನವನ

> “ತಾಲೂಕ ಕಚೇರಿಗೆ ಆಗಮಿಸುವ ಸಾರ್ವಜನಿಕರಿಗೆ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅನೇಕ ಸೌಕರ್ಯಗಳನ್ನು ಒದಗಿಸುವುದು ಮುಖ್ಯವಾಗಿದೆ. ಉದ್ಯಾನವನ ಸಮರ್ಪಕ ನಿರ್ವಹಣೆ ಮಾಡಿದ್ದಲ್ಲಿ ರಣಬಿಸಿಲಿನಲ್ಲಿ ಬಂದಂತಹವರಿಗೆ ವಿಶ್ರಾಂತಿ ಪಡೆಯಲು ಅನುಕೂಲವಾಗುತ್ತದೆ.
>
> **ಶಿವರುದ್ರಯ್ಯ ಹಿರೇಮಠ, ನಿಕಟ ಪೂರ್ವ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು.**

> “ಉದ್ಯಾನವನಕ್ಕೆ ಸ್ಥಳೀಯ ಪುರಸಭೆಯಿಂದ ನೀರಿನ ಸರಬರಾಜು ಕೂಡ ಮಾಡಲಾಗಿದ್ದು, ಡ್ರಿಪ್ ಮೂಲಕ ನೀರು ಹರಿಸಲಾಗುತ್ತಿದ್ದು. ಹಂದಿಗಳ ಉಪಟಳದಿಂದ ಪೈಪ್ ಕಟ್ ಆಗಿ ಸಮಸ್ಯೆ ಆಗುತ್ತಿದೆ. ಇಲ್ಲಿನ ಹಂದಿಗಳ ಸ್ಥಳಾಂತರಕ್ಕೆ ಪುರಸಭೆ ಮುಖ್ಯಾಧಿಕಾರಿಗಳ ಗಮನಕ್ಕೆ ತರಲಾಗಿದ್ದು. ನೀರು ಸರಬರಾಜಿಗೆ ಕೂಡಲೇ ಮುಂದಾಗುವೆ. ವಾಯ್.
>
> **ಎಸ್ ಸೋಮನಕಟ್ಟಿ, ತಾಲೂಕ ದಂಡಾಧಿಕಾರಿಗಳು.**

> “ಹಂದಿಗಳ ಮಾಲೀಕರ ಸಭೆ ಕರೆದಿರುವೆ. ಕೂಡಲೇ ಹಂದಿಗಳ ಸ್ಥಳಾಂತರಕ್ಕೆ ಮುಂದಾಗುವೆ.
>
> **ವಿದ್ಯಾಧರ ಎಸ್ ಕಲಾದಗಿ ಮುಖ್ಯಾಧಿಕಾರಿಗಳು ಪುರಸಭೆ.**

> “ತಾಲೂಕ ಆಡಳಿತದ ಕಚೇರಿ ಆವರಣದಲ್ಲಿ ಕುಡಿಯುವ ನೀರು ಒದಗಿಸುವುದು. ಈಗಾಗಲೇ ನಿರ್ಮಾಣವಾಗಿರುವ ಶೌಚಾಲಯದ ನಿರ್ವಹಣೆ,, ಆವರಣದಲ್ಲಿ ಸ್ವಚ್ಛತೆ ಸೇರಿದಂತೆ ಅಗತ್ಯ ಸೌಕರ್ಯಗಳನ್ನು ತುರ್ತಾಗಿ ಒದಗಿಸಬೇಕಾಗಿದೆ.
>
> **ವಿನೂತ. ಬಿ ಕಲ್ಲೂರ ದೇಸಾಯಿ, ಮುಖ್ಯಸ್ಥರು, ವಿವೇಕ್ ಬ್ರಿಗೇಡ್ ಸಂಸ್ಥೆ.**

- **ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ**

ಪಟ್ಟಣದ ಮಿನಿ ವಿಧಾನಸೌಧದಲ್ಲಿರುವ ವಿಶಾಲವಾದ ಉದ್ಯಾನವನದಲ್ಲಿರುವ ಗಿಡಗಳು ನೀರಿಲ್ಲದೆ ಸೊರಗಿ ನಿಂತಿವೆ. ಉದ್ಯಾನವನದಲ್ಲಿ ಸಾಕಷ್ಟು ಗಿಡಗಳು ದೊಡ್ಡದಾಗಿ ಬಂದವರಿಗೆಲ್ಲ ತಂಪು ವಾತಾವರಣ ನೀಡುತ್ತವೆ. ಆದರೆ ಬೇಸಿಗೆ ದಿನವಾದ ಈ ದಿನಗಳಲ್ಲಿ ಸರಿಯಾಗಿ ನೀರು ನಿರ್ವಹಣೆ ಇಲ್ಲದೆ ಗಿಡಗಳು ಒಣಗಿ ಹಸಿರು ಮಾಯವಾಗಿದೆ. ಉದ್ಯಾನವನ ತುಂಬೆಲ್ಲಾ ಬಿದ್ದಿರುವ ಕಸದ ನಿರ್ವಹಣೆ ಕೂಡ ಆಗಿಲ್ಲ. ಇಲ್ಲಿ ತಾಲೂಕಾ ದಂಡಾ ಧಿಕಾರಿ, ಉಪ ನೊಂದಣಿ ಅಧಿಕಾರಿ, ಭೂ ದಾಖಲೆಗಳ ಅಧಿಕಾರಿ, ರೇಷ್ಮೆ ವಿಸ್ತರಣೆ ಅಧಿಕಾರಿ ಸೇರಿದಂತೆ ಅನೇಕ ಕಚೇರಿಗಳಿಗೆ ಅಖಂಡ ತಾಲೂಕುಗಳಿಂದ ನಿತ್ಯ ಸಾರ್ವಜನಿಕರು ಆಗಮಿಸುವರು. ಇಲ್ಲಿಗೆ ಕೆಲಸಕ್ಕೆಂದು ಬಂದವರಿಗೆಲ್ಲ ತಂಪಾದ ವಾತಾವರಣ ನಿರ್ಮಿಸಲು ಈ ಕೂಡಲೇ ತಹಶೀಲ್ದಾರ್ ಸಾಹೇಬರು ಉದ್ಯಾನವನದ ಸೂಕ್ತ ನಿರ್ವಹಣೆಗೆ ಮುಂದಾಗಬೇಕಾಗಿದೆ ಎಂಬುದೇ ಸಾರ್ವಜನಿಕರ ಆಗ್ರಹವಾಗಿದೆ. ಉದ್ಯಾನವನದಲ್ಲಿ ಮಳೆ ಗಾಳಿಗೆ ಗಿಡಗಳು ಮುರಿದು ಹೋಗಿದ್ದು, ಇಲ್ಲಿ ಇಡಲಾಗಿರುವ ಅನೇಕ ಬೇಡವಾದ ವಸ್ತುಗಳನ್ನು ತೆರವುಗೊಳಿಸಿದರೆ ಉದ್ಯಾನವನಕ್ಕೆ ಮೆರುಗು ಬರಲು ಸಾಧ್ಯ ಎನ್ನುತ್ತಾರೆ ಸಾರ್ವಜನಿಕರು.

ನೇಹಾ ಕಂಕಣವಾಡಿ ಜಿಲ್ಲೆಗೆ ಪ್ರಥಮ

- **ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ**

ಪ್ರಸಕ್ತ 2026ನೇ ಸಾಲಿನ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10ನೇ ತರಗತಿ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ನಗರದ ಬಸವೇಶ್ವರ ಇಂಟರ್ ನ್ಯಾಷನಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ನೇಹಾ ಕಂಕಣವಾಡಿ ಶೇ.98.40 ರಷ್ಟು ಅಂಕ ಪಡೆಯುವ ಮೂಲಕ ಬಾಗಲಕೋಟೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ ಹಾಗೂ ಶಾಲೆಯ ಪ್ರಾಚಾರ್ಯರು ನೇಹಾ ಕಂಕಣವಾಡಿ ಅವಳನ್ನು ಅಭಿನಂದಿಸಿದ್ದಾರೆ.

ನೇಹಾ ಇಂಗ್ಲೀಷ ವಿಷಯಕ್ಕೆ 96, ಕನ್ನಡಕ್ಕೆ 99, ಗಣಿತಕ್ಕೆ 97, ವಿಜ್ಞಾನಕ್ಕೆ 99, ಸಮಾಜ ವಿಜ್ಞಾನ ವಿಷಯಕ್ಕೆ 97 ಸೇರಿ ಒಟ್ಟು 492 ಅಂಕ ಪಡೆದು (ಶೇ.98.40) ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ನೇಹಾ ಕಂಕಣವಾಡಿ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಅವರ ಪುತ್ರಿ.

ಏ.18 ರಂದು ಜನ ಸಂಪರ್ಕ ಸಭೆ

ಮಲ್ಲಮ್ಮ ನುಡಿ ವಾರ್ತೆ, ಬೀದರ

ಜೇಸ್ಕಾಂ ಹುಮನಾಬಾದ ಕಾರ್ಯ ಮತ್ತು ಪಾಲನೆ ವಿಭಾಗ ವ್ಯಾಪ್ತಿಯ ಹುಮನಾಬಾದ, ಮನ್ನಾಏಖೇಳ್ಳಿ ಹಾಗೂ ಬಸವಕಲ್ಯಾಣ, ಉಪ ವಿಭಾಗಗಳಲ್ಲಿ ದಿನಾಂಕ: 18-04-2026 ರಂದು ಬೆಳಿಗ್ಗೆ 11 ರಿಂದ 1 ಗಂಟೆಯವರೆಗೆ ಹುಮನಾಬಾದ ಉಪ ವಿಭಾಗದ ಹಳ್ಳಿಖೇಡ (ಬಿ) ಶಾಖೆ ಕಛೇರಿಯಲ್ಲಿ, ಮನ್ನಾಏಖೇಳ್ಳಿ ಉಪ ವಿಭಾಗದ ಚಿಟಗುಪ್ಪಾ ಶಾಖೆ ಕಛೇರಿಯಲ್ಲಿ ಹಾಗೂ ಬಸವಕಲ್ಯಾಣ ಉಪ ವಿಭಾಗದ ಬೋಸ್ಗಾ ಶಾಖೆ ಕಛೇರಿಯಲ್ಲಿ ಜನಸಂಪರ್ಕ ಸಭೆಗಳನ್ನು ಆಯೋಜಿಸಲಾಗಿದೆ.

ಆದಕಾರಣ ಸಾರ್ವಜನಿಕರು ಹಾಗೂ ಗುವಿಸಕಂನಿ ಗ್ರಾಹಕರು ಸದರಿ ಸಭೆಯಲ್ಲಿ ಉಪಸ್ಥಿತರಿದ್ದು, ಕುಂದು ಕೊರತೆಯ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಹುಮನಾಬಾದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆ: ಸನ್ಮಾನ

- **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯ ವಸತಿ ಕಾಲೇಜು ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಪಂ ಸಿಇಓ ಶಶಿಧರ ಕುರೇರ ಸನ್ಮಾನಿಸಿದರು.

ವಿಜ್ಞಾನ ವಿಭಾಗದಲ್ಲಿ ಬಾಗಲಕೋಟೆ ತಾಲೂಕಿನಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ (ಬಾಲಕರ ವಿಭಾಗದಲ್ಲಿ) ಭೀಮಪ್ಪ ಬಿರ್ಲಿ 600ಕ್ಕೆ 590 ಅಂಕ (ಶೇ.98.33) ಪಡೆದರೆ, ಹರೀಶ ಬಾಲರಡ್ಡಿ 586 ಅಂಕ (ಶೇ.97.17), ಸಂಗಮೇಶ ಪಟ್ಟಣದ 580 ಅಂಕ (ಶೇ.96.67) ಪಡೆದುಕೊಂಡಿದ್ದಾರೆ.

ಕಲಾ ವಿಭಾಗದಲ್ಲಿ ದೇವಮ್ಮ ಯಡಹಳ್ಳಿ 600ಕ್ಕೆ 594 ಅಂಕ (ಶೇ.99), ಶ್ವೇತಾ ಹೊರಕೇರಿ 579 ಅಂಕ (ಶೇ.96.50) ಹಾಗೂ ವಾಣಿಜ್ಯ ವಿಭಾಗದಲ್ಲಿ ಸಂಗೀತಾ ಗಾಡದಾರ 600ಕ್ಕೆ 593 ಅಂಕ (ಶೇ.98.83), ಲಕ್ಷ್ಮೀ ಭೂಮಾರ 587ಅಂಕ (ಶೇ.97.83), ತೇಜಶ್ವಿನಿ ದೊರೆಗೊಳ 577 ಅಂಕ (ಶೇ.96.17) ಅಂಕ ಪಡೆದುಕೊಂಡಿದ್ದು ಇವರೆಲ್ಲರನ್ನೂ ಸನ್ಮಾನಿಸಲಾಯಿತು.

ನಂತರ ಮಾತನಾಡಿದ ಜಿಲ್ಲಾಧಿಕಾರಿ ಸಂಗಪ್ಪ, ವಿದ್ಯಾರ್ಥಿಗಳು ಸಾಧಿಸಿರುವ ಉತ್ತಮ ಫಲಿತಾಂಶ ಜಿಲ್ಲೆಗೆ ಹೆಮ್ಮೆಯ ವಿಷಯ. ಕಠಿಣ ಪರಿಶ್ರಮ ಹಾಗೂ ಶಿಸ್ತುಬದ್ಧ ಅಧ್ಯಯನದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ತಿಳಿಸಿದರು.

ಜಿಪಂ ಸಿಇಓ ಶಶಿಧರ ಕುರೇರ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಸರ್ಕಾರ ನೀಡುತ್ತಿರುವ ಸೌಲಭ್ಯಗಳ ಸದುಪಯೋಗ ಪಡಿಸಿಕೊಂಡು ಇನ್ನಷ್ಟು ಉತ್ತಮ ಸಾಧನೆ ಮಾಡುವಂತೆ ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ, ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಡಿಯುವ ನೀರು, ಮೇವು ಪೂರೈಕೆಗೆ ಮುಂಜಾಗ್ರತಾ ಕ್ರಮ: ಡಿಸಿ

- **ಮಲ್ಲಮ್ಮ ನುಡಿ ವಾರ್ತೆ,ಬಾಗಲಕೋಟೆ**

ಬೇಸಿಗೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವು ಪೂರೈಕೆಯಲ್ಲಿ ಅಭಾವ ಉಂಟಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕುಡಿಯುವ ನೀರು ಹಾಗೂ ಮೇವು ಪೂರೈಕೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಲಭ್ಯತೆ ಪರಿಶೀಲಿಸಿ, ಮುಂದಿನ ಎಷ್ಟು ದಿನಗಳ ವರೆಗೆ ನೀರು ಪೂರೈಕೆ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ಅರಿತು ಮುಂಜಾಗ್ರತಾ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರ ಪ್ರದೇಶ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಲಭ್ಯತೆ ಬಗ್ಗೆ ಮಾಹಿತಿ ಪಡೆದುಕೊಂಡ ಜಿಲ್ಲಾಧಿಕಾರಿಗಳು ಬಾಗಲಕೋಟೆ, ರಬಕವಿ-ಬನಹಟ್ಟಿ, ಜಮಖಂಡಿ, ಮುಧೋಳ ನಗರಸಭೆ, ತೇರದಾಳ, ಮಹಾಲಿಂಗಪೂರ ಪುರಸಭೆ, ಕೆರೂರ, ಬೀಳಗಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಮೇ 31 ವರೆಗೆ ಹಾಗೂ ಇಲಕಲ್ಲ ಪುರಸಭೆ, ಬಾದಾಮಿ, ಗುಳೇದಗುಡ್ಡ, ಹುನಗುಂದ ಪುರಸಭೆ, ಕಮತಗಿ, ಅಮೀನಗಡ, ಬೆಳಗಲಿ, ಲೋಕಾಪೂರ, ಶಿರೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಜೂನ್ 30 ವರೆಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಸಮಸ್ಯೆ ಇರುವುದಿಲ್ಲವೆಂದು ಸಂಬಂಧಿಸಿದ ಅಧಿಕಾರಿಗಳು ಸಭೆಗೆ ತಿಳಿಸಿದರು.

ಜಿಪಂ ಸಿಇಓ ಶಶಿಧರ ಕುರೇರ, ಜಿಲ್ಲೆಯಲ್ಲಿ 196 ಗ್ರಾಮ ಪಂಚಾಯತಿಗಳಿದ್ದು, 597 ಹಳ್ಳಿ ಹಾಗೂ 1006 ಜನವಸತಿಗಳಿವೆ. 39 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಮೂಲಕ ಒಟ್ಟು 402 ಹಳ್ಳಿಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಘಟಪ್ರಭಾ ನದಿ ಅವಲಂಭಿತ 12, ಮಲಪ್ರಭಾ ನದಿ ಅವಲಂಬಿತ 4 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿವೆ. ಈಗಾಗಲೇ ಎಪ್ರೀಲ್ 2 ರಂದು ಘಟಪ್ರಭಾ ನದಿಗೆ 1.10 ಟಿಎಂಸಿ ನೀರನ್ನು ಬಿಡುಗಡೆ ಮಾಡಿದ್ದು, ಆನದಿನ್ನಿ ಬ್ಯಾರೇಜಗೆ ನೀರು ತಲುಪಿದ್ದು, ಯಾವುದೇ ಸಮಸ್ಯೆ ಇರುವದಿಲ್ಲವೆಂದು ತಿಳಿಸಿದರು.

ಎಪ್ರೀಲ್ 10 ರಂದು ಮಲಪ್ರಭಾ ನದಿಗೆ 1 ಟಿಎಂಸಿ ನೀರನ್ನು ಬಿಡುಗಡೆಗೊಳಿಸಿದ್ದು, ಎಪ್ರೀಲ್ 15 ರಂದು ಶಿವಯೋಗ ಮಂದಿರದ ಬ್ಯಾರೇಜಗೆ ತಲುಪಿದ್ದು, ಇನ್ನು 15 ಬ್ಯಾರೇಜ ದಾಟಿ ಹಡಗಲಿ ಬ್ಯಾರೇಜಗೆ ತಲುಪಲು ಬಾಕಿ ಇರುತ್ತದೆ. ನೀರು ಬಿಡುಗಡೆಯಿಂದ ಎಲ್ಲ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಚಾಲ್ತಿಯಲ್ಲಿರುತ್ತವೆ. ಚಿಕ್ಕಪಡಸಲಗಿ ಬ್ಯಾರೇಜ ಅಡಿಯಲ್ಲಿ 3 ಎಂವಿಎಸ್ ಯೋಜನೆಗಳಿದ್ದು, 27 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇರುವದಿಲ್ಲ. ಸದಸ್ಯದ ಪರಿಸ್ಥಿತಿಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜನಿಂದ ಎಪ್ರೀಲ್ ಅಂತ್ಯದವರೆಗೆ ಮಾತ್ರ ನೀರು ಸರಬರಾಜು ಮಾಡಬಹುದಾಗಿದ್ದು, ಮೇ ಮಾಹೆಯಲ್ಲಿ ಹಿಪ್ಪರಗಿ ಬ್ಯಾರೇಜದಿಂದ 0.5 ಟಿಎಂಸಿ ನೀರು ಬಿಡುಗಡೆಗೊಳಿಸಿದಲ್ಲಿ 27 ಗ್ರಾಮಗಳಿಗೆ ಜೂನ್ ಅಂತ್ಯವರೆಗೆ ನೀರು ಸರಬರಾಜು ಮಾಡಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಎಪ್ರೀಲ್ ತಿಂಗಳಲ್ಲಿ 52 ಗ್ರಾಮ ಹಾಗೂ ಮೇ ತಿಂಗಳಲ್ಲಿ 62 ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಬಹುದಾಗಿದ್ದು, ತೊಂದರೆ ನಿವಾರಣೆಗೆ ಈಗಾಗಲೇ 111 ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಲಾಗಿದೆ. ಸದ್ಯ ಗುಳೇದಗುಡ್ಡ ತಾಲೂಕಿನ ಚಿಮ್ಮಲಗಿ, ಇಲಕಲ್ಲ ತಾಲೂಕಿನ ಚಿಕ್ಕಕೊಡಗಲಿ ಗ್ರಾಮದಲ್ಲಿ ತೊಂದರೆಯಾಗಿದ್ದು, ಖಾಸಗಿ ಕೊಳವೆಬಾವಿ ಮೂಲಕ ಬಾಡಿಗೆ ಆಧಾರದ ಮೇಲೆ ನೀರು ಪೂರೈಸಲಾಗುತ್ತಿದೆ. ಪ್ರಸಕ್ತ ಸಾಲಿನ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳಿಗೆ ಮುಂಜಾಗ್ರತೆ ಕ್ರಮವಾಗಿ 206 ಕಾಮಗಾರಿಗಳಿಗೆ 611.89 ಲಕ್ಷಗಳಿಗೆ ಕ್ರೀಯಾ ಯೋಜನೆ ತಯಾರಿಸಲಾಗಿದೆ ಎಂದು ಕುರೇರ್ ತಿಳಿಸಿದರು.

ಜಾನುವಾರುಗಳಿಗೆ ಅಗತ್ಯವಾದ ಮೇವು ಕೊರತೆ ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಪಶು ಸಂಗೋಪನಾ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಶು ಆಹಾರ ದಾಸ್ತಾನುಗಳನ್ನು ಸಿದ್ದವಾಗಿಡಲು ಹಾಗೂ ಅಗತ್ಯವಿರುವ ಕಡೆಗಳಿಗೆ ಮೇವು ಬ್ಯಾಂಕ್ ತೆರೆಯಲು ಕ್ರಮವಹಿಸಲು ತಿಳಿಸಲಾಯಿತು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ, ಪಶು ಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಎಸ್.ಎಚ್.ಕರಡಿಗುಡ್ಡ, ಗ್ರಾಮೀಣ ಕುಡಿಯುವ ನೀರಿನ ಯೋಜನೆ ಅಧಿಕಾರಿ ಆಕಾಶ ವಂದೆ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಉಚಿತ ವಸತಿ ಶಿಕ್ಷಣ: ಯಲವಟ್ಟಿ ಶಾಲೆಯಲ್ಲಿ ಪ್ರವೇಶ ಪ್ರಾರಂಭ

- **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ**

ಶಿವಮೊಗ್ಗ: ಜಿಲ್ಲೆಯ ಯಲವಟ್ಟಿ ಹಸೂಡಿ ಅಂಚೆಯಲ್ಲಿರುವ ಶ್ರೀ ಜಗದ್ಗುರು ಸಚ್ಚಿದಾನಂದ ಗ್ರಾಮೀಣ ವಸತಿ ಪ್ರೌಢ ಶಾಲೆಯಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ 8, 9 ಮತ್ತು 10ನೇ ತರಗತಿಗಳ ಪ್ರವೇಶ ಪ್ರಾರಂಭವಾಗಿದೆ.

ಈ ಕುರಿತು ಮಾಹಿತಿ ನೀಡಿದ ಸಂಚಾಲಕ ಸಂಗಪ್ಪ ಪ್ಯಾಟಿ ಅವರು, ಶಾಲೆಯಲ್ಲಿ ಯಾವುದೇ ರೀತಿಯ ಡೋನೆಷನ್ ಅಥವಾ ಶುಲ್ಕವಿಲ್ಲದೆ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗುತ್ತಿದ್ದು,

“ಮೊದಲು ಬಂದವರಿಗೆ ಆದ್ಯತೆ” ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಪರಮಪೂಜ್ಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳ ಕೃಪಾಶೀರ್ವಾದ ಹಾಗೂ ಆಡಳಿತ ಮಂಡಳಿಯ ಮಾರ್ಗದರ್ಶನದಲ್ಲಿ ಶಾಲೆ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಇದೇ ವೇಳೆ, ಈ ಶಾಲೆಯಲ್ಲಿ ಓದುತ್ತಿರುವ ಪ್ರತಿಯೊಂದು ವಿದ್ಯಾರ್ಥಿಗೂ ಉಚಿತ ವಸತಿ ಸೌಲಭ್ಯ ಒದಗಿಸಲಾಗುತ್ತಿದ್ದು, ಅನುಭವಸಂಪನ್ನ ಹಾಗೂ ನಿಪುಣ ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ ಎಂದು ತಿಳಿಸಿದರು.

ಆಸಕ್ತ ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಈ ಅವಕಾಶವನ್ನು ಬಳಸಿಕೊಳ್ಳುವಂತೆ ಮನವಿ ಮಾಡಲಾಗಿದೆ.

ಕಳುವಾದ ವಸ್ತುಗಳು ವಾರಸುದಾರರಿಗೆ ವಿತರಣೆ



ಚಿಟಗುಪ್ಪ: ಹುಮನಾಬಾದ ಪೊಲೀಸ್ ಉಪ ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಕಳ್ಳತನ, ದರೋಡೆ ಸೇರಿದಂತೆ ಸುಮಾರು 20 ಪ್ರಕರಣಗಳು ವರದಿಯಾಗಿದ್ದವು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಹಾಗೂ ಡಿವೈಎಸ್ಪಿ ಮಡೋಳಪ್ಪ ಇವರ ಮಾರ್ಗದರ್ಶನ ಮೇರೆಗೆ ಹುಮನಾಬಾದ ಸಿಪಿಐ ಸಂತೋಷ, ಚಿಟಗುಪ್ಪ ಸಿಪಿಐ ಶ್ರೀನಿವಾಸ ಅಲ್ಲಾಪುರೇ, ಮಂಠಾಳ ಸಿಪಿಐ ಅಮೂಲ ಕಾಳೆ, ಬಸವಕಲ್ಯಾಣ ಸಿಪಿಐ ಅಲಿಸಾಬ್ ಇವರುಗಳ ನೇತೃತ್ವದಲ್ಲಿ ಅಪರಾಧ ವಿಭಾಗ, ಕಾನೂನು ಸುವ್ಯವಸ್ಥೆ ಪೊಲೀಸ್ ಠಾಣೆಯ ಪಿಎಸ್ಐ ರವರು 20 ಪ್ರಕರಣಗಳು ಪತ್ತೆ ಹಚ್ಚಿ ಒಟ್ಟು 36,05,300. ರೂಪಾಯಿ ಸ್ವತ್ತನ್ನು ಜಪ್ತಿ ಮಾಡಲಾಗಿದೆ. 8 ದ್ವಿಚಕ್ರ ವಾಹನ, 1ಮಹಿಂದ್ರ ಗೂಡ್ಸ್, ಆಟೋ ರಿಕ್ಷಾ, ಒಟ್ಟು 8,70,000 ಬೆಲೆ ಬಾಳುವ ವಾಹನಗಳು ಜಪ್ತಿ ಮಾಡಲಾಗಿದೆ. ಕಳುವುಯಾದ ಪ್ರಕರಣಗಳ ಸ್ವತ್ತುಗಳು ವಾರಸುದಾರರಿಗೆ ವಿತರಿಸಲಾಯಿತು. ಇದೇ ವೇಳೆ ಸಾರ್ವಜನಿಕರಿಗೆ ಸುಮಾರು 400 ಹೆಲ್ಮೆಟ್ ಉಚಿತವಾಗಿ ವಿತರಿಸಿದರು.

ಸಮ ಸಮಾಜ ನಿರ್ಮಾಣ ಅಂಬೇಡ್ಕರ್ ಪಾತ್ರ ಮಹತ್ವ

ಹುಣಸೂರು: ದೇಶದಲ್ಲಿ ಅಸಮಾನತೆಯಿಂದ ಕೂಡಿರುವ ಸಮಾಜವನ್ನು ಸಮ ಸಮಾಜ ನಿರ್ಮಾಣ ಮಾಡುವಲ್ಲಿ ಅಂಬೇಡ್ಕರ್ ಅವರ ಪಾತ್ರ ಮಹತ್ವ ದಾಗಿದೆ. ಎಂದು ಸಂಪನ್ಮೂಲ ವ್ಯಕ್ತಿಗಳಾದ ಪ್ರೊಫೆಸರ್ ಪುರುಷೋತ್ತಮ್. ಡಿ . ಹೇಳಿದರು.

ತಾಲೂಕಿನ ಹನಗೋಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಮಹಾ ಮಾನವತವಾದಿ ಸಂವಿಧಾನ ಶಿಲ್ಪಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ರವರ135 ನೇ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು. ಬಾಬಾ ಸಾಹೇಬ್ ಅಂಬೇಡ್ಕರ್. ಅವರ ಹೋರಾಟ ಮತ್ತು ಛಲ ಬಿಡದ ಹೋರಾಟ ಫಲ ಭಾರತ ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನವಾಗಿ ಬದುಕುವ ವಿದ್ಯಾಭ್ಯಾಸವನ್ನು ಪಡೆಯುವ ಸಾಮಾಜಿಕ ರಾಜಕೀಯ ಆರ್ಥಿಕವಾಗಿ ಸದೃಢವಾಗಲು ವ್ಯಕ್ತಿಗತವಾಗಿ ಬೆಳೆಯಲು ಸಂವಿಧಾನದಲ್ಲಿ ಅವಕಾಶ ಮಾಡಿದ್ದಾರೆ ಹಾಗೂ ದೇಶದ ವೈದಿಕ ಪರಂಪರೆ ಇಂದ ಜೀವ ವಿರೋಧಿ ವ್ಯವಸ್ಥೆಯನ್ನು ಖಂಡಿಸುತ್ತಾ ಮನುಷ್ಯನಾಗಿ ಬದುಕಬೇಕು ಮನುಷ್ಯ ಪ್ರಾಣಿಗಳಂತೆ ಬದುಕಬಾರದು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ. ಡಿ. ರವಿ ಅವರು ಮಾತನಾಡಿ, ಈ ಸಮಾಜದಲ್ಲಿ ಅಸ್ಪೃಶ್ಯತೆ ಜೀವಂತವಾಗಿ ಇದೆ. ಇದನ್ನ ತೊಳಿಯಬೇಕು ಸರ್ವಧರ್ಮಗಳಿಗೂ ಮಾನವ ಧರ್ಮವೇ ಶ್ರೇಷ್ಠ ಮನುಷ್ಯ ಧರ್ಮದಲ್ಲಿ ಅಸಮಾನತೆ ಇರಬಾರದು. ಈ ಮೌಢ್ಯತೆಯಿಂದ ಹೊರಬರದ ಹೊರತು ಸಮಾಜ ದೇಶ ವ್ಯಕ್ತಿ ಉದ್ದಾರವಾಗುವುದಿಲ್ಲ ಶಿಕ್ಷಣದಿಂದಲೇ ನಮ್ಮ ಏಳಿಗೆ ಸಾಧ್ಯ ಎಂಬ ತಮ್ಮ ಅನುಭವವನ್ನು ಹೇಳಿದರು.

ಸಿಬಿಎಸ್ಇ ಪರೀಕ್ಷೆ: ಚನ್ನಬಸವೇಶ್ವರ ಗುರುಕುಲ

ಪಬ್ಲಿಕ್ ಶಾಲೆಗೆ 100ರಷ್ಟು ಫಲಿತಾಂಶ



ಪರಶುರಾಮ ಕರಣಂ ಭಾಲ್ಕಿ: ತಾಲ್ಲೂಕಿನ ಚನ್ನಬಸವೇಶ್ವರ ಗುರುಕುಲ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಪ್ರೀತಿ ಸಂತೋಷ ಜಾಧವ ಸಿಬಿಎಸ್ಇ ಪರೀಕ್ಷೆಯಲ್ಲಿ 458 (92%) ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾಳೆ ಎಂದು ಪ್ರಾಚಾರ್ಯ ಎನ್,ರಾಜು ತಿಳಿಸಿದ್ದಾರೆ.

ಪರೀಕ್ಷೆಗೆ ಹಾಜರಾದ 128 ವಿದ್ಯಾರ್ಥಿಗಳಲ್ಲಿ 57 ವಿದ್ಯಾರ್ಥಿಗಳು ಅಗ್ರ ಶ್ರೇಣಿಯಲ್ಲಿ, 46 ಪ್ರಥಮ ದರ್ಜೆ, 25 ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದು, ಶಾಲೆಯ ಫಲಿತಾಂಶ 100 ರಷ್ಟು ಆಗಿದೆ.

ಸಾಧಕ ವಿದ್ಯಾರ್ಥಿಗಳ ವಿವರ: ಸುಮಿತ್ ಶಿವಕುಮಾರ 91.40, ವಿರೇಂದ್ರ ಪಾಟೀಲ 91, ಪವನಕುಮಾರ ಅನಿಲ್‌ಕುಮಾರ 90.80, ಆದರ್ಶ ಜ್ಞಾನೋಬಾ 90.60, ಶ್ರೀಹರಿ ಕಮಲಾಕರ್ 90.40, ಶ್ರೀ ಶ್ರೀಕಾಂತ 90.40, ಭಾಗ್ಯವಂತ ಅಂಕುಶ 90.20, ಸೋಹಮೇಶ ಸುಶೀಲಕುಮಾರ 90, ಪ್ರವೀಣ ಲಿಂಬರಾಜ 89.80, ಅಜಯ ಶಾಂತಕುಮಾರ 89.40, ಶ್ರೀನಿಲ್ ಸಂದೀಪ 88.80, ಸ್ವರ ಜಾಧವ 88.40, ಪದ್ಮಜಾ ಚನ್ನಬಸವ 88.40, ಅಂಜಲಿ ವಿಜಯಕುಮಾರ 88, ವೈಶಾಖ ಬಾಬುರಾವ್ 87.60, ಸಾಕ್ಷಿ ಬಾಹುಸಾಹೇಬ್ 87.60, ಪ್ರಣೀಲ್ ರಾಜಶೇಖರ 87, ಉದಯಕುಮಾರ ಸಂಜೀವಿ 86.80, ಕೃಷ್ಣಾ ಅನಿಲ್‌ಕುಮಾರ 86.40, ಆಯುಷ್ ಶಿವಾನಂದ 85.80, ವೇದಾಂತ ಗುರುಶಾಂತ 85.40, ಬಸವಪ್ರಣವ ಶಂಕರ 85.20 ಸೇರಿದಂತೆ ಒಟ್ಟು 57 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಪಾಸಾಗಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನರೆಡ್ಡಿ, ಪಿಯು ಕಾಲೇಜಿನ ಪ್ರಾಚಾರ್ಯ ಬಸವರಾಜ ಮೊಳಕೀರೆ, ಶೈಕ್ಷಣಿಕ ಸಂಯೋಜಕ ಶಶಿಕುಮಾರ ನಾಗೂರ, ಪ್ರಶಾಂತ ರೆಡ್ಡಿ ಸೇರಿದಂತೆ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

ಪಶ್ಚಿಮಘಟ್ಟಗಳನ್ನು ಭವಿಷ್ಯದ ಜೀವನಾಡಿಯಾಗಿ ನೋಡಬೇಕು

- **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಪ್ರಕೃತಿ, ಪರಿಸರ ಸಂರಕ್ಷಣೆ ಹಾಗೂ ಹಸಿರು ಹೊದಿಕೆ ಹೆಚ್ಚಳದಲ್ಲಿ ಸುಸ್ಥಿರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಪಾತ್ರ ಹಿರಿದಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟದ (ಎಫ್.ಕೆ.ಸಿಸಿಐ) ಆಯೋಜಿಸಿದ್ದ ಜಾಗತಿಕ ಸುಸ್ಥಿರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಶೃಂಗಸಭೆ 2026ರ ಪೂರ್ವಭಾವಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ನಾವಿಂದು, ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆಯ ಪರಿಣಾಮಗಳ ಕಾಲಘಟ್ಟದಲ್ಲಿ ನಿಂತಿದ್ದು, ಈ ಸಂದರ್ಭದಲ್ಲಿ ಸುಸ್ಥಿರ ಅಭಿವೃದ್ಧಿ, ಹವಾಮಾನ ಚೇತರಿಕೆ ಮತ್ತು ಸಮಗ್ರ ಪ್ರಗತಿಯ ಕಾರ್ಯತಂತ್ರಕ್ಕೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಾಲಕಶಕ್ತಿಯಾಗಿದೆ ಎಂದರು.

ಕರ್ನಾಟಕವು ಈ ಪಯಣದಲ್ಲಿ ವಿಶಿಷ್ಟ ಸ್ಥಾನದಲ್ಲಿದೆ. ಜಾಗತಿಕ ಜೀವವೈವಿಧ್ಯತೆಯ ಅದ್ಭುತ ತಾಣವಾದ ಪಶ್ಚಿಮ ಘಟ್ಟಗಳನ್ನು ಹೊಂದಿದ್ದು, ಹಲವು ಬಗೆಯ ವಿಶಿಷ್ಟ ಸಸ್ಯ ಸಂಕುಲ, ಪ್ರಾಣಿ ಸಂಕುಲ, ಪಕ್ಷಿ ಸಂಕುಲ ಹಾಗೂ ಕೀಟ ಸಂಕುಲಗಳ ತಾಣವಾದ ಈ ಸಮೃದ್ಧ ಕಾನನವನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.

FKCCI GLOBAL CSR SUSTAINABILITY SUMMIT

ಪಶ್ಚಿಮ ಘಟ್ಟ ಭವಿಷ್ಯದ ಪೀಳಿಗೆಯ ಜೀವನಾಡಿ: ಹಲವು ಜೀವನದಿಗಳ ಮೂಲವೇ ಪಶ್ಚಿಮಘಟ್ಟವಾಗಿದ್ದು, ಮಳೆಯ ಮಾರುತಗಳನ್ನು ತಡೆದು ದೇಶಾದ್ಯಂತ ವ್ಯಾಪಕವಾಗಿ ಮಳೆ ಸುರಿಸುವಂತೆ ಮಾಡುವ ಪಶ್ಚಿಮ ಘಟ್ಟಗಳನ್ನು ಉದ್ದಿಮೆದಾರರು ಕೇವಲ ಒಂದು ಸಂಪನ್ಮೂಲವಾಗಿ ನೋಡದೆ, ಭವಿಷ್ಯದ ಪೀಳಿಗೆಯ ಜೀವನಾಡಿಯಾಗಿ ನೋಡಬೇಕು ಎಂದು ಹೇಳಿದರು.

ಹಸಿರು ಹೊದಿಕೆ ಹೆಚ್ಚಳಕ್ಕೆ ಸಿಎಸ್ಆರ್: ಬೆಂಗಳೂರು ನಗರ ಒಂದು ಕಾಲದಲ್ಲಿ ನಿವೃತ್ತರ ಸ್ವರ್ಗ, ಹವಾನಿಯಂತ್ರಿತ ನಗರ ಎಂಬ ಖ್ಯಾತಿ ಪಡೆದಿತ್ತು. ಇಂದು ಬೆಂಗಳೂರು ಕೂಡ ಕಾಂಕ್ರೀಟ್ ಕಾಡಾಗುತ್ತಿದ್ದು, ತಾಪಮಾನದ ಏರಿಕೆಯ ಅನುಭವ ಆಗುತ್ತಿದೆ. ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದು, ಧೂಳು, ಹೊಗೆಯಿಂದಾಗಿ ವಾಯುಗುಣಮಟ್ಟವೂ ಕುಸಿಯುತ್ತಿದೆ. ಈ ನಿಟ್ಟಿನಲ್ಲಿ ಬೆಂಗಳೂರು ನಗರ ದೆಹಲಿಯಂತೆ ಮತ್ತೊಂದು ಗ್ಯಾಸ್ ಚೇಂಬರ್ ಆಗದಂತೆ ತಡೆಯಲು ಈಗಿನಿಂದಲೇ ಕ್ರಮ ವಹಿಸುವುದು ಅತ್ಯಗತ್ಯ ಎಂದರು.

ಬೆಂಗಳೂರಿನಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್ ಬಳಿಕ ಸರಿ ಸುಮಾರು ಶತಮಾನದ ತರುವಾಯ 153 ಎಕರೆ ವಿಶಾಲ ಪ್ರದೇಶದಲ್ಲಿ ಬೃಹತ್ ಜೈವಿಕ ಉದ್ಯಾನ ನಿರ್ಮಿಸಲು ತೀರ್ಮಾನಿಸಲಾಗಿದ್ದು, ಬೆಂಗಳೂರು ಉತ್ತರ ತಾಲೂಕು ಯಲಹಂಕ ಬಳಿಯ ಮಾದಪ್ಪನಹಳ್ಳಿಯಲ್ಲಿ ವಿಶ್ವಗುರು ಬಸವಣ್ಣ ಬೃಹತ್ ಜೈವಿಕ ಉದ್ಯಾನ ಅಭಿವೃದ್ಧಿ ಪಡಿಸಲಾಗುತ್ತಿದೆ. ಇದಕ್ಕಾಗಿ 50 ಕೋಟಿ ರೂ. ಬಿಡುಗಡೆಯಾಗಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ. ಬೆಂಗಳೂರು ನಗರದಲ್ಲಿ ಇಂತಹ ಒಂದು ಬೃಹತ್ ಉದ್ಯಾನ ನಿರ್ಮಾಣಕ್ಕೆ ನೀವೆಲ್ಲರೂ ಕೈಜೋಡಿಸಬೇಕು. ಸಿಎಸ್.ಆರ್. ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಅರಣ್ಯೀಕರಣ, ಕ್ಷೀಣಿಸಿದ ಅರಣ್ಯಗಳ ಮರುಸ್ಥಾಪನೆ ಮತ್ತು ನಗರ ಹಸಿರು ಹೊದಿಕೆ ಹೆಚ್ಚಳದಂತಹ ಉಪಕ್ರಮಗಳಲ್ಲಿ ಕೈಗಾರಿಕೋದ್ಯಮಿಗಳು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮುಂದಿನ ಪೀಳಿಗೆಗೆ ಶುದ್ಧ ಗಾಳಿಯ, ನಿರ್ಮಲ ಪರಿಸರದ, ಸುಗಮ ಜೀವನವನ್ನು ಖಾತ್ರಿ ಪಡಿಸುತ್ತವೆ ಎಂದ ಈಶ್ವರ ಖಂಡ್ರೆ, ಸಾರ್ವಜನಿಕರು, ತಮ್ಮ ಮನೆಯ ಸೌಂದರ್ಯಕ್ಕೆ ಅಡ್ಡಿ ಯಾಗುತ್ತದೆ, ಮನೆಯ ಮುಂದೆ ಎಲೆ ಉದುರುತ್ತದೆ ಎಂದು ಮರ, ಗಿಡ ಕಡಿಯದೆ, ಹಸಿರು ಉಳಿಸಬೇಕು. ಇಲ್ಲವಾದರೆ ಮುಂದೆ ಉಸಿರಾಟಕ್ಕೂ ಕಷ್ಟ ಪಡಬೇಕಾಗುತ್ತದೆ ಎಂದು ಹೇಳಿದರು.

ನಾವು ತಂತ್ರಜ್ಞಾನ ಯುಗದಲ್ಲಿದ್ದೇವೆ. ಉಪಗ್ರಹ ಮೇಲ್ವಿಚಾರಣೆ ಮತ್ತು ಕೃತಕ ಬುದ್ಧಿಮತ್ತೆ ಚಾಲಿತ ಅರಣ್ಯ ನಿರ್ವಹಣೆಯಿಂದ ಹಿಡಿದು ನೀರಿನ ಸಂರಕ್ಷಣೆ ಮತ್ತು ವನ್ಯಜೀವಿಗಳ ಚಲನವಲನದ ಮೇಲಿನ ನಿಗಾಕ್ಕೆ ತಂತ್ರಜ್ಞಾನ ಹೊಸ ಪರಿಹಾರವಾಗಿದೆ. ಈ ಅತ್ಯಾಧುನಿಕ ಸೌಲಭ್ಯ ಅಳವಡಿಸಲು ಉಪಕರಣಗಳ ಖರೀದಿಯಲ್ಲೂ ಸಿಎಸ್ಆರ್ ನಿಧಿ ಉಪಯುಕ್ತವಾಗಿದೆ ಎಂದರು.

ಐದು ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಜಿಲ್ಲೆಗಳಲ್ಲಿ ಮುಂಗಾರು ಕೊರತೆ?

- **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ರಾಜ್ಯದ ಐದು ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಇಂದು ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧ ಸಭಾಂಗಣದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತಾಗಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ಜರುಗಿತು.

ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್ ತಿಂಗಳಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟಂಬರ್ ತಿಂಗಳಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ.

ಕುಡಿಯುವ ನೀರಿಗೆ ತೊಂದರೆಯಾದರೆ ಜಿಲ್ಲಾಧಿಕಾರಿಗಳೇ ಹೊಣೆ: ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಜಿಲ್ಲಾಧಿಕಾರಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚಿಸಿದರು.

ಈ ಬಾರಿ ಎಪ್ರಿಲ್–ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡು ಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು. ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಸೂಚನೆಗಳನ್ನು ನೀಡಬೇಕು ಎಂದರು.

ಕುಡಿಯುವ ನೀರಿಗೆ ಅನುದಾನದ ಕೊರತೆಯಿಲ್ಲ: ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

114 ತಾಲೂಕುಗಳ 598 ಗ್ರಾಮ ಪಂಚಾಯತ್ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ: ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಟ್ಯಾಂಕರ್ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್ವೆಲ್ಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಇದರ ಮೂಲಕ 515 ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು.

ಕುಡಿಯುವ ನೀರಿನ ಸಮಸ್ಯೆ ಎದುರಿಸುವ ಗ್ರಾಮಗಳ ಗುರುತಿಸುವಿಕೆ: ಕಲಬುರಗಿ ಜಿಲ್ಲೆಯ 147 ಗ್ರಾಮ ಪಂಚಾಯತ್, ಬಾಗಲಕೋಟೆ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯ 130, ತುಮಕೂರಿನ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯತ್ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ.

ಲೋಕಾರ್ಪಣೆಗೊಂಡ ಬಯಕೆಯ ಬಳ್ಳಿ ಪುಸ್ತಕ

- **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ಸಾಹಿತ್ಯ ಎಂಬುದು ಕೇವಲ ಪದಗಳ ಜೋಡಣೆವಲ್ಲ ಅದು ಮನಸ್ಸಿನ ನಿಜ ಸ್ವರೂಪವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಅನುಭವಗಳ ಆಳ ಭಾವಗಳ ವ್ಯಾಪ್ತಿ ಜೀವನಗಳ ಸತ್ಯ ಸೌಂದರ್ಯಗಳ ಸಂಗಮವೇ ಕಾವ್ಯವಾಗಿದೆ ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ರಾಹುಲಕುಮಾರ್ ಭಾವಿದೊಡ್ಡಿ ಅವರು ಹೇಳಿದರು.

ನಗರದ ಸರ್ಕಾರಿ ಆರ್ಟ್ಸ್ ಗ್ಯಾಲರಿಯಲ್ಲಿ ಬುಧವಾರ ಹಮ್ಮಿಕೊಂಡ ಬಯಕೆಯ ಬಳ್ಳಿ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಣ್ಣು ಮತ್ತು ಸಸಿ ಹಣ್ಣುಗಳ ಸಂರಕ್ಷಣೆ ಮತ್ತು ಪೋಷಣೆಯಲ್ಲಿ ತೊಡಗಿಸಿಕೊಂಡಿರುವ ಸಂಗೀತ ತೇಲಿ ಅವರು ಸಾಹಿತ್ಯದೊಂದಿಗೆ ಆಸಕ್ತಿ ಹೊಂದಿ ತಮ್ಮ ಚೊಚ್ಚಲ ಪುಸ್ತಕವನ್ನು ರಚಿಸಿರುವ ಇವರ ಸಾಹಿತ್ಯ ಪಯಣ ಯಶಸ್ವಿಯಾಗಲಿ, ಕನ್ನಡ ಸಾಂಸ್ಕೃತಿಕ ವಲಯದಲ್ಲಿ ಇವರು ಗುರುತಿಸಿಕೊಳ್ಳಲಿ ಎಂದು ಅವರು ಹೇಳಿದರು.

ಈ ಸಂದರ್ಭ ಮನು ಪತ್ತಾರ ಮಾತನಾಡಿ, ಬಯಕೆಯ ಬಳ್ಳಿಯಲ್ಲಿ 30 ಹನಿ ಗವನಗಳು ಮಲ್ಲಿಗೆ ಹೂವಿನ ಪರಿಮಳ ಸೂಸುವ ಹಾಗೂ ಸತ್ಯ ಮಿಥ್ಯಗಳ ನಂಬಿಕೆ ಈ ಸಂದರ್ಭದಲ್ಲಿ ಕನಸು ನನಸಾಗುಗಳ ನಡುವೆ ಮೌನವಾಗಿ ಹೆಜ್ಜೆ ಹಾಕುತ್ತಲೆ ಬದುಕಿನ ಸಂದರ್ಶನವನ್ನು ಹೇಳಿಹೊರಟಿರುವ ಸಾಧ್ಯತೆಗಳು ಈ ಹನಿಕವನಗಳಲ್ಲಿ ಗೋಚರಿಸುತ್ತವೆ.

ಕಥೆ ಕಾದಂಬರಿ ಕುಟುಂಬದೊಂದಿಗೆ ಆತರತೆಯಿಂದ ಬೆರೆತುಕೊಳ್ಳಲು ಸಾಧ್ಯ. ಬೆಳಕು ನೀಡುವ ಹೃದಯ ಮನಸ್ಸು ಅರಳಿಸುವ ಕಾರ್ಯ ಕವಿ ಮಾಡುತ್ತಾನೆ. ಜಿಲ್ಲೆಯಲ್ಲಿ ಮಹಿಳೆಯರು ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು, ಕವಿತೆ ಓದುಗರಿಗೆ ಆಳವಾದ ಅನುಭಾವ ಸೃಷ್ಟಿಮಾಡುತ್ತದೆ. ಪ್ರೇರಣೆ ಕವಿತೆ ಶಬ್ದಗಳೆಲ್ಲಾ ಅನುಭವದ ಜೊತೆಗೆ ಅನುಭಾವ ಕಟ್ಟಿಕೊಡುತ್ತದೆ. ಬಯಕೆಯ ಬಳ್ಳಿ ಪುಸ್ತಕದಲ್ಲಿನ ಎಲ್ಲ ಕವಿತೆಗಳು ಆಪ್ತ ಎನಿಸುತ್ತವೆ. ಹೂವಿನ ಹಾಗೆ ಅರಳಿ ಸುಗಂಧ ಸೂಸುತ್ತವೆ.

ಈ ಸಂದರ್ಭ ಪತ್ರಕರ್ತ ಪರಶುರಾಮ ಬಾಸಗಿ ಮಾತನಾಡಿ, ಬಯಕೆಯ ಬಳ್ಳಿಯ ಪುಸ್ತಕದಲ್ಲಿನ ಮಾಯೆಯ ಮರಳು ಕವನಗಳ ಸಾಲುಗಳನ್ನು ಓದುವ ಮೂಲಕ, ಓದುವ ಹವ್ಯಾಸ ಬೆಳೆಸಿಕೊಂಡರೆ ಜ್ಞಾನ ಹೆಚ್ಚುತ್ತವೆ. ಕವಿತೆಗಳು ಭಾವನೆಗಳ ಪ್ರತಿಬಿಂಬವಾಗಿವೆ ಎಂದು ಪುಸ್ತಕದ ಸಾರ ಸತ್ವದ ಕುರಿತಾಗಿ ಅವರು ವಿವರಿಸಿದರು.

ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಬಸನಗೌಡ ಪಾಟೀಲ ಮಾತನಾಡಿ, ಹೂ ಬಳ್ಳಿಗಳ ಸಂರಕ್ಷಿಸುವ ಕಾರ್ಯದಲ್ಲಿ ಸಾಹಿತ್ಯ ರಚನೆಯ ಹೂ ಹಣ್ಣು ನೀಡುವ ಮೂಲಕ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಹೇಳದರು. ಈ ಸಂದರ್ಭದಲ್ಲಿ ಸಂಗೀತಾ ರಾ. ತೇಲಿ ಮಾತನಾಡಿ, ನನ್ನ ಬಯಕೆಯ ಬಳ್ಳಿ ಕವನ ಚೊಚ್ಚಲ ಕವನ ಸಂಕಲನವಾಗಿದ್ದು, ಈ ಕೃತಿಯಲ್ಲಿ ನನ್ನ ಮನದಾಳದ ಭಾವನೆಗಳ ಜೊತೆಗೆ ಬದುಕಿನ ವಿವಿಧ ಅನುಭವ, ನೋವುಗಳು ಪ್ರತಿಬಿಂಬಿಸಿರುವೆ. ಅದರಂತೆ ಜೀವನದಲ್ಲಿ ಸಣ್ಣ ಕ್ಷಣಗಳು, ಪ್ರಕೃತಿಯ ಸೌಂದರ್ಯ, ಮತ್ತು ಮಾನವ ಸಂಬಂಧಗಳು ಬರೆಯಲು ಪ್ರೇರಣೆ ನೀಡಿವೆ. ಎಂದರು.

ಈ ಸಂದರ್ಭದಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಭಗವಂತ ಜಿಗಜಿಣಗಿ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದಶಕರಾದ ಅರವಿಂದ ಹೂಗಾರ, ಅಮರೇಶ ದೊಡಮನಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀಮತಿ ಶಾಲಿನಿ ಎಸ್. ತಳಕೇರಿ, ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಹೀಟ್ ವೇವ್ ಗೆ ಸಜ್ಜಾದ ವಿಜಯಪುರ ಜಿಲ್ಲಾಸ್ಪತ್ರೆ..!

ವರ್ತಮಾನ–ವಿಜಯ

● ಮಧೂರ ತಿಳಗೂಳಕರ
ಜಿಲ್ಲಾ ವರದಿಗಾರರು

ವಿಜಯಪುರ ಜಿಲ್ಲೆಯಲ್ಲಿ ಈ ಬಾರಿ ತಾಪಮಾನ ಏರಿಕೆಯಾಗುತ್ತಿದ್ದು, ಸಂಭಾವ್ಯ 'ಹೀಟ್ ವೇವ್' (ಶಾಖದ ಅಲೆ) ಎದುರಿಸಲು ವಿಜಯಪುರ ಜಿಲ್ಲಾಸ್ಪತ್ರೆ ಸಂಪೂರ್ಣ ಸಜ್ಜಾಗಿದೆ.

ಹೌದು ಈ ಬಾರಿ ಶಾಖದ ಅಲೆ ಎದುರಿಸಲು ಸಜ್ಜಾದ ವಿಜಯಪುರ ಜಿಲ್ಲಾಸ್ಪತ್ರೆ ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಸಕಲ ಸಿದ್ಧತೆ ಮಾಡಿಕೊಂಡಿದೆ.

ಗುಮ್ಮಟನಗರಿ ವಿಜಯಪುರದಲ್ಲಿ ಸೂರ್ಯನ ತಾಪ ದಿನದಿಂದ ದಿನಕ್ಕೆ ಏರುತ್ತಿದೆ. ಮುಂದಿನ ದಿನಗಳಲ್ಲಿ ಶಾಖದ ಅಲೆ (HeatWave) ಉಂಟಾಗುವ ಮುನ್ಸೂಚನೆ ಇರುವುದರಿಂದ, ಯಾವುದೇ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಜಿಲ್ಲಾಡಳಿತ ಹಾಗೂ ಜಿಲ್ಲಾ ಆಸ್ಪತ್ರೆಯು ಸಮರೋಪಾದಿಯಲ್ಲಿ ಸಿದ್ಧತೆ ಮಾಡಿಕೊಂಡಿದ್ದು , ಮಹಾನಗರ ಪಾಲಿಕೆಯಿಂದ ಪ್ರಮುಖ ರಸ್ತೆಗಳ ಸಿಗ್ನಲ್ ನಲ್ಲಿ ವಾಹನ ಸವಾರರಿಗೆ ಟೆಂಟ್ ವ್ಯವಸ್ಥೆ ಸಹ ಮಾಡಲಾಗಿದ್ದು ವಾಹನ ಸವಾರರಿಗೆ ಅನುಕೂಲವಾಗಿದೆ

ವಿಜಯಪುರ ಜಿಲ್ಲಾಸ್ಪತ್ರೆಯಲ್ಲಿ ಪ್ರತ್ಯೇಕ 'ಹೀಟ್ ಸ್ಟ್ರೋಕ್' ವಾರ್ಡ್ ಸ್ಥಾಪನೆ ಮಾಡಲಾಗಿದ್ದು, ಬಿಸಿಲಿನ ಬೇಗೆಯಿಂದ ಅಸ್ವಸ್ಥರಾಗುವವರಿಗಾಗಿ ಜಿಲ್ಲಾಸ್ಪತ್ರೆಯಲ್ಲಿ ವಿಶೇಷ 'ಹೀಟ್ ಸ್ಟ್ರೋಕ್ ಘಟಕವನ್ನು ತೆರೆಯಲಾಗಿದೆ. ಈ ವಾರ್ಡ್‌ನಲ್ಲಿ ತಂಪು ವಾತಾವರಣವಿರಲು ಎಸಿ ವ್ಯವಸ್ಥೆ ಮಾಡಲಾಗಿದ್ದು , ಅಸ್ವಸ್ಥರಾದವರಿಗೆ ತಕ್ಷಣ ಚಿಕಿತ್ಸೆ ನೀಡಲು ಪ್ರತ್ಯೇಕ ಹತ್ತು ಹಾಸಿಗೆಗಳನ್ನು ಒಳಗೊಂಡ ವಿಶೇಷ ಕೊಠಡಿಯನ್ನು ಕಾಯ್ದಿರಿಸಲಾಗಿದೆ. ಔಷಧಿ ಮತ್ತು ಸಲಕರಣೆಗಳ ಲಭ್ಯತೆ ಶಾಖದ ಹೊಡೆತಕ್ಕೆ ಒಳಗಾದವರಿಗೆ ನಿರ್ಜಲೀಕರಣ (Dehydration) ಸಾಮಾನ್ಯ ಸಮಸ್ಯೆ. ಇದನ್ನು ತಡೆಗಟ್ಟಲು ಧಾರಾಳವಾಗಿ ಔಖಖ ಪ್ಯಾಕೆಟ್‌ಗಳ ದಾಸ್ತಾನು, ಅಗತ್ಯವಿರುವ ಐವಿ ಫ್ಲೂಯಿಡ್ಸ್ (IV Fluids) ಮತ್ತು ಜೀವರಕ್ಷಕ ಔಷಧಿಗಳನ್ನು ಸಿದ್ಧವಾಗಿಡಲಾಗಿದೆ. ರೋಗಿಗಳ ದೇಹದ ತಾಪಮಾನ ಇಳಿಸಲು ಅಗತ್ಯವಿರುವ ಐಸ್ ಪ್ಯಾಕ್‌ಗಳು ಮತ್ತು ಕೋಲ್ಡ್ ಸ್ಟೋರೇಜ್ ಸೌಲಭ್ಯವನ್ನು ಹೆಚ್ಚಿಸಲಾಗಿದ್ದು ತಜ್ಞ ವೈದ್ಯರ ನಿಯೋಜನೆ ಮಾಡಲಾಗಿದೆ.

ಬಿಸಿಲಿನ ಸಂಬಂಧಿತ ಕಾಯಿಲೆಗಳಾದ ಅತಿಯಾದ ಸುಸ್ತು, ತಲೆತಿರುಗುವಿಕೆ ಮತ್ತು ಮೂರ್ಛೆ ಹೋಗುವ ಪ್ರಕರಣಗಳನ್ನು ತಜ್ಞ ವೈದ್ಯರು ಹಾಗೂ ಶುಶ್ರೂಷಕರ ತಂಡವನ್ನು ದಿನದ 24 ಗಂಟೆಯೂ ಲಭ್ಯವಿರುವಂತೆ ನಿಯೋಜಿಸಲಾಗಿದ್ದು, ತುರ್ತು ಚಿಕಿತ್ಸಾ ಘಟಕಕ್ಕೆ (Casualty) ಬರುವ ಇಂತಹ ಪ್ರಕರಣಗಳಿಗೆ ಮೊದಲ ಆದ್ಯತೆ ನೀಡಲು ಸೂಚಿಸಲಾಗಿದೆ. ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಅವರ ಸಂಬಂಧಿಕರಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡಲಾಗಿದೆ.

ಜಿಲ್ಲಾಸ್ಪತ್ರೆಯಲ್ಲಿ ಪ್ರತ್ಯೇಕ 'ಹೀಟ್ ಸ್ಟ್ರೋಕ್' ವಾರ್ಡ್ ಸ್ಥಾಪನೆ ಮಾಡಲಾಗಿದ್ದು ಸಕಲ ಸಿದ್ಧತೆ ಮಾಡಲಾಗಿದೆ. ಈವರೆಗೆ ಯಾವುದೇ ತರಹದ ಹೀಟ್ ಸ್ಟ್ರೋಕ್ ಪ್ರಕರಣಗಳು ದಾಖಲಾಗಿಲ್ಲ. ಆದಷ್ಟು ಸಾರ್ವಜನಿಕರು ಕಾಳಜಿ ವಹಿಸುವುದು ಉತ್ತಮ ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಅವರ ಸಂಬಂಧಿಕರಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡಲಾಗಿದೆ ಎಂದು ಡಾ.ಶಿವಾನಂದ ಮಾಸ್ತಿಹೊಳಿ, ಜಿಲ್ಲಾ ಶಸ್ತ್ರಚಿಕಿತ್ಸಕರು ತಿಳಿಸಿದ್ದಾರೆ.

ಜಿಲ್ಲಾಡಳಿತ ಮತ್ತು ಜಿಲ್ಲಾ ಆರೋಗ್ಯ ಇಲಾಖೆಯ ಸಲಹೆಗಳು: ಮಧ್ಯಾಹ್ನ 12 ರಿಂದ 4 ಗಂಟೆಯವರೆಗೆ ಅನಗತ್ಯವಾಗಿ ಹೊರಗೆ ಹೋಗಬೇಡಿ, ಹೆಚ್ಚು ನೀರು, ಮಜ್ಜಿಗೆ ಮತ್ತು ಎಳನೀರನ್ನು ಸೇವಿಸಿ. ತಿಳಿ ಬಣ್ಣದ ಹತ್ತಿ ಬಟ್ಟೆಗಳನ್ನು ಧರಿಸಿ.ಮಕ್ಕಳು, ವೃದ್ಧರು ಮತ್ತು ಗರ್ಭಿಣಿಯರು ಬಿಸಿಲಿನ ಬಗ್ಗೆ ಹೆಚ್ಚಿನ ಜಾಗ್ರತೆ ವಹಿಸಿ ಎಂದು ತಿಳಿಸಿದೆ. ಒಟ್ಟಾರೆಯಾಗಿ, ವಿಜಯಪುರ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆಯು ತಾಂತ್ರಿಕವಾಗಿ ಹಾಗೂ ವೈದ್ಯಕೀಯವಾಗಿ ಶಾಖದ ಅಲೆಯನ್ನು ಎದುರಿಸಲು ಸನ್ನದ್ಧವಾಗಿದ್ದು ಸಾರ್ವಜನಿಕರು ಗಾಬರಿಯಾಗದೆ, ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವ ಮೂಲಕ ಸಹಕರಿಸಬೇಕಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)